Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–47 | ನವೆಂಬರ್ 18–24, 2024 | ಪುಟ 16 | ರೂ.10/–
Volume-18 | Issue-47 | November 18-24, 2024 | Pages:16 | Price: 10/-

ಮಹಾರಾಷ್ಟ್ರ: ಇಂಡಿಯಾ ಕೂಟ ಜಯಭೇರಿ ಬಾರಿಸುವುದೇ?





ಶ್ರೀಲಂಕಾ ಸಂಸತ್ ಚುನಾವಣೆ: ಎಡಪಂಥೀಯ ರಾಜಕಾರಣದ ಮುನ್ನಡೆಯ ಮತ್ತೊಂದು ಹೆಜ್ಜೆ

ಉಪ ಚುನಾವಣೆಯಲ್ಲಿ ನಡೆದದ್ದೇನು?

ಕೊರೋನ ಕಾಲದ ಹಗರಣ: 'ಬೆಂದ ಮನೆಯಲ್ಲಿ ಗಳ ಹಿರಿದ' ನಾಯಕ ಗಣ

ಹಿಂದುತ್ವ ಮತ್ತು ಉನ್ನತ ನ್ಯಾಯಾಂಗ

ವೈಷ್ಣವರಾಗಿ ಪರಿವರ್ತನೆಗೊಂಡ ಮಾರ್ವಾಡಿಗಳ ದೇಶವ್ಯಾಪಿ ವಿಸ್ತರಣೆ

ಭಾಗ 5

ಜಿ.ಎನ್. ನಾಗರಾಜ್

ಯಾವುದೇ ವಿಷಯವನ್ನು, ಅದಕ್ಕೆ ಸಂಬಂಧಿಸಿದ ಮತ್ತೊಂದು ವಿಷಯದ ಜೊತೆಗೆ ತುಲನೆ ಮಾಡಿ ವಿಶ್ಲೇಷಿಸಿದಾಗ ಮಾತ್ರ ಅದರ ಎಲ್ಲ ಆಯಾಮಗಳೊಂದಿಗೆ ಸಮಗ್ರವಾಗಿ, ಆಳವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಇದು ಮಾನವ ಕುಲ ಲಕ್ಷಾಂತರ ವರ್ಷಗಳಿಂದ ಉಪಯೋಗಿಸುತ್ತಾ ಬಂದ ವಿಧಾನ.

ಹಾಗೆಯೇ ಟಾಟಾಗಳ, ಅವರ ಪಾರ್ಸಿ ಸಮುದಾಯ ಕಾರ್ಪೊರೇಟ್ ಸಾಮ್ರಾಜ್ಯಗಳ ಬೆಳವಣಿಗೆಯ ವಿಧಾನ ಮತ್ತು ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅವರಷ್ಟೇ ಬೃಹತ್ತಾಗಿ ಬೆಳೆದ ಬಿರ್ಲಾ ಮತ್ತು ಅವರ ಮಾರ್ವಾಡಿ ಕಾರ್ಪೊರೇಟ್ ಸಾಮ್ರಾಜ್ಯಗಳ ಜೊತೆ ತುಲನೆ ಅವಶ್ಯ.

ಇದೇ ರೀತಿ ಮತ್ತೊಂದು ಸಮುದಾಯವೆಂದರೆ ಮಹೀಂದ್ರ ಮಹೀಂದ್ರ, ಒಬೆರಾಯ್, ಥಾಪರ್ ಮೊದಲಾದವರನ್ನು ಒಳಗೊಂಡ ಪಂಜಾಬಿನ ಖತ್ರಿಗಳೆಂಬ ವ್ಯಾಪಾರಿ ಸಮುದಾಯ.

ಅಂಬಾನಿ, ಅದಾನಿ, ವಿಪ್ರೋ, ಗೊದ್ರೆಜ್, ನಿರ್ಮಾ ಮೊದಲಾದ ಕಾರ್ಪೊರೇಟ್ ಸಾಮ್ರಾಜ್ಯಗಳನ್ನು ಒಳಗೊಂಡ ಗುಜರಾತಿಗಳು. ಇವರೆಲ್ಲರೂ ಕೂಡಾ ಪಶ್ಚಿಮ ಭಾರತದ ಪ್ರದೇಶಗಳಿಗೆ ಸೇರಿದವರು ಹಾಗೂ ಹೆಚ್ಚಾಗಿ ಬನಿಯಾ / ವೈಶ್ಯ ವರ್ಣಕ್ಕೆ ಸೇರಿದವರು ಎಂಬುದು ವಿಶೇಷ. ಭಾರತದ ಅತಿ ದೊಡ್ಡ ಕಾರ್ಪೊರೇಟ್ ಸಾಮ್ರಾಜ್ಯಗಳಲ್ಲಿ ಕೆಲವೇ ಕೆಲ ಕೈಬೆರಳಿನ ಸಂಖ್ಯೆಯಷ್ಟು ಕಾರ್ಪೊರೇಟ್‌ಗಳು ಮಾತ್ರ ಭಾರತದ ಉಳಿದೆಲ್ಲ ರಾಜ್ಯಗಳ ಮೂಲದವರು.

ಆದ್ದರಿಂದ ಭಾರತದ ಬಂಡವಾಳಶಾಹಿ ಬೆಳವಣಿಗೆಯ ವಿಧಾನವನ್ನು ಅರ್ಥಮಾಡಿಕೊಳ್ಳಲು ಜಾತಿಯ ಜೊತೆಗೆ ಪ್ರಾದೇಶಿಕ ಅಂಶಗಳೆರಡನ್ನೂ ಒಟ್ಟಿಗೆ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ.

ಇಂದು ನಾವು ಉಪಯೋಗಿಸುವ ಹಲವಾರು ವಸ್ತುಗಳನ್ನು ತಯಾರಿಸುವ ಏಕಸ್ವಾಮ್ಯ ಕಾರ್ಪೊರೇಟ್ ಕಂಪನಿಗಳಾದ ಬಿರ್ಲಾಗಳು, ಬಜಾಜ್, ಜಿಂಡಾಲ್, ಗೊಯೆಂಕಾ ಖೈತಾನ್, ಅಗರ್‌ವಾಲ್, ಪೊದ್ದಾರ್, ಒಸ್ವಾಲ್‌ಗಳೆಲ್ಲ ಮಾರ್ವಾಡಿ ಬನಿಯಾ ಮೂಲದವರು.

ಮಾರವಾರ್/ ಮಾರ್ವಾಡ ಎಂಬುದು ರಾಜಸ್ಥಾನದ ಒಂದು ಪ್ರದೇಶ. ಈ ಪ್ರದೇಶದ ಎಲ್ಲ ಜನರೂ ಮಾರವಾಡಿಗಳೇ ಆದರೂ ಆ ಹೆಸರಿನಿಂದ ಇಡೀ ದೇಶದಲ್ಲಿ ಪ್ರಸಿದ್ಧರಾಗಿರುವವರು ಮಾರವಾರದ ಬನಿಯಾ ಅಥವಾ ವ್ಯಾಪಾರಿಗಳು ಮಾತ್ರ.

ಮಾರ್ವಾಡ ಎಂಬುದು ರಾಜಾಸ್ಥಾನ ರಾಜ್ಯದ ಜೋಧ್‌ಪುರ, ಪಾಲಿ, ಜಾಲೋರ್, ನಾಗೋರ್, ಬಾರ್ಮೆರ್, ಝುಂಝುನು, ಬಿಕಾನೆರ್, ಜೈಸಲ್ಮೇರ್ ಮೊದಲಾದ ಜಿಲ್ಲೆಗಳು ಸೇರಿದ ಪ್ರದೇಶ.

ಮಾರ್ವಾಡಿಗಳ ವ್ಯಾಪಾರ ವೃದ್ಧಿಸಿತು

ಅಹಮದಾಬಾದ್‌ನ ಐಐಎಂನಲ್ಲಿ ಉನ್ನತ ತರಬೇತಿಯ ಭಾಗವಾಗಿ ಅಧ್ಯಯನ ವರದಿ ತಯಾರಿಸಲು ಈ ಪ್ರದೇಶದಲ್ಲಿ ಪ್ರವಾಸ ಮಾಡಿದ್ದೆ. ಈ ಪ್ರದೇಶದ ಹಲವು ಜಿಲ್ಲೆಗಳು ಮರುಭೂಮಿ. ಎಲ್ಲೋ ಕೆಲವೆಡೆ ಭಾವಿಗಳಿಂದ ನೀರಾವರಿ. ಉಳಿದೆಡೆ ವರ್ಷದ ಮುಕ್ಕಾಲು ಭಾಗ ಕುಡಿಯುವ ನೀರಿಗೂ ತತ್ವಾರ. ಇಂತಹ ಪ್ರದೇಶದಲ್ಲಿ ಕರಕುಶಲ ವಸ್ತುಗಳ ಉತ್ಪಾದನೆಯೇ ಬದುಕಿನ ಮುಖ್ಯ ಆಸರೆ. ಬಟ್ಟೆಯ ಮೇಲೆ ಚಿತ್ತಾರಗಳು, ರತ್ನಗಂಬಳಿಗಳು, ಇತ್ಯಾದಿ ಕರಕುಶಲ ವಸ್ತುಗಳು ಹಿಂದಿನ ಕಾಲದಲ್ಲಿ ಉತ್ತರ ಭಾರತ, ಇರಾನ್, ಮಧ್ಯ ಏಷಿಯಾದವರೆಗೆ ಪಯಣಿಸುತ್ತಿದ್ದವು.

ಅಂದು ಗುಜರಾತಿನ ಬಂದರುಗಳು ಇರಾನ್, ಅರಬ್, ಆಫ್ರಿಕಾ ಖಂಡದ ದೇಶಗಳ ಜೊತೆ, ಅರಬ್ ವ್ಯಾಪಾರಿಗಳ ಮೂಲಕ ಅಲ್ಲಿಂದ ಮುಂದೆ ಯುರೋಪ್ ದೇಶಗಳಿಗೂ ಭಾರತದ ಹತ್ತಿ ಹಾಗೂ ರೇಷ್ಮೆಬಟ್ಟೆ, ಕರಕುಶಲ ವಸ್ತುಗಳು ಇತ್ಯಾದಿ ಮಾರಲ್ಪಡುತ್ತಿತ್ತು. ಈ ಪ್ರದೇಶಗಳಿಂದ ಆಮದಾದ ಹಲವು ವಸ್ತುಗಳು ಹಾಗೂ ಗುಜರಾತ್ ಮತ್ತು ಮಹಾರಾಷ್ಟ್ರದ ಹಲವು ತಯಾರಿಕೆಗಳು, ಕೃಷಿ ವಸ್ತುಗಳು ಆಗ್ರಾ, ವಾರಾಣಸಿ, ದೆಹಲಿ ಮೊದಲಾದ ಪ್ರದೇಶಗಳಿಗೆ ಸಾಗಾಣಿಕೆಯಾಗಿ ಅಲ್ಲಿಂದ ಇರಾನ್ ತುರ್ಕಿ, ಮಧ್ಯ ಏಷಿಯಾದ ದೇಶಗಳು, ರಷ್ಯಾಗಳಿಗೆ ಪಯಣ ಬೆಳೆಸುತ್ತಿದ್ದವು. ಮಾರವಾಡ, ಪಂಜಾಬ್ ಮೂಲಕ ಮುಖ್ಯ ವ್ಯಾಪಾರಿ ಭೂ ಮಾರ್ಗಗಳು ಹಾದು ಹೋಗುತ್ತಿದ್ದವು. ಗುಜರಾತ್, ಮಾರವಾಡ, ಪಂಜಾಬ್‌ಗಳ ವ್ಯಾಪಾರಿ ವರ್ಗ ಬಲಿಷ್ಠವಾದವು.

ವ್ಯಾಪಾರದ ಬೆಳವಣಿಗೆ ಈ ಪ್ರದೇಶದ ಉತ್ಪಾದನಾ ವ್ಯವಸ್ಥೆಯ ಮೇಲೆ ಬದಲಾವಣೆಯ ಒತ್ತಡವನ್ನು ಹೇರಿತು. ವ್ಯಾಪಾರಿ ವರ್ಗ ಕರಕುಶಲ ಕೆಲಸಗಾರರ ಉತ್ಪಾದನೆಗಳನ್ನು ಕೊಳ್ಳುವುದು, ಅವರಿಗೆ ಮುಂಗಡ ಸಾಲ ನೀಡುವುದು ಇತ್ಯಾದಿ ಅವಶ್ಯವಾಯಿತು. ಈ ಪ್ರದೇಶದ ಸಂಪತ್ತು ಹೆಚ್ಚಿತು.



ಸರ್ಕಾರದ ಸ್ವರೂಪವೇ ಬದಲಾಯಿತು


ಅದರ ಪರಿಣಾಮವಾಗಿ ಜೋಧಪುರ ಕೇಂದ್ರವಾಗಿ ಮಾರವಾಡ ಪ್ರದೇಶದ ಸ್ವತಂತ್ರ ರಾಜಪುತ್ರ ಸಂಸ್ಥಾನ ಸ್ಥಾಪನೆಗೊಂಡಿತು. ನಂತರದ ದಶಕಗಳಲ್ಲಿ ಈ ಸಂಸ್ಥಾನಕ್ಕೆ ಮುಖ್ಯ ಆದಾಯವೇ ಕರಕುಶಲ ಕೆಲಸಗಾರರಿಂದ ವಸೂಲಿ ಮಾಡುತ್ತಿದ್ದ ತೆರಿಗೆ ಮತ್ತು ವ್ಯಾಪಾರಿಗಳು ತೆರುತ್ತಿದ್ದ ತೆರಿಗೆ. ಕರಕುಶಲ ಕೆಲಸಗಾರರಿಗೆ ವ್ಯಾಪಾರಿಗಳು ನೀಡುತ್ತಿದ್ದ ಮುಂಗಡ, ಸಾಲಗಳಿಂದಲೇ ಆ ಕೆಲಸಗಾರರು ತಮ್ಮ ತೆರಿಗೆಯನ್ನು ತೆರುತ್ತಿದ್ದುದು. ಜೊತೆಗೆ ಕರಕುಶಲ ಕೆಲಸಗಾರರ ಉತ್ಪಾದನೆಯ ಆಧಾರದ ಮೇಲೆ ಅವರು ತೆರಬೇಕಾದ ತೆರಿಗೆಗಳನ್ನು ಸರಿಯಾಗಿ ಲೆಕ್ಕಿಸಲು ಅವರ ಉತ್ಪಾದನೆಯ ಬಹು ಭಾಗವನ್ನು ಕೊಳ್ಳುತ್ತಿದ್ದ ವ್ಯಾಪಾರಿಗಳಲ್ಲದೆ ಬೇರಾರಿಗೆ ಸಾಧ್ಯ. ಆದ್ದರಿಂದ ಈ ತೆರಿಗೆ ವಸೂಲಿಗೆ ವ್ಯಾಪಾರಿಗಳೇ ಉತ್ತಮ ಸಾಧನವಾದರು. ವ್ಯಾಪಾರಿಗಳು ಸ್ವತಃ ತೆರುತ್ತಿದ್ದ ತೆರಿಗೆ, ಅವರು ವಸೂಲಿ ಮಾಡುತ್ತಿದ್ದ ತೆರಿಗೆ ಇವುಗಳಿಂದ ವ್ಯಾಪಾರಿಗಳೇ ಈ ಸಂಸ್ಥಾನಗಳ ಮುಖ್ಯ ಆಧಾರವಾದರು. ಬೆಳೆಯುತ್ತಿದ್ದ ವ್ಯಾಪಾರವನ್ನು ದರೋಡೆಗಾರರಿಂದ ರಕ್ಷಿಸುವುದಕ್ಕಾಗಿ ಖಾಯಂ ಸೈನ್ಯ ಅವಶ್ಯವಾಯಿತು. ಅಲ್ಲಿಯವರೆಗೆ ರಾಜನ ಬಳಿ ತನ್ನ ಮತ್ತು ಅರಮನೆಯ ರಕ್ಷಣೆಗೆ ಬೇಕಾದ ಸ್ವಂತ ಸೈನ್ಯ ಬಲವಲ್ಲದೆ ಇತರ ಸೈನ್ಯವೆಲ್ಲ ಮಾಂಡಲಿಕರ ಬಳಿ ಇರುತ್ತಿತ್ತು. ಅವರೇ ಅದರ ದೇಖರೇಖಿ ನೋಡಿಕೊಳ್ಳುತ್ತಿದ್ದರು. ಆದರೆ ಈಗ ರಾಜನ ನೇರ ಹಿಡಿತದಲ್ಲಿನ ಖಾಯಂ ಸೈನ್ಯಕ್ಕಾಗಿ ಮಾಂಡಲಿಕರ ಬದಲಾಗಿ ರಾಜನೇ ನೇರ ತೆರಿಗೆ ಪಡೆಯುವ ವ್ಯವಸ್ಥೆ ರೂಪಿಸಬೇಕಾಯಿತು. ಇಂತಹ ರಾಜ್ಯಾಡಳಿತ ವ್ಯವಸ್ಥೆಗೆ ಅಬ್‌ಸೊಲ್ಯೂಟ್ ಮಾನಾರ್ಕಿ ಎಂದು ಕರೆಯಲಾಗಿದೆ. ಮೈಸೂರು ಸಂಸ್ಥಾನದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಪಾಳೆಯಗಾರರನ್ನು ಸೋಲಿಸಿ ಅಥವಾ ಕಿತ್ತು ಹಾಕಿ ಇಂತಹ ಆಡಳಿತವನ್ನು ಸ್ಥಾಪಿಸಿದರು ಎಂಬುದನ್ನು ನೆನಪಿಸಿಕೊಳ್ಳೋಣ.

ಹೀಗೆ ವ್ಯಾಪಾರ, ಕುಶಲ ಕೆಲಸದ ವಸ್ತುಗಳ ಪ್ರಾಮುಖ್ಯತೆ ಹೊಸ ಆಡಳಿತ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದಿತು. ಈ ಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಸಲುವಾಗಿ ಆಡಳಿತ ಸಿಬ್ಬಂದಿ ಹೆಚ್ಚಳಗೊಂಡಿತು, ಅಧಿಕಾರಶಾಹಿ ಬಲಗೊಂಡಿತು. ಈ ಸ್ಥಾನಗಳನ್ನು ಆವರಿಸಿದವರಲ್ಲಿ ವ್ಯಾಪಾರಿಗಳದು ಮೊದಲನೇ ಸ್ಥಾನವಾದರೆ, ಎರಡನೇ ಸ್ಥಾನ ಬ್ರಾಹ್ಮಣರದು.ವ್ಯಾಪಾರ ಹಾಗೂ ಉತ್ಪಾದನೆಯ ವಿಸ್ತರಣೆ ರಾಜ್ಯಾಡಳಿತದ ಸ್ವರೂಪದಲ್ಲಿ ಮಾತ್ರವಲ್ಲ ಧಾರ್ಮಿಕ ಸಿದ್ಧಾಂತ ಮತ್ತು ಆಚರಣೆಗಳಲ್ಲಿ ಕೂಡ ಬದಲಾವಣೆಗೆ ಕಾರಣವಾಯಿತು. ಅದನ್ನು ಮುಂದೆ ನೋಡೋಣ.

ವ್ಯಾಪಾರಿಗಳಿಗೆ ರಾಜ್ಯಾಡಳಿತ– ದಿವಾನ ಪದವಿ

ಈ ಆಡಳಿತ ಪ್ರಕ್ರಿಯೆಗಳ ಪರಿಣಾಮವಾಗಿ ಮಾರವಾಡ ಮತ್ತು ಇತರ ಪ್ರದೇಶದಲ್ಲಿ ರಾಜರುಗಳು ವ್ಯಾಪಾರಿಗಳನ್ನು ಆಡಳಿತದ ಮುಖ್ಯ ಸ್ಥಾನವಾದ ದಿವಾನ್ ಪದವಿ, ಭಕ್ಷಿ ಮತ್ತಿತರ ಮಂತ್ರಿ ಸ್ಥಾನ, ತೆರಿಗೆ ಸಂಗ್ರಹಣೆಯ ಉಸ್ತುವಾರಿ ಮಾತ್ರವಲ್ಲದೆ ವಿವಿಧ ಜಿಲ್ಲೆಗಳ ಕಂದಾಯ, ತೆರಿಗೆ ಸಂಗ್ರಹವನ್ನು ವಹಿಸಿಕೊಳ್ಳುವವರಾಗಿ, ಆಡಳಿತ ಪ್ರಮುಖರಾಗಿ ಕೂಡಾ ಗಣನೀಯವಾಗಿ ನೇಮಿಸಿಕೊಂಡರು. ಈ ವಿಸ್ತರಣೆಯಿಂದ ಬ್ರಾಹ್ಮಣರಿಗೂ ಹೆಚ್ಚು ಸ್ಥಾನಗಳು ದೊರಕಿದವು. ಆದರೆ ವ್ಯಾಪಾರಿ ವರ್ಗದ ನಂತರದ ಸ್ಥಾನ. ಇದು ಭಾರತದ ಬೇರೆ ರಾಜ ಸಂಸ್ಥಾನಗಳಿಗೆ ಹೋಲಿಸಿದರೆ ಬಹಳ ವಿಶೇಷವಾದ ಸಂಗತಿ. ಕೃಷಿ, ಭೂಕಂದಾಯಕ್ಕಿಂತಲೂ ವಾಣಿಜ್ಯ ತೆರಿಗೆ, ಕುಶಲ ವಸ್ತುಗಳ ಮೇಲಿನ ತೆರಿಗೆಗಳಿಂದ ಹೆಚ್ಚು ಆದಾಯ ಪಡೆಯುತ್ತಿದ್ದುದರ ಪರಿಣಾಮವೆಂದು ಕಾಣುತ್ತದೆ. ಜೋಧಪುರ ಸಂಸ್ಥಾನದ ಕೆಲ ನಗರಗಳಲ್ಲಿ ಶೇ.30–40 ರಷ್ಟು ವ್ಯಾಪಾರಿಗಳಿದ್ದರೆಂದರೆ ರಾಜ್ಯದ ಆರ್ಥಿಕತೆಯಲ್ಲಿ ಅವರ ಪಾತ್ರದ ಪ್ರಮಾಣವನ್ನು ಊಹಿಸಬಹುದು. ಇಂತಹ ಹಣ ಗಳಿಕೆಯಿಂದ ಮಾರ್ವಾಡಿ ವ್ಯಾಪಾರಿಗಳಿಗೆ ರಜಪೂತ ಪಾಳೆಯಗಾರರು, ರಾಜರುಗಳಿಗೂ ಅವರ ವೈಭವಗಳ, ಯುದ್ಧಗಳ ವೆಚ್ಚಕ್ಕೆ ಸಾಲ ನೀಡುವ ಸ್ಥಿತಿಗೆ ಬಂದರು.

ಇಂತಹುದೇ ಪ್ರಕ್ರಿಯೆ ರಾಜಸ್ಥಾನದ ಇನ್ನೂ ಕೆಲವು ಸಂಸ್ಥಾನಗಳಲ್ಲೂ ಕಾಣಬರುತ್ತದೆ. ಹಾಗೆಯೇ ಪಂಜಾಬಿನಲ್ಲಿ ಕೂಡಾ ಖತ್ರಿ ವ್ಯಾಪಾರಿಗಳು ದಿವಾನ ಇತ್ಯಾದಿ ಪದವಿಗಳನ್ನು ವಹಿಸಿಕೊಂಡಿದ್ದಾರೆ.



ಮಾರವಾಡ ಪ್ರದೇಶವನ್ನು ಮಾರಾಠರು ವಶಪಡಿಸಿಕೊಳ್ಳಲೆತ್ನಿಸಿದಾಗ ಮಾರ್ವಾಡಿ ವ್ಯಾಪಾರಿಗಳಿಗೆ ಮರಾಠ ಸಂಸ್ಥಾನಗಳೊಡನೆ ಹೆಚ್ಚು ಸಂಪರ್ಕ ಬಂದಿತು. ಈಗಿನ ಮಧ್ಯಪ್ರದೇಶದ ಹಲವು ಮರಾಠ ಸಂಸ್ಥಾನಗಳಲ್ಲಿ ವ್ಯಾಪಾರ, ಸಾಲ ನೀಡುವುದು ಮುಂತಾದವುಗಳನ್ನು ಆರಂಭಿಸಿದರು.

ಮೊಘಲರ ಎರಡು ಶತಮಾನಗಳ ಆಳ್ವಿಕೆ ವ್ಯಾಪಾರದ ಬೆಳವಣಿಗೆಗೆ ಹಲವು ಅನುಕೂಲಗಳನ್ನು ಕಲ್ಪಿಸಿತು. ಒಂದು ಕಡೆ ವಿಶಾಲ ಪ್ರದೇಶದಲ್ಲಿ ಸ್ಥಿರವಾದ ಆಡಳಿತ. ಆ ಇಡೀ ಪ್ರದೇಶದಲ್ಲಿ ಒಂದೇ ರೀತಿಯ ನಾಣ್ಯ ಚಲಾವಣೆ, ಒಂದೇ ರೀತಿಯ ಅಳತೆ, ತೂಕ ಪದ್ಧತಿ ಇತ್ಯಾದಿ ವ್ಯಾಪಾರವನ್ನು ಈ ವಿಶಾಲ ಪ್ರದೇಶಗಳಿಗೆ ವಿಸ್ತರಿಸಲು ನೆರವಾದವು.

ಮೊಘಲರು ಮತ್ತು ರಜಪೂತರ ನಡುವೆ ಒಂದು ವಿಭಾಗಕ್ಕೆ ತೀವ್ರ ಸಂಘರ್ಷ, ಯುದ್ಧಗಳು. ಮೊಘಲ ಬಾದಶಾಗಳು ಯುದ್ಧಕ್ಕೆ ಹೊರಟರೆಂದರೆ ಅವರೊಡನೆ ರಾಣಿವಾಸ, ನೃತ್ಯಗಾತಿಯರು, ಹಲವು ಸೇವೆಗಳಿಗಾಗಿ ಸೇವಕ ವೃಂದ ಮೊದಲಾಗಿ ಒಂದು ನಗರವೇ ಚಲಿಸಿದಂತಿರುತ್ತಿತ್ತು. ಇಂತಹವುಗಳನ್ನು ಅಂದು ಭಾರತದಲ್ಲಿ ಪ್ರವಾಸ ಮಾಡಿದ ಬರ್ನಿಯರ್ ಟ್ರಾವರ್ನಿಯರ್ ಮೊದಲಾದ ಪ್ರವಾಸಿಗಳು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಇದು ವ್ಯಾಪಾರಿಗಳಿಗೆ ಹಬ್ಬವಾಗುವುದರ ಜೊತೆಗೆ ಎರಡೂ ಕಡೆಯ ನಾಯಕರಿಗೆ ಯುದ್ಧ ನಿರ್ವಹಿಸಲು ದುಬಾರಿ ಬಡ್ಡಿಯ ಸಾಲ ನೀಡುವುದು ದೊಡ್ಡ ಲಾಭದ ಸಂದರ್ಭ.

ರಜಪೂತರ ಮತ್ತೊಂದು ವಿಭಾಗ ಮೊಘಲರ ಜೊತೆ ರಾಜಿ ಮಾಡಿಕೊಂಡು ಅವರ ಸಾಮ್ರಾಜ್ಯದ ಭಾಗವಾದರು. ಅವರ ಆಡಳಿತದ, ಸೈನ್ಯದ ಮುಖ್ಯ ಸ್ಥಾನಗಳಿಗೆ ನೇಮಕವಾದರು. ಮೊಘಲ ಬಾದಾಶಾ ಮತ್ತಿತರ ಸರದಾರರ ಜೊತೆ ವಿವಾಹ ಸಂಬಂಧವನ್ನೂ ಬೆಳೆಸಿದರು. ಅಕ್ಬರನ ಹಿಂದೂ ರಾಣಿಯರಲ್ಲಿ ಮುಂದಿನ ಬಾದಶಾ ಜಹಾಂಗೀರ್‌ನ ತಾಯಿಯೂ ಸೇರಿದಂತೆ ಆರೇಳು ರಾಣಿಯರು ರಜಪೂತ ಕುಟುಂಬದವರು. ಅದರಲ್ಲಿ ಮೂರು ಜನರು ಮಾರವಾಡ ಪ್ರದೇಶದ ನಾಗೋರ್, ಬಿಕಾನೆರ್, ಜೈಸಲ್ಮೇರ್ ಗಳವರು. ಹೀಗೆ ಮೊಘಲ ಬಾದಶಾಗಳ ಆಡಳಿತದಲ್ಲಿ ಸ್ಥಾನ ಪಡೆದ ರಜಪೂತರ ಜೊತೆಗೆ ಮಾರ್ವಾಡಿ ವ್ಯಾಪಾರಿಗಳಿಗೂ ಮೊಘಲ ಆಡಳಿತದ ಪ್ರದೇಶಗಳಿಗೆ ಪ್ರವೇಶ ದೊರಕಿತು. ಪ್ರಸಿದ್ಧ ಕಂದಾಯ ಮಂತ್ರಿ, ಭೂ ಕಂದಾಯದ ಸುಧಾರಣೆಗಳ ಕರ್ತ ರಾಜಾ ತೋದರಮಲ್ ಒಬ್ಬ ಖತ್ರಿ.

ಹೀಗೆ ಯುದ್ಧ ಮತ್ತು ರಾಜಿಗಳೆರಡೂ ಮಾರ್ವಾಡಿಗಳಿಗೆ ತಮ್ಮ ವ್ಯಾಪಾರ, ವ್ಯವಹಾರವನ್ನು ಮಾರವಾರದ ಹೊರಕ್ಕೆ ಮೊಘಲರ ವಿಶಾಲ

ಪುಟ 4 ಕ್ಕೆ

ಕೊರೊನ ಕಾಲದ ಖರೀದಿ ಹಗರಣ: ‘ಬೆಂದ ಮನೆಯಲ್ಲಿ ಗಳ ಇರಿ’ ದಿರುವ ಬಿಜೆಪಿ ನಾಯಕ ಗಣ

ಸಂಪಾದಕೀಯ

ಕೊರೊನ ಸಂಕಷ್ಟದ ಕಾಲದಲ್ಲಿ ವ್ಯಾಪಕವಾದ ಆಭರಣಗಳು ನಡೆದಿವೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಕರ್ನಾಟಕದ ಸರ್ಕಾರ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ. ಕುನ್ಹಾ ಅವರ ನೇತೃತ್ವದ ತನಿಕ ಸಮಿತಿಯನ್ನ ನೇಮಿಸಲಾಗಿತ್ತು ಈ ಸಮಿತಿಯು ಮಧ್ಯಂತರ ವರದಿಯನ್ನ ನೀಡಿದ್ದು ಹಲವಾರು ಗಂಭೀರ ಪ್ರಕರಣಗಳನ್ನ ಹೊರ ತಂದಿದೆ.

ಕೊರೋನಾ ಕಾಲವು ಒಂದು ವೈದ್ಯಕೀಯ ತುರ್ತು ಪರಿಸ್ಥಿತಿಯಾಗಿತ್ತು. ರಾಜ್ಯದಲ್ಲಿ ಲಕ್ಷಾಂತರ ಜನತೆ ವೈದ್ಯಕೀಯ ಚಿಕಿತ್ಸೆ, ಸೌಲಭ್ಯಗಳು ದೊರಕದೇ ಜೀವನ್ಮರಣದ ಪರಿಸ್ಥಿತಿಯಲ್ಲಿ ಹೋರಾಡುತ್ತಿದ್ದರು. ಆಗ ಆಳುವ ಸರಕಾರಗಳು ಯುದ್ಧೋಪಾದಿಯಲ್ಲಿ ಧಾವಿಸಿ ಜನರ ಪ್ರಾಣಗಳನ್ನು ರಕ್ಷಿಸುವ ಅಗತ್ಯವಿತ್ತು. ಆಗ ಕೇಂದ್ರದಲ್ಲಿಯೂ, ಕರ್ನಾಟಕ ರಾಜ್ಯದಲ್ಲಿಯೂ ಅಧಿಕಾರದಲ್ಲಿ ಭಾರತೀಯ ಜನತಾ ಪಕ್ಷದ ಕೇಂದ್ರ ಮಂತ್ರಿಗಳು, ಸಂಸದರು, ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು, ನಾಯಕರುಗಳಿಗೆ ಜನರನ್ನು ರಕ್ಷಿಸುವುದು ಆದ್ಯತೆ ಆಗಿತ್ತು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಈ ಸನ್ನಿವೇಶವನ್ನು ತಮ್ಮ ವಿಕೃತ ಕೋಮುದ್ವೇಷವನ್ನು ಹರಡುವ ಒಂದು ಅತ್ಯುತ್ತಮ ಅವಕಾಶವಾನ್ನಾಗಿಸಲು ಹಲವು ಬಾರಿ ಯತ್ನಿಸಿದ್ದರು. ರಾಷ್ಟ್ರ ಮಟ್ಟದಲ್ಲಿ ತಬ್ಲೀಘೀ ಜಮಾತ್ ಸಂಸ್ಥೆಯ ಕಾರ್ಯಕ್ರಮವನ್ನೇ ನೆಪ ಮಾಡಿಕೊಂಡು ಹಸಿ ಹಸಿ ಮುಸ್ಲಿಮ್ ದ್ವೇಷ ಹರಡಲಾಯಿತು. ರಾಜ್ಯದಲ್ಲಿ ಬೆಂಗಳೂರಿನ ಬಿ.ಬಿ.ಎಂ.ಪಿ. ಕೊರೊನ ವಾರ್ ರೂಮ್ ನಲ್ಲಿ ಕೆಲಸ ಮಾಡುತ್ತಿದ್ದ ನೌಕರರಲ್ಲಿ ಮುಸ್ಲಿಮ್ ನೌಕರರ ಮೇಲೆ ವಿನಾ ಕಾರಣ ಧಾರ್ಮಿಕ ಪಕ್ಷಪಾತ, ಹಗರಣದ ಆರೋಪ ಹೊರಿಸಿ, ನಿಂದಿಸಿ ಕೆಲಸದಿಂದ ವಜಾ ಮಾಡಲಾಯಿತು. ಇಂತಹ ಕುತ್ಸಿದ್ದ ಪ್ರಯತ್ನಗಳ ಪರಿಣಾಮವಾಗಿ ಐಕ್ಯತೆಯಿಂದ ಜನತೆ ಸಂಕಷ್ಟದ ಸಂದರ್ಭವನ್ನು ಎದುರಿಸುವ ಬದಲು ಪರಸ್ಪರ ಅನುಮಾನ ಮತ್ತು ದ್ವೇಷ ವಿರೋಧದ ಮನೋಭಾವವನ್ನು ಬೆಳೆಸಿಕೊಂಡು ವಿಭಜಿತವಾಗುವ ಸಂದರ್ಭಗಳು ಸೃಷ್ಟಿಯಾಗಿದ್ದವು. ಇವು ಕೆಲವು ಉದಾಹರಣೆಗಳಷ್ಟೆ.

ಈ ದುಷ್ಟ ಕೋಮುವಾದಿ ಆಟಗಳು ತೆರೆಯ ಮುಂದೆ ನಡೆಯುತ್ತಿದ್ದರೆ, ತೆರೆಯ ಮರೆಯಲ್ಲಿ ನಡೆಯುತ್ತಿದ್ದುದೇ ಬೇರೆ ‘ಆಟ’. ಅದು ‘ಬೆಂದ ಮನೆಯಲ್ಲಿ ಗಳ ಇರಿಯುವ ಆಟ’. ಅಕ್ಷರಶಃ ಆಗ ಬಿಜೆಪಿಗರು ಮಾಡಿರುವುದು ಅದನ್ನೇ ಎನ್ನುವುದು ತನಿಖೆಯ ವಿವತಗಳಿಂದ ತಿಳಿಯುತ್ತದೆ. ಕೊರೊನ ಕಾಲದ ಕಿಟ್, ವೈದ್ಯಕೀಯ ಸಾಧನ, ಸಲಕರಣೆ, ವಿವಿಧ ಸೇವೆಗಳಿಗೆ ಹಣ ಪಾವತಿ ಇತ್ಯಾದಿ ವಿಷಯಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗೆಗೆ ಆಗಲೇ ಹಲವು ಗಂಭೀರ ಆರೋಪಗಳು ಕೇಳಿಬಂದಿದ್ದವು. ಆದರೆ ಬಿಜೆಪಿ ಸರಕಾರ ಹಗರಣವನ್ನು ಮುಚ್ಚಿಹಾಕಲು ಪ್ರಯತ್ನಿಸಿತ್ತು. ರಾಜ್ಯದಲ್ಲಿ ಬಿಜೆಪಿ ಸೋತು ಕಾಂಗ್ರೆಸ್ ಪಕ್ಷದ ಹೊಸ ಸರಕಾರ ಬಂದ ಮೇಲೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ನೇತೃತ್ವದ ತನಿಖಾ ಸಮಿತಿ ನೇಮಿಸಿದ್ದು ಈ ಸಮಿತಿಯು ಹಗರಣದ ಸಂಬಂಧ ವಿಚಾರಣೆ ನಡೆಸಿ ಮಧ್ಯಂತರ ವರದಿಯನ್ನು ನೀಡಿ ಹಲವು ಶಿಫಾರಸು ಮಾಡಿದೆ ಎಂದು ವರದಿಯಾಗಿದೆ.

ರಾಜ್ಯದಲ್ಲಿಯೇ 330 ರಿಂದ 400 ರೂ. ದರದಲ್ಲಿ ಪಿ.ಪಿ.ಇ. ಕಿಟ್ ಲಭ್ಯವಿದ್ದರೂ ವಿದೇಶೀ ಚೀನಾದ ಕಂಪನಿಗಳಿಗೆ ತಲಾ ಕಿಟ್ ಗೆ ರೂ.2,117 ರ ದರ ನೀಡಿ 3 ಲಕ್ಷ ಕಿಟ್‌ಗಳನ್ನು ಖರೀದಿ ಮಾಡಲಾಗಿದೆ. ಒಂದೇ ದಿನ ಈ ಎರಡೂ ದರಗಳಲ್ಲಿ ಖರೀದಿ ನಡೆದಿದೆ. ಖಾಸಗಿ ಪ್ರಯೋಗಾಲಯಗಳಿಗೆ ಅಕ್ರಮವಾಗಿ 6.93 ಕೋಟಿ ಪಾವತಿಸಲಾಗಿದೆ. ಮಾನ್ಯತೆಯೇ ಇಲ್ಲದ ಖಾಸಗಿ ಪ್ರಯೋಗಾಲಯಗಳಿಗೆ 4.28 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ಪಾವತಿ ಮಾಡಲಾಗಿದೆ ಎಂಬಂತಹ ಹಲವು ಗಂಭೀರ ಅಕ್ರಮಗಳನ್ನು ಸಮಿತಿ ಗುರುತಿಸಿದ್ದು, ಒಟ್ಟಾರೆ ಸುಮಾರು 7,223 ರೂಪಾಯಿಗಳಷ್ಟು ಭ್ರಷ್ಟಾಚಾರ ನಡೆದಿದೆ ಎಂದು ಗುರುತಿಸಿರುವುದಾಗಿ ವರದಿಯಾಗಿದೆ. ಆಸ್ಪತ್ರೆಗಳ ಹಾಸಿಗೆ, ವೆಂಟಿಲೇಟರ್, ಪಲ್ಸ್ ಆಕ್ಸಿ ಮೀಟರ್, ಆಕ್ಸಿಜನ್ ಸಿಲಿಂಡರ್ ಗಳಿಂದ ಹಿಡಿದು ಸ್ಯಾನಿಟೈಸರ್ ಮತ್ತು ಮಾಸ್ಕ್ ಗಳವರೆಗೆ ಪ್ರತಿಯೊಂದು ಸಾಮಗ್ರಿ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂದು ವರದಿ ಗುರುತಿಸಿದೆ ಎಂದು ಹೇಳಲಾಗಿದೆ. ರಾಜ್ಯದ ಮುಖ್ಯಮಂತ್ರಿ ಸುಮಾರು ಹದಿನೈದು ಸಾವಿರ ಕೋಟಿ ರೂಪಾಯಿಗಳವರೆಗೆ ಭ್ರಷ್ಟಾಚಾರ ನಡೆದಿರಬಹುದು ಎಂದಿದ್ದಾರೆ.

ಕೊರೊನ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಬಿ.ಶ್ರೀರಾಮುಲು ಅವರು ಈ ಹಗರಣದ ಪ್ರಮುಖ ಹೊಣೆಗಾರರಾಗಿದ್ದಾರೆ ಎಂಬುದು ಸ್ಪಷ್ಟ. ಈಗ ಯಡ್ಯೂರಪ್ಪ, ಶ್ರೀರಾಮುಲು ಅವರ ಮೇಲೆ ಭ್ರಷ್ಟಾಚಾರ ನಿಷೇಧ ಕಾಯ್ದೆಯಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ತನಿಖಾ ಸಮಿತಿ ಶಿಫಾರಸು ಮಾಡಿದೆ ಎಂದೂ ವರದಿಯಾಗಿದೆ. ವಿಚಾರಣಾ ಸಮಿತಿಯು ಅಕ್ಟೋಬರ್ ಎರಡನೇ ವಾರದಲ್ಲಿ ನೀಡಿದ ಸುಮಾರು 1,700ಕ್ಕೂ ಹೆಚ್ಚು ಪುಟಗಳ ವರದಿಯನ್ನು ಸಂಪುಟ ಉಪಸಮಿತಿ ಅಧ್ಯಯನ ನಡೆಸಿದ್ದು, ಇತ್ತೀಚೆಗೆ ಹಗರಣದ ತನಿಖೆಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚನೆ ಮಾಡಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ತನಿಖಾ ಸಮಿತಿಗೆ ಪೂರ್ಣ ವರದಿ ನೀಡಲು ರಾಜ್ಯ ಸರಕಾರವು ಮತ್ತೆ ಆರು ತಿಂಗಳ ಕಾಲಾವಕಾಶ ನೀಡಿರುವುದಾಗಿಯೂ ವರದಿಯಾಗಿದೆ.

ತನಿಖಾ ಸಮಿತಿ ಸಾಧ್ಯವಾದಷ್ಟೂ ಬೇಗ ಪೂರ್ಣ ವರದಿ ನೀಡಲು ಸರಕಾರವು ಅಗತ್ಯವಾದ ಸೌಲಭ್ಯಗಳನ್ನು ನೀಡಬೇಕು. ಎಲ್ಲ ಬಗೆಯ ಅಕ್ರಮಗಳ ಬಗೆಗೆ, ಹಗರಣದಲ್ಲಿ ಭಾಗಿಯಾದ ಮತ್ತು ಹಗರಣ ತಡೆಯುವಲ್ಲಿ ವಿಫಲರಾದ ಎಲ್ಲ ರಾಜಕಾರಣಿಗಳು, ಅಧಿಕಾರಿಗಳ ಪಾತ್ರದ ಬಗೆಗೆ ಪಕ್ಷಬೇಧವಿಲ್ಲದ ಮತ್ತು ಪಕ್ಷಪಾತವಿಲ್ಲದ, ರೀತಿಯಲ್ಲಿ ಸಮಗ್ರವಾದ ತನಿಖೆ ನಡೆಯಬೇಕು. ತನಿಖೆ ಬೇಗನೆ ಮುಗಿದು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ದುರುಪಯೋಗವಾದ ಹಣವನ್ನು ಭ್ರಷ್ಟರಿಂದ ವಸೂಲಿ ಮಾಡಬೇಕು.

ಇಂತಹ ಸನ್ನಿವೇಶದಲ್ಲಿ ಮುಕ್ತವಾದ ತನಿಖೆ ನಡೆದು ಸತ್ಯ ಹೊರ ಬರಬೇಕು ಎಂದು ವಿರೋಧ

ಪುಟ 5 ಕ್ಕೆ

ಉಪ ಚುನಾವಣೆ ಮತ್ತು ಬರಲಿರುವ ಫಲಿತಾಂಶದ ಸುತ್ತ

ಈ ವಾರ

ಎಸ್.ವೈ.ಗುರುಶಾಂತ್

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು, ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಮುಗಿದಿದೆ. ಚುನಾವಣಾ ಅಬ್ಬರ ತಗ್ಗಿದರೂ ನಾಯಕರ ಬೈಯ್ದಾಟಗಳು ನಿಂತಿಲ್ಲ. ಎಲ್ಲರಿಗೂ ಎಲ್ಲವೂ ಪ್ರತಿಷ್ಟೆಯ ಪ್ರಶ್ನೆಗಳೇ! ಯಾಕೆಂದರೆ ಇವೆಲ್ಲಾ ಪ್ರತಿಷ್ಠಿತರ ಕ್ಷೇತ್ರಗಳು!

ಉಪ ಚುನಾವಣೆಯ ಫಲಿತಾಂಶ ಏನಾಗಬಹುದು, ಏನಾಗಬಹುದು? ಎನ್ನುವ ಕುತೂಹಲ ಸಹಜವಾಗಿ ಎಲ್ಲರಲ್ಲೂ ಇದ್ದೇ ಇರುತ್ತದೆ. ಆದರೆ ಫಲಿತಾಂಶವನ್ನು ಆಧರಿಸಿಕೊಂಡು ರಾಜಕೀಯ ಭವಿಷ್ಯ ನಿರ್ಧರಿಸಿಕೊಳ್ಳುವ ದರ್ದು ಯಾರಿಗಿದೆ? ಆದರೆ ಇದೇ ಧಾಟಿಯಲ್ಲಿ ಹಲವುಗಳು ಲೆಕ್ಕಾಚಾರಗಳು ನಡೆದಿವೆ. ಒಂದು ವೇಳೆ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದರೆ ಈ ಸರ್ಕಾರಕ್ಕೆ ಹೆಚ್ಚಿನ ಬಲ ಮತ್ತು ಏನೆಲ್ಲ ವಿರೋಧಗಳ ನಡುವಿನಲ್ಲೂ ಜನತೆಯ ಅನುಮೋದನೆ ಮತ್ತು ಬೆಂಬಲ ಕೊಟ್ಟಿದ್ದಾರೆ ಎನ್ನುವ ಸಮರ್ಥನೆ ಕಾಂಗ್ರೆಸ್ ನಲ್ಲಿವೆ. ಒಂದು ವೇಳೆ, ಬಿಜೆಪಿ–ಜೆಡಿಎಸ್ ಹಿಂದೆ ಗೆದ್ದಿದ್ದ ಕ್ಷೇತ್ರಗಳು ಕಾಂಗ್ರೆಸ್ಸಿನ ಪಾಲಾದರೆ? ಇಂಥಹ ಪರಿಸ್ಥಿತಿ ಇದೆಯೇ ಗೊತ್ತಿಲ್ಲ! ಯಾಕೆಂದರೆ ಮೂರೂ ಕಡೆ ಎರಡೂ ಪಕ್ಷಗಳ ನಡುವೆ ಭಾರಿ ಹಣಾಹಣಿ ಎಂಬ ಮಾತುಗಳೇ ಕೇಳಿ ಬರುತ್ತಿವೆ. ಒಂದು ವೇಳೆ ಈ ಮೂರು ಕ್ಷೇತ್ರಗಳಲ್ಲಿ ಒಂದಾಗಿರುವ ಸಂಡೂರಿನಲ್ಲಿ ಗೆದ್ದಿದ್ದ ಕಾಂಗ್ರೆಸ್ ತನ್ನ ಸ್ಥಾನವನ್ನು ಕಳೆದುಕೊಂಡರೆ ಅದಕ್ಕೊಂದು ಅರ್ಥ. ಅದನ್ನು ಉಳಿಸಿಕೊಂಡರೆ ಮತ್ತೊಂದು ವ್ಯಾಖ್ಯಾನ. ಹಾಗಾದರೆ ಅವರವರ ಕ್ಷೇತ್ರದಲ್ಲಿ ಅವರವರು ಹಿಡಿತವನ್ನು ಉಳಿಸಿಕೊಂಡಿದ್ದಾರೆ ಎಂದು ಸಮಾಧಾನ ಪಟ್ಟುಕೊಳ್ಳಬಹುದು. ಒಂದು ವೇಳೆ ಬಿಜೆಪಿ ಗೆದ್ದಿದ್ದ ಸಿಗ್ಗಾಂವಿಯಲ್ಲಿ, ಅದರ ಮಿತ್ರ ಪಕ್ಷವಾದ ಜೆಡಿಎಸ್ ಸ್ಪರ್ಧಿಸಿರುವ ಚನ್ನಪಟ್ಟಣದಲ್ಲಿ ಸೋತರೆ ಜೆಡಿಎಸ್ ಗೆ ಮಾತ್ರವಲ್ಲ ಬಿಜೆಪಿಗೆ ಒಂದು ತೀವ್ರ ಹಿನ್ನಡೆ. ಕನಿಷ್ಠ ಸಿಗ್ಗಾಂವಿನಲ್ಲಿ ಸೋತರೂ ಬಿಜೆಪಿಗೆ ತೀವ್ರ ಹಿನ್ನಡೆ ಆಗಬಹುದು. ಇವೆಲ್ಲವೂ ಕೂಡ ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗೂ ಈ ಸರ್ಕಾರವನ್ನು ಉರುಳಿಸಿ, ಮಧ್ಯಂತರದಲ್ಲಿ ಅಧಿಕಾರ ಮಾಡಬೇಕೆನ್ನುವ ಬಿಜೆಪಿ ಜೆಡಿಎಸ್ಸಿನ ರಾಜಕಾರಣದ ಪಿತೂರಿಗೂ ಹಲವು ರೀತಿಗಳಲ್ಲಿ ಅನುವು ಮಾಡಿಕೊಡಬಹುದು. ಅಷ್ಟು ಮಾತ್ರ ಅಲ್ಲ, ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ನ ನಾಯಕರು ತಮ್ಮ ತಮ್ಮ ಸ್ಥಾನಗಳು ಮತ್ತು ಅವರ ಕೇಂದ್ರೀತವಾದ ಅಧಿಕಾರವನ್ನು ಉಳಿಸಿಕೊಳ್ಳಲು ಇವೆಲ್ಲ ಸಹಾಯಕವಾಗಲೂಬಹುದು. ಫಲಿತಾಂಶ ಬರುವವರೆಗೂ ಒಂದು ತರದ ಲೆಕ್ಕಾಚಾರಗಳು. ನಂತರದಲ್ಲೂ ಮತ್ತದರ ಪರಿಣಾಮಗಳು.

ಕಡಿವಾಣ ಇಲ್ಲವೇ?

ಹೀಗಿರುವಾಗಲೇ, ಒಂದೆರಡು ಬೆಳವಣಿಗೆಗಳು ತೀವ್ರವಾದ ರೀತಿಯ ಚರ್ಚೆ ಮತ್ತು ವಿವಾದಕ್ಕೆ ಕಾರಣವಾಗುತ್ತಿವೆ. ಚುನಾವಣೆಯ ಸಂದರ್ಭದಲ್ಲಿ ಚನ್ನಪಟ್ಟಣ ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿದ್ದ ಸಚಿವ ಜಮೀರ್ ಅಹ್ಮದ್ ರವರು ಮುಸ್ಲಿಂ ಅಲ್ಪಸಂಖ್ಯಾತರ ಸಭೆಯಲ್ಲಿ ಆಡಿದ್ದಾರೆ ಎನ್ನಲಾಗುವ ಎಚ್.ಡಿ. ಕುಮಾರಸ್ವಾಮಿ ಅವರ ಕುರಿತಾದ ‘ಕಾಲಿಯಾ’ (ಕರಿಯ) ಎನ್ನುವ ಶಬ್ದದ ಬಳಕೆಯ ಸುತ್ತ, ಹಾಗೆಯೇ ಮುಸ್ಲಿಮರನ್ನು ಖರೀದಿಸಬಹುದು ಎನ್ನುವ ಭಾವನೆ ಏನಾದರೂ ಜೆಡಿಎಸ್ ನವರಿಗಿದ್ದರೆ ಅಂತಹ ಸಂದರ್ಭದಲ್ಲಿ ಮುಸ್ಲಿಮರೆಲ್ಲರೂ ಚಂದಾ ಎತ್ತಿ ದೇವೇಗೌಡರ ಖಾನ್ ದಾನ್ ಗಳನ್ನು ಖರೀದಿಸಿ ಬಿಡುತ್ತೇವೆ ಎಂದು ಅದೇ ಜಮೀರ್ ಅಹ್ಮದ್ ಇನ್ನೊಂದು ಕಡೆ ಹೇಳಿದ್ದಾರೆ ಎನ್ನುವ ಮಾತುಗಳು ತೀವ್ರ ಸ್ವರೂಪದ ವಿವಾದಕ್ಕೆ ಕಾರಣವಾಗಿವೆ. ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗನೆಂದೇ ಗುರುತಿಸಿಕೊಳ್ಳುತ್ತಿರುವ ಜಮೀರ್ ಅಹ್ಮದ್ ಅವರ ಮಾತುಗಳು ಚುನಾವಣಾ ಫಲಿತಾಂಶದ ಮೇಲೆ ಏನೆಲ್ಲ ಪರಿಣಾಮ ಬೀರಬಹುದು ಎನ್ನುವುದು ಚರ್ಚೆಯಾಗುತ್ತಿದೆ. ಸ್ವತಃ ಅಭ್ಯರ್ಥಿಯಾಗಿರುವ ಯೋಗೀಶ್ವರ್ ಜಮೀರ್ ಅವರ ಮಾತುಗಳು ಒಕ್ಕಲಿಗರ ನಡುವೆ ಧೃವೀಕರಣಕ್ಕೆ ಕಾರಣವಾಗಿ ತಾವು ಸೋಲುವಲ್ಲಿ ಪರಿಣಮಿಸಿ ಬಿಡಬಹುದೇ ಎನ್ನುವ ಅನುಮಾನ ಇದೆ ಎನ್ನುವ ಅರ್ಥದಲ್ಲಿ ಮಾತನಾಡಿದ್ದಾರೆ.

ಜಮೀರ್ ಅಹಮದ್ ಅರ್ಥಹೀನ ಆವೇಶ ಪೂರಿತವಾದ ಅಡ್ಡ ಉದ್ದ ಮಾತುಗಳನ್ನು ಆಡುವುದರಲ್ಲಿ ಕುಖ್ಯಾತಿಯನ್ನು ಪಡೆಯುತ್ತಿದ್ದಾರೆ. ಸರ್ಕಾರದಲ್ಲಿ ತಾನೊಬ್ಬ ಜವಾಬ್ದಾರಿಯುತ ಸಚಿವ ಎನ್ನುವುದನ್ನು, ಹಲವು ದಶಕಗಳಲ್ಲಿ ಶಾಸಕನಾಗಿ, ಸಚಿವನಾಗಿ ಅನುಭವ ಇರುವ ಒಬ್ಬ ನಾಯಕ ಎನ್ನುವುದನ್ನು ಮರೆತು ತೀರಾ ಸಮಚಿತ್ತ ಕಳೆದುಕೊಂಡ ಖಳನಾಯಕನಂತೆ ಮಾತನಾಡುತ್ತಿರುವುದು ಖಂಡಿತ ಘನತೆ ತರುವುದಿಲ್ಲ, ಉಳಿಯುವುದೂ ಇಲ್ಲ, ಇದನ್ನು ಸಹಿಸಲಾಗದು. ಅದರಲ್ಲೂ ವ್ಯಕ್ತಿಗಳ ಬಣ್ಣವನ್ನು ಎತ್ತಿ ಹೀಯಾಳಿಸಿ ಮಾತನಾಡುವುದು ಖಂಡಿತಕ್ಕೂ ಕೂಡ ಒಪ್ಪುವ ವಿಷಯವಲ್ಲ. ಮತ್ತು ಅತ್ಯಂತ ಖಂಡನೆಯವಾದದ್ದು. ಹೊಣೆಗಾರಿಕೆ ಸೂಕ್ಷ್ಮತೆ ಇಲ್ಲದ ಬೇಜವಬ್ದಾರಿ ವರ್ತನೆಯನ್ನು ಜಮೀರ್ ಹೊಂದಿರುವುದು ಖಂಡಿತಕ್ಕೂ ಸ್ಥಾನಕ್ಕೆ ಶೋಭೆ ತರುವಂತದ್ದಲ್ಲ.

ಇಂತಹ ಮಾತು ಯಾಕೆ ಆಡಿದರು ಎನ್ನುವುದನ್ನು ಮತ್ತೊಂದು ರೀತಿಯಲ್ಲಿಯೂ ಕೂಡ ವ್ಯಾಖ್ಯಾನಿಸಲಾಗುತ್ತಿದೆ. ನಿಖಿಲ್ ಕುಮಾರಸ್ವಾಮಿಗೆ ಅನುಕೂಲವಾಗಲಿ ಎಂದೇ ಜಮೀರ್ ಹೀಗೆ ಮಾತನಾಡಿದ್ದಾರೆ ಎಂದು ಕಾಂಗ್ರೆಸ್ಸಿನ ಒಬ್ಬ ನಾಯಕರು ಹೇಳಿದ್ದಾರೆ! ಅದು ಸತ್ಯ ಇರಬಹುದು, ಇಲ್ಲದೆಯೂ ಇರಬಹುದು. ಆದರೆ ಚುನಾವಣೆ ಯಂತಹ ಸಂದರ್ಭದಲ್ಲಿ ಇರಬೇಕಾದ ಎಚ್ಚರ ಮತ್ತು ಯಾವುದೇ ವಿಷಯವನ್ನು ಅರ್ಥ ಮಾಡಿಕೊಳ್ಳುವ ಮತ್ತು ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ಇರುವ ಜವಾಬ್ದಾರಿತನ ಇಲ್ಲದಿರುವುದು ಎದ್ದು ಕಾಣುತ್ತದೆ. ಇಂಥದ್ದೇ ಪ್ರಸಂಗಗಳಿಗೆ ಬಿಜೆಪಿ ಮತ್ತು ಜೆಡಿಎಸ್ ಕಾದು ಕುಳಿತಂತೆ ಜಮೀರ್ ಅವರ ಮಾತುಗಳನ್ನೇ ಮತ್ತೆ ತಿರುಚಿ ಅಂತಿಮವಾಗಿ ಇದು ಇಡೀ ಒಕ್ಕಲಿಗರನ್ನೇ ಹೀಯಾಳಿಸಿದಂತೆ ಎಂದು ಅದನ್ನು ವಿಪರೀತಕ್ಕೆ ಬೆಳೆಸಿ ಬಳಸಲು ಸತತವಾಗಿ ಪ್ರಯತ್ನಿಸಿದ್ದನ್ನು ಗಮನಿಸಬೇಕು. ಇದಕ್ಕೆ ನಮ್ಮ ಟಿವಿ ಮತ್ತು ಇತರೆ ಮುದ್ರಣ ಮಾಧ್ಯಮಗಳು ಹೈಪ್ ಕೊಟ್ಟು ಪ್ರಚಾರಿಸಿದ್ದು ಯಾವುದಕ್ಕಾಗಿ ಎನ್ನುವುದನ್ನು ಬೇರೆ ಬಿಡಿಸಿ ಹೇಳಬೇಕಾಗಿಲ್ಲ. ಜಮೀರ್ ಅಹ್ಮದ್ ಈ ವಿಷಯದಲ್ಲಿ ಆಗಿರುವ ತಪ್ಪನ್ನು ಸರಿಪಡಿಸಿಕೊಳ್ಳುವುದಾಗಿ ಹೇಳಿದ್ದಾರೆ ಮತ್ತು ಬಹಿರಂಗವಾಗಿ ಕ್ಷಮೆ ಯಾಚಿಸಿದ್ದಾರೆ. ಆದರೆ ಆಡಿದ ಮಾತು ವಾಪಸು ಬರುವುದಿಲ್ಲ, ಆದ ಹಾನಿ ತಡೆಯುವುದಾಗುವುದಿಲ್ಲ. ಮೇಲಾಗಿ ಚುನಾವಣೆಯಲ್ಲಿ ಅದು ತನ್ನದೇ ಆದಂತಹ ಪರಿಣಾಮ ಬೀರುವುದನ್ನು ಅಲ್ಲಗೆಳೆಯವಂತೆ ಇಲ್ಲ. ಸಿದ್ದರಾಮಯ್ಯನವರು ತಮ್ಮ ಬೆಂಬಲಿಗರು ಸಮರ್ಥಕರು ಆಡಿರುವ ಇಂತಹ ಮಾತುಗಳಿಗೆ,

ಪುಟ 4 ಕ್ಕೆ

ಉಪ ಚುನಾವಣೆ..... ಪುಟ 3 ರಿಂದ

ಇಂಥ ವ್ಯಕ್ತಿಗಳಿಗೆ ಕಡಿವಾಣ ಹಾಕುವುದು ಅಗತ್ಯ ಇದೆ. ಈಗಾಗಲೇ ಕಾಂಗ್ರೆಸ್ಸಿನ ಒಳಗಡೆ ಜಮೀರ್ ಅಹ್ಮದ್ ಅವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕೆನ್ನುವ ಮಾತುಗಳು ಕೇಳಿ ಬರುತ್ತಿವೆ. ಒಂದು ಅರ್ಥದಲ್ಲಿ ಈಗಾಗಲೇ ಹಲವು ಗುಂಪುಗಳ ಒಳ ಗುದ್ದಾಟಗಳಿರುವ ಕಾಂಗ್ರೆಸ್ಸಿನಲ್ಲಿ ಇದು ಪಡೆಯಬಹುದಾದ ತಿರುವು, ಪರಿಣಾಮ ಹೇಗಿರುವುದು ಎನ್ನುವುದನ್ನು ನೋಡಬೇಕು ಅಷ್ಟೇ. ಚುನಾವಣಾ ಫಲಿತಾಂಶದ ನಂತರ ಈ ಪ್ರಸಂಗ ಹೊಸ ಸ್ವರೂಪವನ್ನು ಪಡೆದುಕೊಳ್ಳಬಹುದು.

ಜಮೀರ್ ಅಹ್ಮದ್ ಅವರ 'ಕಾಲಿಯಾ' ಮಾತನ್ನು ವಿಪರೀತವಾಗಿಸಿದ ಬಿಜೆಪಿ ನಾಯಕರು ತಾವು ಹಿಂದೆ ಯಾರನ್ನು ಹೇಗೆಲ್ಲಾ ಹೀಗೆಳೆದು ವಿಕೃತಗೊಳಿಸಿ ಅವಮಾನ ಮಾಡಿರುವ ಪ್ರಸಂಗಗಳನ್ನು ಮರೆತುಬಿಟ್ಟಂತೆ ಕಾಣುತ್ತದೆ. ಮಾಧ್ಯಮಗಳು ಕೂಡ ಅಂತಹುದೇ ಜಾಣ ಮರೆವನ್ನು ತೋರಿಸುತ್ತಿವೆ. ಹಿಂದೆ ಅರಣ್ಯ ಸಚಿವರಾಗಿದ್ದ ಬಿಜೆಪಿ ನಾಯಕ ಆರಗ ಜ್ಞಾನೇಂದ್ರ ಅವರು ಇಡೀ ಹೈದರಾಬಾದ್ ಕರ್ನಾಟಕದ ಪ್ರದೇಶದ ಜನರನ್ನು ಮತ್ತು ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರನ್ನೇ ನಿರ್ದಿಷ್ಟವಾಗಿ ಹೆಸರಿಸಿ ಸುಡು ಬಿಸಿಲಿನಲ್ಲಿ ಕರಕಲಾಗಿರುವ ಉತ್ತರ ಕರ್ನಾಟಕ ಹೈದರಾಬಾದ್ ಕರ್ನಾಟಕದ ಜನರಿಗೆ ಹಸಿರು ಅರಣ್ಯ ಹೇಗೆ ಅರ್ಥವಾದೀತು? ಮಲ್ಲಿಕಾರ್ಜುನ ಖರ್ಗೆಯವರನ್ನೇ ನೋಡಿ ಹೇಗೆ ಕರ್ರಗೆ ಕರಕಲಾಗಿದ್ದಾರೆ ಎಂದು ಅಂದಿದ್ದರು. ಈ ಅವಮಾನಕರ ಮೂದಲಿಕೆ ನಮ್ಮ ಮಾಧ್ಯಮಗಳಿಗೆ ಪೂರ್ತಿಯಾಗಿ ಮರೆತು ಹೋಗಿದೆ ಮತ್ತು ಜಮೀರ್ ಮಾತನ್ನು ಭಾರೀ ಅಬ್ಬರದಲ್ಲಿ ಪ್ರಲಾಪಿಸುವ ಬಿಜೆಪಿಯವರಿಗೂ ಕನಿಷ್ಠ ನೈತಿಕ ಪ್ರಜ್ಞೆ ಕಾಡುತ್ತಿಲ್ಲ. ಆದರೆ ಜನರನ್ನು ಯಾಮಾರಿಸುವ ಕೆಲಸದಲ್ಲಿ ಬಿಜೆಪಿ ಜೆಡಿಎಸ್ ನಾಯಕರು ಬಹಳ ಅಕ್ರಮಣಕಾರಿಯಾಗಿ ವರ್ತಿಸುತ್ತಿದ್ದಾರೆ.

ಸುಳ್ಳು ಸತ್ಯವಾಗಿಸುವ ಧಾವಂತ

ಇದರ ಜೊತೆ, ಜೊತೆಯಲ್ಲೇ ವಕ್ಫ್ ಮಂಡಳಿ ರೈತರ ಭೂಮಿಗಳನ್ನು ಲಪಟಾಯಿಸಲಿದೆ ಎನ್ನುವ ತಿರುಚಿದ ಪ್ರಚಾರವನ್ನು ಜನರ ನಡುವೆ ಇನ್ನೊಂದು ಹಂತಕ್ಕೆ ಕೊಂಡೊಯ್ಯಲು ಬಿಜೆಪಿ ಮುಂದಾಗಿದೆ. ರಾಜ್ಯದಾದ್ಯಂತ ಜಾತಾಗಳನ್ನ ನಡೆಸುವುದರ ಮೂಲಕ ತಾನು ರೈತರನ್ನು ರಕ್ಷಿಸುತ್ತಿದ್ದೇನೆ ಮತ್ತು ಸರ್ಕಾರ ಮುಸ್ಲಿಮರ ಪರವಾಗಿದೆ, ಹಿಂದುಗಳ ವಿರುದ್ಧ ಎಂದು ಬಿಂಬಿಸಿ ಆತಂಕ ಸೃಷ್ಟಿಸಿ ಅದರ ಬೆಳೆ ಕೊಯ್ಯುವ ಆಟದಲ್ಲಿ ದೊಡಗಿದೆ. ಇಲ್ಲಿಯೂ ಒಂದು ಗಮನಿಸಬೇಕಾದ ಅಂಶವೆಂದರೆ ಬಿಜೆಪಿಯಲ್ಲಿರುವ ಬಿ.ಎಸ್. ಯಡಿಯೂರಪ್ಪ ಅವರ ಬಣ ಮತ್ತು ಆರ್.ಎಸ್.ಎಸ್. ಮತ್ತು ಸಂತೋಷ್ ಜಿ. ಬೆಂಬಲಿತ ಶಾಸಕ ಬಸವರಾಜ ಪಾಟೀಲ್ ಯತ್ನಾಳ್ ಅವರ ಬಣಗಳು ಇಲ್ಲಿಯೂ ಸ್ಪರ್ಧಾ ಸ್ಪರ್ಧೆಗೆ ಇಳಿದಿವೆ. ಎರಡು ಬಣಗಳು ಪ್ರತ್ಯೇಕವಾಗಿ ರಾಜ್ಯದಲ್ಲಿ ಪ್ರಚಾರಕ್ಕೆ ಹೋಗುವ ಬಗ್ಗೆ ನಿರ್ಧರಿಸಿದ್ದವು. ಕೊನೆಗೆ ರಾಜಿ ಸಂಧಾನವಾಗಿ ಪಕ್ಷದ ಅಧಿಕೃತ ಕಾರ್ಯಕ್ರಮ ಎನ್ನುವಂತೆ ಮಾಡಲಾಗುತ್ತಿದೆ. ಬಿಜೆಪಿ ಒಳಗಿನ ಬಣಗಳ ಬಡಿದಾಟ ಬಹಿರಂಗವಾಗಿ ನಡೆಯುತ್ತಿದೆ.

ಸರ್ಕಾರ ಉರುಳಿಸುವ ಆತಂಕದಲ್ಲಿ

ಉಪಚುನಾವಣೆ ಫಲಿತಾಂಶ ಪ್ರಕಟವಾಗುವ ಮೊದಲೇ ಸಿದ್ದರಾಮಯ್ಯನವರ ನೇತೃತ್ವದ ಸರಕಾರವನ್ನು ಉರುಳಿಸುವ ಮಾತುಗಳು ಜೋರಾಗಿ ಕೇಳುತ್ತಿವೆ. ಅಂತಹ ಪ್ರಯತ್ನಗಳು ನಡೆದಿರುವ ಬಗ್ಗೆ ಸ್ವತಃ ಮುಖ್ಯಮಂತ್ರಿಗಳೇ ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ 50 ಶಾಸಕರುಗಳನ್ನು ತಲಾ ಶಾಸಕರಿಗೆ 50 ಕೋಟಿಯಂತೆ ಹಣ ನೀಡಿ ಪಕ್ಷಾಂತರ ಮಾಡಿಸುವ ಪ್ರಯತ್ನ ನಡೆದಿದೆ ಎನ್ನುವುದು. ಇಂಥಹ ಮಾತುಗಳನ್ನು ಮುಖ್ಯಮಂತ್ರಿಗಳು ಆಡುವುದಕ್ಕೆ ಹಿನ್ನೆಲೆ ಇಲ್ಲವೆಂದು ಅರ್ಥವಲ್ಲ ಅಥವಾ ಕೇವಲ ಒಂದು ಸಾಧಾರಣ ಹೇಳಿಕೆ ಎಂದು ಭಾವಿಸಲಿಕ್ಕೆ ಆಗುವುದಿಲ್ಲ. ಯಾಕೆಂದರೆ ನಿರಂತರವಾಗಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಹೊಸ್ತಿಲಿನಿಂದಲೇ ಇನ್ನೇನು ಈ ಸರ್ಕಾರ ಬಿದ್ದೆ ಹೋಗುತ್ತದೆ ಎಂದೇ ನಿರಂತರ ಅನುಮಾನಗಳನ್ನು ಹುಟ್ಟಿಸುತ್ತಲೇ ಬಂದಿದ್ದಾರೆ. ವಿರೋಧ ಪಕ್ಷವಾಗಿ ಇದೆ ತಮ್ಮ ಆಧ್ಯ ಕರ್ತವ್ಯ ಎಂದೇ ಭಾವಿಸಿದ್ದಾರೆ. ಮಾತ್ರವಲ್ಲ, ಸರ್ವ ಪ್ರಯತ್ನಗಳನ್ನು ನಡೆಸಿದ್ದಾರೆ. ಸಿದ್ದರಾಮಯ್ಯನವರ ಮಾತುಗಳು ನಿಜವೇ ಆಗಿದ್ದಲ್ಲಿ ಅದಕ್ಕೇನು ಸಮರ್ಥನೆ ಇದೆ, ಯಾವ ದಾಖಲೆಗಳಿವೆ ಒಂದು ವೇಳೆ ಆಗಿದ್ದಲ್ಲಿ ಇದನ್ನ ಎಸ್ಐಟಿ ತನಿಖೆಗೆ ಕೊಡಬಹುದಲ್ಲ ಎನ್ನುವ ಮಾತುಗಳನ್ನ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಈ ಮಾತುಗಳು ಏನೇ ಇರಲಿ ಅಂತಹ ಪ್ರಯತ್ನಗಳನ್ನು ನಿರಾಕರಿಸಲಾಗುವುದಿಲ್ಲ. ಕಾಂಗ್ರೆಸಿನ ಶಾಸಕ ರವಿಕುಮಾರ ಗಣಿಗ ಅವರು ತಮಗೂ, ಕಾಂಗ್ರೆಸ್‌ನ ಹಲವು ಶಾಸಕರಿಗೆ ಹಿಂದೆ 50 ಕೋಟಿ ಅಲ್ಲ 100 ಕೋಟಿ ರೂಪಾಯಿಗಳವರೆಗೆ ಆಮಿಷ ನೀಡಲಾಗಿತ್ತು. ಹೀಗೆ ಇತರೆ ಶಾಸಕರಿಗೂ ಆಫರ್ ಕೊಟ್ಟಿರುವುದನ್ನು ಸೂಕ್ತ ಸಮಯದಲ್ಲಿ ಸಾಬೀತು ಪಡಿಸುವುದಾಗಿ ಹೇಳಿದ್ದಾರೆ. ಬಿಜೆಪಿ ಇದನ್ನು ಎಷ್ಟೇ ನಿರಾಕರಿಸಿದರೂ ಸತ್ಯಕ್ಕೆ ಹೊರತಾದುದು ಏನಲ್ಲ. ಜನಾದೇಶವಿಲ್ಲದಿದ್ದರೂ ಶಾಸಕರುಗಳನ್ನು ಖರೀದಿ ಮಾಡಿ ಸರ್ಕಾರಗಳನ್ನು ಉರುಳಿಸಿ, ಹಿಂಭಾಗಿಲಿನಿಂದ ಅಧಿಕಾರ ಅಕ್ರಮವಾಗಿ ಹಿಡಿದಿರುವ ಅನೈತಿಕ ರಾಜಕಾರಣಕ್ಕೆ ಬಿಜೆಪಿಯೇ ಒಂದು ವಿಶಿಷ್ಟ ಮಾದರಿ. 'ಅಪರೇಷನ್ ಕಮಲ' ಎನ್ನುವ ಮಾದರಿ ಹುಟ್ಟಿದ್ದೆ ಬಿಜೆಪಿಯಿಂದ ಎನ್ನುವುದನ್ನು ಯಾರು ಮರೆತಿಲ್ಲ. ಈಗಲೂ ಮಾರಾಷ್ಟ್ರದಲ್ಲಿ ಮತ್ತು ಬೇರೆ ಕಡೆಗಳಲ್ಲಿ ಸರ್ಕಾರಗಳನ್ನು ಉರುಳಿಸಿದಂತೆ ಕರ್ನಾಟಕದಲ್ಲಿಯೂ ಚುನಾಯಿತ ಈ ಸರ್ಕಾರವನ್ನು ಉರುಳಿಸುವ ಮತ್ತು ಕೇಂದ್ರದ ಅಧಿಕಾರವನ್ನು ಬಳಸಿ ಮಣಿಸಿ ಕೆಡಹುವ ನಿರಂತರ ಪ್ರಯತ್ನಗಳು ನಡೆದೇ ಇವೆ.

ಈ ಸನ್ನಿವೇಶದಲ್ಲಿ ಕಾಂಗ್ರೆಸ್ ಸಹ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ವಿಷಯಗಳು ಇವೆ. ತಮ್ಮ ಪಕ್ಷದ ಶಾಸಕರನ್ನ ಬಿಜೆಪಿ ಜೆಡಿಎಸ್ ಅಂತವರು ಸುಲಭವಾಗಿ ಹಣದ ಆಮಿಷವನ್ನು ಒಡ್ಡಿ ಖರೀದಿಸುತ್ತಾರೆ ಎಂದರೆ ಆ ಶಾಸಕರ ಬದ್ಧತೆ ಏನು? ಬ್ಲಾಕ್‌ಮೇಲ್ ಗೆ ಒಳಗಾಗುತ್ತಾರೆ ಎನ್ನುವುದಾದರೆ ಅವರೆಂತಹವರು ಎನ್ನುವುದು? ಹಾಗೆಯೆ ಆಮಿಷಗಳಿಗೆ ಅಧಿಕಾರದ ದಾಹಕ್ಕೆ, ಸಂದರ್ಭ ಸಾಧಕರಾಗುವ ಮಟ್ಟಿನಲ್ಲಿ ಶಾಸಕರಿದ್ದಾರೆ ಎಂದರೆ ಯಾವ ತತ್ವ ನಿಷ್ಠೆ ಅವರಿಗೆ ಇದೆ? ಬಾಯಲ್ಲಿ ಬಿಜೆಪಿಯ ಕೋಮುವಾದವನ್ನು ವಿರೋಧಿಸಿ ಒಬ್ಬಿಬ್ಬ ನಾಯಕರು ಮಾತನಾಡಿದರೆ ಸಾಕಾಗುತ್ತದೆಯೇ? ಅದಕ್ಕೆ ಕಾಂಗ್ರೆಸ್ಸಿನ ಶಾಸಕರು ಎಷ್ಟು ಬದ್ಧರಿದ್ದಾರೆ? ಅವರಿಗೆ ಸೆಕ್ಯುಲರಿಸಂ, ಪ್ರಜಾಪ್ರಭುತ್ವ ಅಥವಾ ಸಂವಿಧಾನವಾಗಲಿ ಎಷ್ಟು ತಿಳಿದಿದೆ, ತಿಳಿಸಲಾಗಿದೆ ಎನ್ನುವುದನ್ನು ಕಾಂಗ್ರೆಸ್ ನಾಯಕರು ಸಹ ತೀವ್ರ ಪರಿಶೀಲನೆ ಮಾಡಿಕೊಳ್ಳಬೇಕು. ಕಾಂಗ್ರೆಸ್ ಪಕ್ಷದಲ್ಲಿ ಇರುವ ಬಹಳಷ್ಟು ಜನ ಇಂತಹ ಸಂದರ್ಭಗಳು, ತೆರೆದ ಅವಕಾಶಗಳಿಗೆ ಒಗ್ಗಿಕೊಂಡವರು. ಅಸಹ್ಯಕರ ಸ್ಪರ್ದೆಯಲ್ಲಿ ಗೆಲ್ಲುವ ಕುದುರೆಗಳನ್ನೇ ಆಯ್ಕೆ ಮಾಡುವ ಕಾಂಗ್ರೆಸ್ ಪಕ್ಷ ಸಹ ತನ್ನ ಸಿದ್ಧಾಂತಕ್ಕೆ ಮತ್ತು ಸಂವಿಧಾನ ತತ್ವಗಳಿಗೆ ಬದ್ಧವಾದ ಅಂಥವರನ್ನು ಆಯ್ಕೆ ಮಾಡುವುದಿಲ್ಲ ಎನ್ನುವುದು ಅಷ್ಟೇ ನಿಜ. ಹೀಗಾಗಿ ನೂರಾರು ಕೋಟಿಗಳ ಒಡೆಯರು ಹಣ ಖರ್ಚು ಮಾಡಿ ಆಯ್ಕೆಯಾಗುವುದು ನಿಜಕ್ಕೂ ಕೂಡ ಕಾಂಗ್ರೆಸ್ಸಿನ ಸಿದ್ಧಾಂತವನ್ನು ಉಳಿಸಿದಂತಾಗುತ್ತದೆಯೇ? ಹೋಗಲಿ ಕಾಂಗ್ರೆಸ್ಸಿಗಾದರೂ ಒಂದು ಸ್ಪಷ್ಟ ಸಿದ್ಧಾಂತ ಮತ್ತು ಅದರ ಪ್ರತಿಪಾದನೆಯ ಬದ್ಧತೆ ಇದೆಯೇ ಎನ್ನುವುದನ್ನು ಕೂಡ ನಾಯಕರು ಪರಿಶೀಲಿಸಬೇಕು. ಈ ಖರೀದಿಯ ವ್ಯವಹಾರವನ್ನು ಟೀಕಿಸುವ ಕಾಂಗ್ರೆಸ್ಸಿನವರೆಗೂ ಕೂಡ ಎಷ್ಟರಮಟ್ಟಿನ ನೈತಿಕತೆ ಇದೆ ಎನ್ನುವುದನ್ನು ಅವಲೋಕಿಸಬೇಕು. ಯಾಕೆಂದರೆ ಕಾಂಗ್ರೆಸ್ ಸೇರಲು 50 ಜನ ಬಿಜೆಪಿ ಶಾಸಕರು ತುದಿಗಾಲ ಮೇಲೆ ನಿಂತಿದ್ದಾರೆ ಎಂಬ ಗಾಸಿಪ್ ಸುದ್ದಿಗಳನ್ನು ಕಾಂಗ್ರೆಸ್ ನಾಯಕರೇ ಹಬ್ಬಿಸುತ್ತಿದ್ದುದನ್ನ ಯಾರೂ ಮರೆತಿಲ್ಲ. ಅಂದರೆ ಎಂತಹ ರಾಜಕಾರಣವನ್ನು ಕಾಂಗ್ರೆಸ್ಸಾಗಲಿ ಪ್ರತಿಪಾದಿಸುತ್ತದೆ ಎನ್ನುವುದೇ ಪ್ರಶ್ನೆ. ಚನ್ನಪಟ್ಟಣದಲ್ಲಿ ಅಭ್ಯರ್ಥಿಯಾಗಿರುವ ಯೋಗೇಶ್ವರ್ ಸಹ ಹಿಂದೆ ಕಾಂಗ್ರೆಸ್ಸಿಗೆ ದ್ರೋಹ ಬಗೆದು ಆಪರೇಷನ್ ಕಮಲದಲ್ಲಿ ಬಿಜೆಪಿ ಸೇರಿ ಅಧಿಕಾರ ಅನುಭವಿಸಿದವರೇ.

ಇಂತಹ ಸನ್ನಿವೇಶದಲ್ಲಿ ಬಿಜೆಪಿ ವಿರುದ್ಧ ಕೇವಲ ಮಾತಿನ ದಾಳಿಗಳಿಂದ ಹೆಚ್ಚಿನದನ್ನು ಸಾಧಿಸಲಾಗುವುದಿಲ್ಲ. ಬದಲಿಯಾಗಿ ಜನತೆಯ ಸಂಕಷ್ಟಗಳಿಗೆ ಧ್ವನಿಯಾಗಬೇಕು, ಪರಿಹರಿಸುವುದಾಗಬೇಕು. ಈಗಾಗಲೇ ಕಾಂಗ್ರೆಸ್ಸಿನ ಆಡಳಿತ ಬಹಳಷ್ಟು ಜನರಲ್ಲಿ ಅತೃಪ್ತಿಯನ್ನು ಹೆಚ್ಚಿಸುತ್ತಿದೆ. ಅಂತಹದ್ದನ್ನು ಮತ್ತಷ್ಟು ಹೆಚ್ಚಿಸಿ ಅದನ್ನು ಬಳಸಿಕೊಳ್ಳಲು ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಅತ್ಯಂತ ಅಕ್ರಮಣಕಾರಿಯಾಗಿ ತೊಡಗಿವೆ. ಇದನ್ನು ಎದುರಿಸಬೇಕಾದರೆ ಶಾಸಕರುಗಳನ್ನು ಹಣ, ಅಧಿಕಾರದ ಆಮಿಷಗಳಿಂದ ನಿರ್ವಹಿಸುವುದು ಸಾಧ್ಯವಾಗುವುದಿಲ್ಲ. ಬದಲಾಗಿ, ಉತ್ತಮ ಆಡಳಿತ, ಜನತೆಗೆ ಪರಿಹಾರ ಒದಗಿಸುವ, ಜನರ ಮನಸ್ಸು ಗೆಲ್ಲುವ ಶಕ್ತಿ ಆ ದಿಕ್ಕಿನಲ್ಲಿನ ಕ್ರಮಗಳು ಸಹಾಯಕ್ಕೆ ಬರುತ್ತವೆ. ಇಲ್ಲವಾದಲ್ಲಿ, ಕಾಂಗ್ರೆಸ್ ಪಕ್ಷವೇ ಬಿಜೆಪಿಯ ಮತ್ತು ಜೆಡಿಎಸ್ಸಿನ ತಂತ್ರ ಕುತಂತ್ರಗಳಿಗೆ ಆಹಾರವನ್ನು ಒದಗಿಸಿದಂತೆ ಆಗುತ್ತದೆ.

ಉಪಚುನಾವಣೆಯ ಫಲಿತಾಂಶದ ನಂತರದಲ್ಲಿ ಅಧಿಕಾರರೂಢ ಕಾಂಗ್ರೆಸ್ ಪಕ್ಷಕ್ಕೆ, ಸಿದ್ದರಾಮಯ್ಯನವರಿಗೆ ಅತ್ಯಂತ ಸವಾಲಿನ ಒಂದು ಸೂಕ್ಷ್ಮ ಸಂದರ್ಭ ಎದುರಾಗಬಹುದು ಎನ್ನುವುದನ್ನು ಮರೆಯಲಾಗದು.

ವೈಷ್ಣವರಾಗಿ ಪರಿವರ್ತನೆಗೊಂಡ ಮಾರ್ವಾಡಿಗಳ ದೇಶವ್ಯಾಪಿ ವಿಸ್ತರಣೆ...... ಪುಟ 2 ರಿಂದ

ಸಾಮ್ರಾಜ್ಯದೊಳಗೆ ವಿಸ್ತರಿಸಲು ಅವಕಾಶ ನೀಡಿತು.

ಮೊಘಲರ ಆಡಳಿತದ ಮತ್ತೊಂದು ಕ್ರಮ ವ್ಯಾಪಾರಿಗಳಿಗೆ ಅದರಲ್ಲೂ ಮಾರ್ವಾಡಿಗಳಿಗೆ ಚಿನ್ನದ ಬಾಗಿಲನ್ನೇ ತೆರೆಯಿತು. ಅದುವೇ ರೈತರು ಮತ್ತಿತರರೆಲ್ಲರೂ ಅಲ್ಲಿಯವರೆಗೂ ತೆರಿಗೆಯನ್ನು ವಸ್ತು ರೂಪದಲ್ಲಿ ಕೊಡಬಹುದಾಗಿದ್ದುದನ್ನು ಮಾರ್ಪಡಿಸಿ ಹಣದ ರೂಪದಲ್ಲಿ ಕೊಡಬೇಕೆಂಬ ಪದ್ಧತಿ. ರೈತರ ಬಳಿಯಲ್ಲಾಗಲಿ, ನೇಕಾರ, ಗಾಣದವರು, ಕಮ್ಮಾರ, ಕುಂಬಾರರ ಹಣ ಎಲ್ಲಿಂದ ಬರಬೇಕು? ಆದ್ದರಿಂದ ಈ ಎಲ್ಲರಿಂದ ಬೆಳೆಗಳು, ತಯಾರಿಕೆಗಳನ್ನು ಕೊಂಡು ಹಣವಾಗಿ ಪರಿವರ್ತಿಸಿ ಕೊಡುವುದು ವ್ಯಾಪಾರಿಗಳ ಕೆಲಸವಲ್ಲವೇ! ಅಹಹಾ! ಈ ಸುವರ್ಣಾವಕಾಶವನ್ನು ಬಳಸಿ ಮಾರ್ವಾಡಿಗಳು ಹೇಗೆ ಬೆಳೆದರು ಎಂಬುದು ಒಂದು ಪ್ರತ್ಯೇಕ ಲೇಖನದ ವಸ್ತು.

ಧರ್ಮದಲ್ಲೂ ಬದಲಾವಣೆ ಮತ್ತು ವ್ಯಾಪಾರದ ವಿಸ್ತರಣೆ

ಹೀಗೆ ಅವರ ವ್ಯವಹಾರಗಳ ವಿಸ್ತರಣೆಯ ಸಂದರ್ಭದಲ್ಲಿ ಮಾರ್ವಾಡಿಗಳು ಬ್ರಜ್ ಪ್ರದೇಶದಲ್ಲಿ ಬೆಳೆಯುತ್ತಿದ್ದ ವಲ್ಲಭಾಚಾರ್ಯರ ಕೃಷ್ಣ ಭಕ್ತಿ ಪಂಥದಿಂದ ಆಕರ್ಷಿತರಾದರು. ಆ ಮೊದಲೇ ಈ ಪಂಥದ ಪೂರ್ವ ರೂಪವಾದ ವಿಷ್ಣುಸ್ವಾಮಿ ಪಂಥದ ಪರಿಚಯವಾಗಿತ್ತು.

ಜಗತ್ತಿನ ಅಸ್ತಿತ್ವ ಕೇವಲ ಭ್ರಮೆ ಎಂಬ ಮಾಯಾವಾದವನ್ನು ತಿರಸ್ಕರಿಸಿದ, ವೈರಾಗ್ಯ ಸಂನ್ಯಾಸ, ಉಪವಾಸ, ವ್ರತಗಳ ಮೂಲಕ ದೇಹ ದಂಡನೆಯನ್ನು ತಿರಸ್ಕರಿಸಿದ ವಲ್ಲಭಾಚಾರ್ಯರ ವಿಚಾರಗಳು ಅವರನ್ನು ಸೆಳೆದವು. ವಿಷ್ಣುವಿನ ವಿವಿಧ ಅವತಾರಗಳು, ಅದರಲ್ಲೂ ನಾಥಜೀ ಎಂದು ಪೂಜಿಸುವ ಕೃಷ್ಣನ ಭಕ್ತಿಯನ್ನು ಅಂಗೀಕರಿಸಿ ಹಲವು ಕೃಷ್ಣ ದೇವಾಲಯಗಳನ್ನು ನಿರ್ಮಿಸಿದರು. ಈ ಪಂಥದ ಪಕ್ಕಾ ಸಸ್ಯಾಹಾರ, ಕೃಷ್ಣ ಭಕ್ತಿ ಮೊದಲಾದವು ಮೂಲದಲ್ಲಿ ಆರ್ಯ ವರ್ಣದ ವೈಶ್ಯರೇನೂ ಅಲ್ಲದ ಮಾರ್ವಾಡಿಗಳಿಗೆ ಭಾರತದ ಎಲ್ಲೆಡೆಯಲ್ಲಿ ಸಾಮಾಜಿಕ ಮಾನ್ಯತೆಯನ್ನು ಒದಗಿಸಿತು.

ಮಾರವಾಡ, ಇತರ ರಜಪೂತ ಸಂಸ್ಥಾನಗಳಲ್ಲಿ, ಗುಜರಾತಿನಲ್ಲಿ ಜನಪ್ರಿಯವಾದ ವಲ್ಲಭಾಚಾರ್ಯ ಪಂಥವನ್ನು ಮಾರವಾಡ ಪ್ರದೇಶದ ರಾಜರು, ಸಂಸ್ಥಾನಿಕರೂ ಒಪ್ಪಿಕೊಂಡರು. ಈ ರಾಜರು ದೇವಾಲಯ ನಿರ್ಮಾಣದ ಜೊತೆಗೆ ಸ್ವತಃ ತಾವೇ ಕೃಷ್ಣ ಭಕ್ತಿಯ ಕಾವ್ಯಗಳನ್ನು ರಚಿಸಿದರು. ಭಾಗವತ, ರಾಮಚರಿತ ಮಾನಸಗಳನ್ನು ಪ್ರತಿ ಮಾಡಿಸಿ ಜನಪ್ರಿಯಗೊಳಿಸಿದರು. ಇದರಿಂದ ಕೃಷ್ಣನ ಏಕದೇವೋಪಾಸನೆ ಜನಸಾಮಾನ್ಯರಲ್ಲಿ ಪಸರಿಸಿತು. ಇದರ ಜೊತೆಗೆ ಅಂದು ಆಡಳಿತದ ದಾಖಲೆಗಳ ಭಾಷೆಯಾಗಿದ್ದ ಪರ್ಷಿಯನ್‌ಗೆ ಬದಲಾಗಿ ಮಾರವಾರಿ ಭಾಷೆ ಹೆಚ್ಚು ಪ್ರಚಲಿತವಾಯಿತು. ಈ ಎಲ್ಲ ಧಾರ್ಮಿಕ, ಸಾಂಸ್ಕೃತಿಕ, ಭಾಷಾ ಪ್ರಕ್ರಿಯೆಗಳು ಕೇವಲ ಮಾರವಾಡ ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಆಗ ಭಾರತಾದ್ಯಂತ ಬೆಳೆಯುತ್ತಿದ್ದ ಭಕ್ತಿ ಪಂಥಗಳ ಭಾಗವಾಗಿತ್ತು.

ಮಾರವಾಡದಿಂದ ಬಂಗಾಲದವರೆಗೆ ಕಬೀರ, ತುಲಸೀದಾಸ, ಚೈತನ್ಯ ಪಂಥದವರೆಗೆ ಹಬ್ಬಿದ ಈ ಪಂಥಗಳ ಕೇಂದ್ರವಾಗಿತ್ತು ಬ್ರಜ್ ಪ್ರದೇಶ. ಹೀಗೆ ವ್ಯಾಪಾರ, ಕುಶಲ ಉತ್ಪಾದನೆಗಳ ಬೆಳವಣಿಗೆಯ ಮುಂದುವರಿದ ಭಾಗವಾಗಿ ಪಂಜಾಬಿನಲ್ಲಿ ಸಿಖ್ ಧರ್ಮ ಉಗಮಗೊಂಡು ಬೆಳೆಯಿತು. ಮೊಘಲರ ವಿರುದ್ಧ ಸೆಟೆದು ನಿಂತಿತು. ಗುರುಮುಖಿ ಲಿಪಿ ಹಾಗೂ ಪಂಜಾಬಿ ಭಾಷೆಯನ್ನು ಜನಪ್ರಿಯಗೊಳಿಸಿತು.

ಈ ಬೆಳವಣಿಗೆಗಳಿಗಿಂತ ನಾಲ್ಕಾರು ಶತಮಾನಗಳ ಹಿಂದಿನ ಕರ್ನಾಟಕದ ವಚನ ಚಳುವಳಿಯ ಬೆಳವಣಿಗೆಗೂ ಈ ಬೆಳವಣಿಗೆಗಳಿಗೂ ಕೆಲವು ಸಾಮ್ಯತೆಗಳಿವೆ ಎಂಬುದನ್ನು ಗಮನಿಸಬೇಕು.

ಈ ತೆರನ ಭಕ್ತಿ ಪಂಥದ ವ್ಯಾಪಕತೆ ಜೊತೆಗೆ ಮಾರ್ವಾಡಿ ವೈಷ್ಣವರಿಗೆ ದೊರಕಿದ ಮಾನ್ಯತೆ ಅವರಿಗೆ ವ್ಯಾಪಾರ, ಬಡ್ಡಿ ಸಾಲ ಮೊದಲಾದ ವ್ಯವಹಾರಗಳನ್ನು ಭಾರತದಾದ್ಯಂತ ವಿಸ್ತರಿಸಲು ಸಹಾಯಕವಾಯಿತು.

ಅದೇ ಸಮಯದಲ್ಲಿ ಈ ವೈಷ್ಣವ ಆಚರಣೆಗಳು, ಸಸ್ಯಾಹಾರ, ಅಸ್ಪೃಶ್ಯ ಮತ್ತು ಇತರ ತಳ ಉತ್ಪಾದಕ ಸಮುದಾಯಗಳನ್ನು ಕೀಳ್ಗಳೆಯಲು ಹಾಗೂ ಅವರ ಉತ್ಪಾದನೆಗಳನ್ನು ಅಗ್ಗವಾಗಿ ಕೊಳ್ಳಲು ಹೇಗೆ ಸಹಾಯ ಮಾಡಿತು ಎಂಬುದು ಮುಂದಿನ ಲೇಖನದಲ್ಲಿ.

ಗಣಿ ನಾಡಿನ ಅಧಿಪತ್ಯಕ್ಕೆ ಅಕ್ರಮಗಳ ಹರಿದಾಟ

ಜೆ.ಎಂ.ಚನ್ನಬಸಯ್ಯ





ನವೆಂಬರ್ 13, 2024 ರಂದು ನಡೆದ ಸಂಡೂರು ವಿಧಾನ ಸಭೆಯ ಉಪಚುನಾವಣೆಯಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ಆಗಿದೆ ಎಂದು ಹೇಳಬಹುದು. ಇದುವರೆಗೂ ನಡೆದ ಚುನಾವಣೆಗಳಲ್ಲಿ ಅತಿ ಭ್ರಷ್ಟ ಚುನಾವಣೆ, ಅತ್ಯಂತ ದುಬಾರಿ ಚುನಾವಣೆ ಇದಾಗಿದೆ. ಸಂಡೂರು ಉಪ ಚುನಾವಣೆ ಕಣದಲ್ಲಿ 6 ಅಭ್ಯರ್ಥಿಗಳಿದ್ದಾರೆ. ನವೆಂಬರ್ 13ರಂದು ಮತದಾನ ನಡೆದಿದ್ದು, ನವೆಂಬರ್ 23ರಂದು ಮತ ಎಣಿಕೆ ನಡೆಯಲಿದೆ. 2,36,402 ಮತದಾರರಲ್ಲಿ, 1,80,189 ಮತಗಳು ಚಲಾವಣೆಯಾಗಿದೆ. 1,17,935 ಪುರುಷ ಮತದಾರರಲ್ಲಿ 99,922 ಪುರುಷರು, 1,18,438 ಮಹಿಳೆ ಮತದಾರರಲ್ಲಿ 98,255 ಮಹಿಳೆಯರು ಮತ ಚಲಾಯಿಸಿದ್ದು ಒಟ್ಟಾರೆ ಶೇ.76 ರಷ್ಟು ಮತದಾನ 253 ಮತಗಟ್ಟೆಗಳ ಮೂಲಕ ಮತದಾನ ಚಲಾವಣೆಯಾಗಿದೆ. ಮತದಾನ ಕಳೆದ ಚುನಾವಣೆಗಿಂತ ಕಡಿಮೆ. ಸಂಡೂರು ಕ್ಷೇತ್ರದ ವಿಠ್ಲಾಪುರ, ತುಮಟಿ ಹಾಗೂ ಹೊಸೂರುಗಳಲ್ಲಿ ಜನರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಜನ ಮತದಾನ ಬಹಿಷ್ಕರಿಸುವ ಎಚ್ಚರಿಕೆ ನೀಡಿದ್ದರು. ಅಧಿಕಾರಿಗಳ ಸಮಸ್ಯೆಗಳ ಪರಿಹಾರದ ವಾಗ್ದಾನ ಪಡೆದು ಮತದಾನ ಚಲಾಯಿಸಿದ್ದಾರೆ.

ಚುನಾವಣಾ ಅಕ್ರಮ ಚಟುವಟಿಕೆ ತಡೆಯಲು ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 8 ಚೆಕ್‌ಪೋಸ್ಟ್ ಸ್ಥಾಪಿಸಲಾಗಿತ್ತು. ಜಿಲ್ಲೆಯೊಳಗೆ 2, ಅಂತರ್ ಜಿಲ್ಲಾ 4, ಅಂತರ್ ರಾಜ್ಯ ಗಡಿಭಾಗದಲ್ಲಿ 2 ಚೆಕ್‌ಪೋಸ್ಟ್ ಸ್ಥಾಪಿಸಲಾಗಿತ್ತು. ಡಿ.ಬಸಾಪುರ ಗ್ರಾಮ ಚೆಕ್‌ಪೋಸ್ಟ್ ನಲ್ಲಿ ಸೂಕ್ತ ದಾಖಲೆ ಇಲ್ಲದ 27,50,000 ರೂ. ನಗದು ಹಣ ಸೇರಿದಂತೆ ಒಟ್ಟು ರೂ.28,15.598 ಹಣ ಹಾಗೂ 2500 ಲೀಟರ್ ಮಧ್ಯ ಮಾತ್ರ ವಶಪಡಿಸಿಕೊಳ್ಳಲಾಗಿದೆ. ಚುನಾವಣೆ ಅಕ್ರಮಗಳು, ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಜೈಲು ಸೇರಿದ್ದಲ್ಲದೆ, ತಮ್ಮ ತವರು ಜಿಲ್ಲೆ ಬಳ್ಳಾರಿ ಪ್ರವೇಶಿಸದಂತೆ ಸುಪ್ರೀಂ ಕೋರ್ಟ್‌ನಿಂದ ಒಂದೂವರೆ ದಶಕದಿಂದ ನಿರ್ಬಂಧಕ್ಕೆ ಒಳಗಾಗಿದ್ದ ಮಾಜಿ ಸಚಿವ, ಹಾಲಿ ಬಿಜೆಪಿಗೆ ಸೇರಿದ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರಿಗೆ ನ್ಯಾಯಾಲಯದಿಂದ ಅವರು ಬಳ್ಳಾರಿ ಜಿಲ್ಲೆ ಪ್ರವೇಶಿಸಲು ಹಾಗೂ ನೆಲೆಸಲು ಕೋರ್ಟ್ ಅನುಮತಿ ನೀಡಿದ್ದನ್ನೇ ಉಪ ಚುನಾವಣೆ ತಾಲೀಮಿನ ರೀತಿ ಅದ್ದೂರಿಯ ಸ್ವಾಗತ ಕಾರ್ಯಕ್ರಮ ಮಾಡಿಕೊಂಡು, ಸಂಡೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡರು.

ಇತ್ತ ಕಾಂಗ್ರೆಸ್ ಪಕ್ಷ ಚುನಾವಣಾ ಘೋಷಣೆಯ ಪೂರ್ವ ದಿನ ಅಕ್ಟೋಬರ್ 14, 2024 ರಂದು ನಡೆದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವ ಶಾಸಕ, ಸಂಸದರು, ಸರ್ಕಾರದ ವೆಚ್ಚದಲ್ಲಿ ನಡೆದ ಸಾಧನಾ ಸಮಾವೇಶ ಸಮಾರಂಭದಲ್ಲಿ ಸಂಡೂರು ತಾಲೂಕಿನ ಸರ್ಕಾರದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ ಸುಮಾರು 400 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಪೂರ್ಣ ಯೋಜನೆಗಳನ್ನು ಸಂಡೂರು ಜನತೆಗೆ ಅರ್ಪಿಸಿ ಚುನಾವಣೆ ಪ್ರಚಾರವನ್ನು ಪ್ರಾರಂಭಿಸಿದರು. ಚುನಾವಣಾ ದಿನಾಂಕ ಘೋಷಣೆಯಾದ ತಕ್ಷಣದಿಂದ ಚುನಾವಣಾ ನೀತಿ ಸಂಹಿತೆ ಜಾರಿಯಾಗಿತ್ತು. ಚುನಾವಣೆ ಘೋಷಣೆಯಾದ ಮರು ದಿನವೇ ಬಿಜೆಪಿ, ಕಾಂಗ್ರೆಸ್ ಸ್ವರ್ಧಾಕಾಂಕ್ಷಿಗಳು ಸಭೆ ಸಮಾರಂಭಗಳ ಮೂಲಕ ಸಭೆಯಲ್ಲಿ ನೂರಾರು ಬೆಂಬಲಿಗರನ್ನು ಸೇರಿಸಿ ಹಣದ ಹೊಳೆಯನ್ನು ಹರಿಸಿದರು. ಬಿಜೆಪಿಯೂ ತಾನೇನೂ ಕಮ್ಮಿ ಇಲ್ಲ ಎಂದು ಭರ್ಜರಿ 'ವ್ಯವಸ್ಥೆ' ಮಾಡಿತು. ಇಲ್ಲಿ ಉಪ ಚುನಾವಣೆಗೂ ಚುನಾವಣಾ ಆಯೋಗಕ್ಕೂ ಯಾವುದೇ ಸಂಬಂಧ ಇಲ್ಲದಂತೆ ಕಣ್ಣು ಮುಚ್ಚಿಕೊಂಡಿದ್ದು ವಿಪರ್ಯಾಸ.

ಒಟ್ಟಾರೆ, ಚುನಾವಣಾ ಆಯೋಗ ಉಪ ಚುನಾವಣೆಯಲ್ಲಿ ಲೆಕ್ಕಕ್ಕೆ ಉಂಟು ಆಟಕ್ಕೆ ಇಲ್ಲದಂತೆ ಇದ್ದಿದ್ದನ್ನು ನಾವು ಕಾಣಬಹುದು. ಉಪ ಚುನಾವಣೆಯಲ್ಲಿ ಅಕ್ರಮವನ್ನು ತಡೆಯಲು ಚುನಾವಣಾ ಆಯೋಗ ವಿಫಲವಾಗಿದೆ. ಚುನಾವಣಾ ಅಧಿಕಾರಿಗಳ ನಿರ್ಲಕ್ಷ ಎದ್ದು ಕಾಣುತ್ತಿದೆ. ಉಪ ಚುನಾವಣೆಯ ಕೊನೆಯ ದಿನಗಳಲ್ಲಂತೂ ಚಿತ್ರಣವೇ ಬದಲಾಗಿ ಹೋಗಿತ್ತು. ಅತಿ ದುಬಾರಿ ವಿಧಾನಸಭಾ ಚುನಾವಣೆ ಎಂಬುದು ಎಲ್ಲೆಲ್ಲೂ ಕಾಣುತ್ತಿತ್ತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಭ್ರಷ್ಟತೆ, ಚುನಾವಣಾ ಅಕ್ರಮಗಳು ನಡೆದು, ನೋಡ ನೋಡುವಷ್ಟರಲ್ಲಿ ಚುನಾವಣೆ ಮುಗಿದು ಹೋಗಿತ್ತು.

ಉಪ ಚುನಾವಣೆಯ 2 ದಿನ ಮುಂಚೆ ಬಿಜೆಪಿಯು ಮತದಾರರಿಗೆ ಒಂದು ಸಾವಿರ ರೂಪಾಯಿ ನೀಡುವ ಮೂಲಕ ಅಕ್ರಮಕ್ಕೆ ಚಾಲನೆ ನೀಡಿತ್ತು. ಪ್ರತಿಯಾಗಿ ಚುನಾವಣಾ ಹಿಂದಿನ ದಿನ ಒಂದು ಮತಕ್ಕೆ ಕಾಂಗ್ರೆಸ್ ಅಭ್ಯರ್ಥಿ ರೂ.2000 ಹಂಚಿದ್ದಾರೆ ಎಂಬ ಸುದ್ದಿಯೂ ಹರಿದಾಡಿತು. ಚುನಾವಣಾ ಅಕ್ರಮದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗಳಲ್ಲಿ ಸ್ಪರ್ದೆ ಇತ್ತು. ಇಂತಹ ದುಬಾರಿ ಚುನಾವಣೆಯಲ್ಲಿ ಎಷ್ಟು ಕೋಟಿ ಖರ್ಚು ಮಾಡಿರಬಹುದು ಅಂದಾಜಿಸಲು ಸಾಧ್ಯವಾಗುತ್ತಿಲ್ಲ.

ಸಂಡೂರು ವಿಧಾನಸಭಾ ಕೇತ್ರದಲ್ಲಿ ಸುಮಾರು 2,36,402 ಮತದಾರರು ಇದ್ದಾರೆ. ಸಾಮಾನ್ಯವಾಗಿ ಚುನಾವಣೆಗಳಲ್ಲಿ ಶೇ.80 ರಿಂದ 85 ಶೇಕಡಾ ಮತಗಳಿಗೆ ಹಣ ಹಂಚಿಕೆ ಮಾಡುತ್ತಾರೆ. ಅಂದರೆ ಸುಮಾರು 2 ಲಕ್ಷ ಮತಗಳಿಗೆ 2000 ಸಾವಿರ ಎಂದರೆ ಒಬ್ಬ ಅಭ್ಯರ್ಥಿ 40 ಕೋಟಿ ಹಣವನ್ನು ಹಂಚಿದ್ದಾರೆ, ಒಟ್ಟು ಎರಡು ಅಭ್ಯರ್ಥಿಯಿಂದ 80 ಕೋಟಿ ಹಣ ಹಂಚಿದ್ದಾರೆ ಎಂದು ಅಂದಾಜಿಸಬಹುದು. ಸಂಡೂರು ಕ್ಷೇತ್ರದಲ್ಲಿ ಬಿಜೆಪಿಯ ಎಲ್ಲಾ ಹಂತದ ಮುಖಂಡರು ವಾಸ್ತವ್ಯ ಮಾಡಿ ಚುನಾವಣೆ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ನೂರಾರು ಸಭೆಗಳನ್ನು ಮಾಡಿದ್ದಾರೆ. ಪ್ರಚಾರದಲ್ಲಿ ಕಾಂಗ್ರೆಸ್ ಸಹ ನೂರಾರು ಸಭೆಗಳನ್ನು ನಡೆಸಿದೆ. ಮುಖ್ಯಮಂತ್ರಿಯವರು ಮೂರು ದಿನ ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿ 17 ಸಭೆಗಳ ನಡೆಸಿದ್ದು 1,50,000 ಜನರು ತಲುಪಿದ್ದಾರೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ.

ಮುಖ್ಯಮಂತ್ರಿಗಳು ಬಂದರೆ ಜಿಲ್ಲೆಯ ಜನತೆಗೆ ಆತಂಕ!

ಕಳೆದ ಜುಲೈ 21 ರಂದು ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆಗಾಗಿ ಜೆಎಸ್‌ಡಬ್ಲ್ಯೂನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ವಾಸ್ತವ್ಯ ಹೂಡಿ ಪಾಲ್ಗೊಂಡ ನಂತರ ತಮ್ಮ ಪಕ್ಷವೇ ವಿರೋಧಿಸಿದ 3,667 ಎಕರೆಯ ಭೂಮಿಯನ್ನು ಮತ್ತೆ ಜಿಂದಾಲ್‌ಗೆ ಕ್ರಯಕ್ಕೆ ನೀಡಲು ಸಚಿವ ಸಂಪುಟ ತೀರ್ಮಾನಿಸಿತು. ಈಗ ಮೂರು ದಿನ ವಾಸ್ತವ್ಯದಲ್ಲಿ 10 ಗಣಿಗಳ ಹರಾಜುಗೆ ಟೆಂಡರ್, 247 ಗಣಿಗಾರಿಕೆ, ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನದಿಂದ ಹೊರಗಿಡುವದು, ನಾರಿಹಳ್ಳ ಡ್ಯಾಂನಲ್ಲಿ ಜಲ ವಿದ್ಯುತ್ ಉತ್ಪಾದನೆ ಇತ್ಯಾದಿ ಕೇಳಿ ಬರುತ್ತಿದೆ. ಗಣಿ ಮತ್ತು ಉದ್ಯಮದಾರರ ದಲಾಲಿಯಾಗಿದ್ದ ಕಾಂಗ್ರೆಸ್ ನಾಯಕ ಕೆ.ಸಿ.ಕೊಂಡಯ್ಯ ರವರಿಂದ ಸಂತೋಷ್ ಲಾಡ್ ಅವರಿಗೆ ದಲಾಲಿ ಕೆಲಸ ಹಸ್ತಾಂತರವಾಗಿರುವುದರ ಪರಿಣಾಮ ಇದಾಗಿದೆ. ರಾಜ್ಯ ಸರ್ಕಾರದ ಎಲ್ಲಾ ಜಾತಿಗಳ ಸಚಿವರು, ಶಾಸಕರು ಕ್ಷೇತ್ರಕ್ಕೆ ಭೇಟಿ ನೀಡಿ ಪ್ರಚಾರ ನಡೆಸಿದ ಖರ್ಚು ಎಷ್ಟು?, ಪರವಾನಿಗೆ ಇಲ್ಲದೆ ನೂರಾರು ವಾಹನಗಳನ್ನು ಚುನಾವಣೆಯಲ್ಲಿ ಬಳಸಿಕೊಂಡಿರುವುದಕ್ಕೆ ಲೆಕ್ಕ ಎಲ್ಲಿದೆ? ಬೆಜೆಪಿಯವರ ಕಥೆಯೂ ಏನೂ ಕಡಿಮೆ ಇಲ್ಲ. ಈ ನಡುವೆ ಕಾರ್ಯಕರ್ತರಿಗೆ ಕುಡಿಯಲು, ಊಟ ವ್ಯವಸ್ಥೆ ಇತರೆ ಎಂದು ಎಷ್ಟು ಖರ್ಚು ಮಾಡಿರಬಹುದು. ಸಭೆಗಳು/ಬಹಿರಂಗ ಸಭೆಯ ಹೆಸರಿನಲ್ಲಿ ಎಷ್ಟು ಖರ್ಚು ಮಾಡಿರಬಹುದು ಲೆಕ್ಕ ಹಾಕಿದರೆ. ಒಟ್ಟಾರೆಯಾಗಿ ಒಬ್ಬ ಅಭ್ಯರ್ಥಿ ರೂ.150 ಕೋಟಿಯಿಂದ ರೂ.200 ಕೋಟಿಯಷ್ಟು ಹಣವನ್ನು ಉಪ ಚುನಾವಣೆಗೆ ಖರ್ಚು ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಇವರು ಖರ್ಚು ಮಾಡಿದ ಹಣ ಯಾರದ್ದು? ಈ ಅಭ್ಯರ್ಥಿಗಳು ಚುನಾವಣೆಗೆ ಸುಮಾರು ರೂ.150 ಕೋಟಿಯಿಂದ ರೂ.200 ಕೋಟಿ ಖರ್ಚು ಮಾಡಿದ್ದಾರೆ ಎಂದರೆ ಇವರು ಚುನಾವಣಾ ಆಯೋಗಕ್ಕೆ ಚುನಾವಣೆಗೆ ಖರ್ಚು ಮಾಡಿರುವ ಹಣದ ಮಾಹಿತಿಯನ್ನು ನೀಡುವಾಗ ಇವರು ಖರ್ಚು ಮಾಡಿರುವ ಹಣದ ಮಾಹಿತಿ ನೀಡುವ ತಾಕತ್ತು, ಧೈರ್ಯ ಇದೆಯೇ? ಇಷ್ಟು ಕೋಟಿ ಹಣ ಎಲ್ಲಿಂದ ಬಂತು? ಸ್ಥಳೀಯ ಕೈಗಾರಿಕಾ ಉದ್ಯಮಗಳು, ಗಣಿ ಮಾಲೀಕರು, ಗುತ್ತಿಗೆದಾರರು ನೀಡಿರುವ ಹಣ, ಅಕ್ರಮ ಗಳಿಕೆಯ ಹಣ ಇದಲ್ಲವೇ?. ಇದು ಬಡವರ, ದುಡಿಯುವ ರೈತ, ಕಾರ್ಮಿಕರ ಬೆವರಿನ ಹನಿಯ ಪಾಲನ್ನು ಕೊಳ್ಳೆ ಹೊಡೆದು ಭ್ರಷ್ಟಾಚಾರ ಮಾಡಿರುವ ಹಣವಲ್ಲವೇ? ಎಂಬ ಪ್ರಶ್ನೆಗಳು ಮತದಾರರನ್ನು ಕಾಡಬೇಕಿತ್ತು!

ಈ ಚುನಾವಣೆಯಲ್ಲಿ ಯಾವುದೇ ಪಕ್ಷದ ಅಭ್ಯರ್ಥಿ ಗೆದ್ದರೂ ಸೋಲುವುದು ಜನತೆಯ ಹಿತಾಸಕ್ತಿಗಳು ಮತ್ತು ಪ್ರಜಾಪ್ರಭುತ್ವ. ನೀತಿಸಂಹಿತೆಯನ್ನು ಮೀರಿ ಅಕ್ರಮಗಳು ಈ ಚುನಾವಣೆಯಲ್ಲಿ ನಡೆದಿರುವುದು ಕಾಣುತ್ತದೆ. ಅಧಿಕಾರದಲ್ಲಿರುವವರು, ವಿರೋಧ ಪಕ್ಷದವರು ಪರಸ್ಪರ ಕೆಸರಾಟ ಮಾಡಿಕೊಂಡರೂ, ತಾವು ಭಿನ್ನ ಎಂದು ಬಿಂಬಿಸಿಕೊಂಡರೂ ಇಂತಹ ನೀತಿ ಸಂಹಿತೆಯ ಉಲ್ಲಂಘನೆ ಮತ್ತು ಅನೈತಿಕ ಮೌಲ್ಯಗಳ ಪಾಲನೆಯಲ್ಲಿ ಒಬ್ಬರಿಗಿಂತ ಒಬ್ಬರು ಬೇರೆ ಏನಲ್ಲ ಎನ್ನುವುದನ್ನು ತೋರಿಸಿದ್ದಾರೆ. ಈ ಬಂಡವಾಳಗಾರರ ಪಕ್ಷಗಳು ಎಂತಹ ಮೌಲ್ಯಗಳನ್ನು ಜನರ ನಡುವೆ ಬಿತ್ತಲು ಹೊರಟಿದ್ದಾರೆ ಎನ್ನುವುದು ಮತ್ತೆ ಇಲ್ಲಿಯೂ ಎದ್ದು ಕಾಣುತ್ತದೆ. ಹಾಗಾಗಿ ಚುನಾವಣೆಯಲ್ಲಿ ಜನತೆಯ ಮೂಲಭೂತ ಸಮಸ್ಯೆಗಳು ಗೌಣವಾಗಿ ಪರಸ್ಪರ ನಿಂದನೆ ಹೂಂಕಾರಗಳೇ ವಿಜೃಂಭಿಸಿರುವುದು, ಪರಿಣಾಮವಾಗಿ ಜನತೆಯು ಸಹ ಈ ಪಕ್ಷಗಳು ಸೃಷ್ಟಿಸಿದ ಭ್ರಮೆಗಳಲ್ಲಿ ತೇಲಿ ಹೋಗಿರುವುದು ಮತ್ತು ಅಲ್ಪ ಲಾಭದ ದುರಾಸೆಗೆ ಬಿದ್ದಿರುವುದು ದುರಂತ. ಇದರಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳ ಪಾಲು ನಿರಾಕರಿಸಲಾಗದ ಸತ್ಯ. ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವುದು ಹೇಗೆ? ಜನತೆಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು ಹೇಗೆ ಎನ್ನುವುದು ಗಹನವಾದ ಪ್ರಶ್ನೆ.

ಹಾಗಾಗಿ, ಪರ್ಯಾಯ ರಾಜಕಾರಣವನ್ನು ಜನತೆಯ ಆಂದೋಲನದಲ್ಲಿ ರೂಪಿಸುವ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವುದು, ಅದಕ್ಕಾಗಿ ಶ್ರಮಿಸುವುದು ಅತಿ ಅವಶ್ಯಕ.

ಹೀಗಿರುವಾಗಲೂ ಅತ್ಯಂತ ಆಗರ್ಭ ಮ್ಯಾಂಗನೀಸ್ ಅದಿರು, ಭಾರಿ ಕೈಗಾರಿಕೆಗಳು ಇರುವ ಈ ತಾಲೂಕನ್ನು ಮತ್ತದೇ ಗಣಿ ಲೂಟಿಕಾರರಿಗೆ, ಮತೀಯ ದ್ವೇಷ ಹಬ್ಬಿಸುವ ಬಿಜೆಪಿಗೆ ಒಪ್ಪಿಸಲು ಅವಕಾಶ ನೀಡಬೇಕೇ ಎನ್ನುವ ಪ್ರಶ್ನೆ ಈ ಚುನಾವಣಾ ಹೋರಾಟದಲ್ಲಿ ಮುಖ್ಯವಾಗಿದ್ದು ಜನತೆಯ ತೀರ್ಪು ಅಂತಹ ಶಕ್ತಿಗಳಿಗೆ ಅವಕಾಶ ನೀಡದಿಂತಿರಲಿ ಎನ್ನುವ ಆಶಯ ನಮ್ಮದು.

ಕೊರೊನ ಕಾಲದ ಖರೀದಿ ಹಗರಣ...... ಪುಟ 3 ರಿಂದ

ಪಕ್ಷದ ಸ್ಥಾನದಲ್ಲಿರುವ ಬಿಜೆಪಿ ನಾಯಕರು ತನಿಖೆಗೆ ಸಹಕರಿಸಬೇಕಿತ್ತು. ಆದರೆ ಅದರ ಬದಲು ವಿಚಾರಣಾ ಆಯೋಗದ ಮುಖ್ಯಸ್ಥರ ಮೇಲೆಯೇ ಕೇಂದ್ರ ಸಚಿವ ಪ್ರಹ್ಲಾದ ಜೋಷಿಯವರು ಮಾಡಿರುವ ಮಾತಿನ ದಾಳಿ ಅಕ್ಷಮ್ಯ. ನ್ಯಾ. ಡಿ ಕುನ್ಹಾ ಅವರು ರಾಜಕೀಯ ಪೂರ್ವಾಗ್ರಹದಿಂದ ವರ್ತಿಸುತ್ತಿದ್ದಾರೆ, ಅವರು ಸ್ವತಂತ್ರ ವಿಚಾರಣಾ ಸಮಿತಿಯ ಮುಖ್ಯಸ್ಥರಂತೆ ಕೆಲಸ ಮಾಡುವ ಬದಲು 'ಏಜೆಂಟ'ರಂತೆ ವರ್ತಿಸುತ್ತಿದ್ದಾರೆ ಎಂದು ಅವರು ಮಾಡಿರುವ ಆರೋಪ ಖಂಡನಾರ್ಯ. ಈ ಧಾಳಿ ಉಪ ಚುನಾವಣೆಗಳ ಕಾಲದಲ್ಲಿ ಬಿಜೆಪಿಯ ಮುಖವನ್ನು ಉಳಿಸಲು ಮತ್ತು ಹಗರಣಗಳನ್ನು ಮರೆ ಮಾಚಲು ಹೂಡಿರುವ ತಂತ್ರವಷ್ಟೆ. ತನಿಖೆ ನಡೆಸುತ್ತಿರುವ ಮುಖ್ಯಸ್ಥರ ಮೇಲೆಯೇ ತೀವ್ರ ವಾಗ್ದಾಳಿಗಳನ್ನು ನಡೆಸಿ ಬೆದರಿಸುವುದನ್ನು ಕೇಂದ್ರ ಸಚಿವ ಕುಮಾರಸ್ವಾಮಿಯವರು ಸಹ ನಡೆಸಿರುವುದನ್ನು ಗಮನಿಸಬಹುದು. 'ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ' ಎನ್ನುವಂತಿದೆ ಇವರ ನಡತೆ. ಇಂತಹ ಯಾವ ಗೊಡ್ಡು ಬೆದರಿಕೆಗಳಿಗೂ ತನಿಖಾ ಸಂಸ್ಥೆಯ ಮುಖ್ಯಸ್ಥರು ಹೆದರಬೇಕಿಲ್ಲ, ಹಿಂಜರಿಯ ಬೇಕಿಲ್ಲ. ಮತ್ತು ನಿಷ್ಠುರ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸುವಂತೆ ಆಗಬೇಕು. ಇದಕ್ಕೆ ಸಾರ್ವಜನಿಕರು ಮತ್ತು ಅಧಿಕಾರದಲ್ಲಿರುವ ಸರ್ಕಾರವು ಬೆಂಬಲ ನೀಡಬೇಕು. ಇದು ಜನಸಾಮಾನ್ಯರು ತಮ್ಮ ಬೆವರಿನಿಂದ ನೀಡಿದ ತೆರಿಗೆ ಹಣ. ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲಿ ಅಮಾನವೀಯವಾಗಿ ವರ್ತಿಸಿದವರ ಬಗ್ಗೆ ಯಾವುದೇ ರೀತಿಯ ರಿಯಾಯಿತಿಯೂ ಇರಕೂಡದು. ರಾಜ್ಯ ಸರಕಾರ ಈ ಪ್ರಶ್ನೆಯನ್ನು ಚುನಾವಣಾ ಕಾಲದ ತಾತ್ಕಾಲಿಕ ತಂತ್ರಗಾರಿಕೆಗಳಿಗೆ ಬಳಸದೇ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಜನತೆಯ ಹಿತ ಕಾಯುವ ಸಂವಿಧಾನಿಕ ಕರ್ತವ್ಯವನ್ನು ನಿರ್ವಹಿಸಬೇಕು.

ಮತ್ತೊಂದು ಸಂಗತಿ ಎಂದರೆ ದೇಶದಲ್ಲಿ ಕೊರೊನ ಸೋಂಕಿನಿಂದ ಪ್ರಾಣ ಕಳೆದುಕೊಂಡವರ ವಾಸ್ತವಿಕ ಸಂಖ್ಯೆಯನ್ನು ಕೇಂದ್ರ ಸರಕಾರ ಮುಚ್ಚಿಹಾಕಲು ಪ್ರಯತ್ನಿಸಿದೆ ಎಂಬ ಆರೋಪವೂ ಕೇಳಿ ಬಂದಿತ್ತು.. ದೇಶದಲ್ಲಿ ಕೊರೊನ ಸಾವಿನ ಸಂಖ್ಯೆ ಕೇವಲ 5,33,570 ಎಂದು ದಾಖಲಿಸಿತ್ತು.

ಆದರೆ ಹಲವು ಅಂತರ ರಾಷ್ಟ್ರೀಯ ತಜ್ಞ ಸಂಸ್ಥೆಗಳು ಅಧ್ಯಯನ ನಡೆಸಿ, ವಾಸ್ತವಿಕ ಸಾವುಗಳ ಸಂಖ್ಯೆ ಅಧಿಕೃತ ದಾಖಲೆಗಳ ಹಲವು ಪಟ್ಟು ಜಾಸ್ತಿ ಎಂದು ಸಾರಿದವು. ಸತ್ಯವನ್ನು ಹೊರ ತಂದವು.

ರಾಜ್ಯದಲ್ಲಿಯೂ ಕೊರೊನ ಸಂಬಂಧಿ ಸಾವುಗಳ ಕುರಿತ ಅಧಿಕೃತ ಸಂಖ್ಯೆ 37,007 ಮಾತ್ರ ಇದೆ. ಆದರೆ ವಾಸ್ತವಿಕ ಸಾವುಗಳು 50,000 ವನ್ನು ಮೀರುತ್ತವೆ ಎನ್ನುತ್ತವೆ ಕೆಲವು ಮೂಲಗಳು. ಜಗತ್ ಪ್ರಸಿದ್ದಿ ಪಡೆದ ಕೊರೊನ ಬಿಕ್ಕಟ್ಟು ನಿರ್ವಹಣೆಯ 'ಕೇರಳ ಮಾದರಿ' ಕಣ್ಣ ಮುಂದೆ ಇದ್ದರೂ ಈ ಸರಕಾರಗಳು ಅದನ್ನು ಸರಿಯಾಗಿ ಪಾಲಿಸಲಿಲ್ಲ. ಪಾಲಿಸಿದಿದ್ದರೆ ಎಷ್ಟೋ ಅಮೂಲ್ಯ ಜೀವಗಳನ್ನು ಉಳಿಸಿ ಕೊಳ್ಳಬಹುದಿತ್ತು. ಈಗಲಾದರೂ ಕೊರೊನ ಹಗರಣದ ಅಪರಾಧಿಗಳನ್ನಾದರೂ ಪತ್ತೆ ಹಚ್ಚಿ ಕಠಿಣ ಕ್ರಮ ವಹಿಸಬೇಕು. ಸೂಕ್ತಪಾಠ ಕಲಿಸಬೇಕು.

ಜಾರ್ಖಂಡ್ ವಿಧಾನಸಭಾ ಚುನಾವಣೆ

ಭ್ರಷ್ಟ, ವಿಭಜಕ ರಾಜಕಾರಣ ಸೋಲಿಸಲು–ಪರ್ಯಾಯದ ಹುಡುಕಾಟ

ಸುಬೋಧ್ ವರ್ಮಾ

ಜಾರ್ಖಂಡ್ ರಾಜ್ಯವು ತನ್ನ 6ನೇ ವಿಧಾನಸಭೆಯನ್ನು ಆಯ್ಕೆ ಮಾಡಲು ನವೆಂಬರ್ 13 ಮತ್ತು 20, 2024 ರಂದು ಎರಡು ಹಂತಗಳಲ್ಲಿ ಚುನಾವಣೆ ಎದುರಿಸುತ್ತಿದೆ. ನವೆಂಬರ್ 2000 ರಲ್ಲಿ ರಚನೆಯಾದ ಬುಡಕಟ್ಟು ಪ್ರಾಬಲ್ಯದ ಈ ರಾಜ್ಯವು 24 ವರ್ಷಗಳ ಅವಧಿಯಲ್ಲಿ 13 ಸರ್ಕಾರಗಳನ್ನು ಕಂಡಿದೆ. (ಇದರಲ್ಲಿ ಏಳು ಮುಖ್ಯಮಂತ್ರಿಗಳು ಮತ್ತು ಮೂರು ಬಾರಿ ರಾಷ್ಟ್ರಪತಿ ಆಳ್ವಿಕೆ ಒಳಗೊಂಡಿದೆ). ಈ ಅವಧಿಯಲ್ಲಿ ಸರಿ ಸುಮಾರು ಅರ್ಧದಷ್ಟು ಕಾಲ ಭಾರತೀಯ ಜನತಾ ಪಕ್ಷ ವೇ(ಬಿಜೆಪಿ) ಆಡಳಿತ ನಡೆಸಿದೆ. ಉಳಿದಂತೆ ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷವು (ಜೆಎಂಎಂ) ಇತರರೊಂದಿಗೆ ಮೈತ್ರಿ ಮಾಡಿಕೊಂಡು ಆಡಳಿತ ನಡೆಸಿದೆ.

2006–2008ರಲ್ಲಿ ಸ್ವತಂತ್ರವಾಗಿ ಶಾಸಕರಾಗಿದ್ದ ಮಧುಕೋಡಾ ಅವರು ಸುಮಾರು ಎರಡು ವರ್ಷಗಳ ಕಾಲ ಜೆಎಂಎಂ ಮತ್ತು ಕಾಂಗ್ರೆಸ್ ಬೆಂಬಲದೊಂದಿಗೆ ಆಡಳಿತ ಮಾಡಿದ್ದರು, ಆದರೂ ಮಧುಕೋಡ ಅವರು ಮೂಲತಃ ಬಿಜೆಪಿ ಶಾಸಕರಾಗಿದ್ದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಾರ್ಖಂಡ್ ನ ಜನರು ಈ ಪಕ್ಷ ಅಥವಾ ಆ ಪಕ್ಷವನ್ನು ಬೆಂಬಲಿಸುತ್ತಾ, ಆಗಾಗ್ಗೆ ಒಡೆದ ಜನಾದೇಶಗಳನ್ನು ನೀಡುವ ಸರ್ಕಾರಗಳನ್ನೇ ನೋಡುತ್ತಿದ್ದಾರೆ. ಹಾಗಾಗಿ, ಹೊಸ ಪರ್ಯಾಯಕ್ಕಾಗಿ ಹುಡುಕಾಟ ಜಾರ್ಖಂಡ್ ನಲ್ಲಿ ನಡೆಯುತ್ತಲೇ ಇದೆ.

ಇಂತಹ ಹುಡುಕಾಟದ ಪರಿಸ್ಥಿತಿ ಜಾರ್ಖಂಡ್ ಗೆ ಮಾತ್ರ ಸೀಮಿತವಾಗದೆ, ಇನ್ನಿತರೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಜನರು ಕೂಡ ವಿವಿಧ ರಾಜಕೀಯ ಪಕ್ಷಗಳ ಬಾಗಿಲುಗಳನ್ನು ಆಗಾಗ್ಗೆ ತಟ್ಟುತ್ತಲೇ ಇರುತ್ತಾರೆ. ಆದರೆ ಜಾರ್ಖಂಡ್ ನಲ್ಲಿ, ದೀರ್ಘ ಮತ್ತು ಪ್ರಯಾಸಕರ ಹೋರಾಟದ ನಂತರ ಹೊಸ ರಾಜ್ಯ ರಚನೆಯ ಆರಂಭದಿಂದಲೇ, ಸ್ಥಳೀಯವಾಗಿ ಬಡತನ, ಅಭಾವ ಮತ್ತು ಹಕ್ಕು ನಿರಾಕರಣೆಗಳ ಸಂಕೋಲೆಗಳನ್ನು ಮುರಿಯಬಹುದು ಎಂಬ ಭರವಸೆಯನ್ನು ಹುಟ್ಟುಹಾಕಿತ್ತು. ದೇಶದ ಅಂದಾಜು ಶೇಕಡ 40 ರಷ್ಟು ಖನಿಜ ಸಂಪತ್ತು ಈ ರಾಜ್ಯವು ಹೊಂದಿದೆ. ಹಾಗಾಗಿಯೇ ಉದ್ಯೋಗಗಳ ಆಧಾರದ ಮೇಲೆ ಸಮೃದ್ಧಿ ಮತ್ತು ಘನತೆಯ ಜೀವನ ಶೀಘ್ರದಲ್ಲೇ ಬರಲಿದೆ ಎಂಬ ಭರವಸೆಯನ್ನು ಜನರು ಇಟ್ಟುಕೊಂಡಿದ್ದಾರೆ. ಆದರೆ, ವಿಭಜಕ, ಭ್ರಷ್ಟ ಗಾಗೂ ಧಾರ್ಮಿಕ ಒಳ ಕಾರ್ಯ ಸೂಚಿಗಳ ಆಡಳಿತದಿಂದಾಗಿ ಇದು ಸಾಧ್ಯವಾಗಿಲ್ಲ.

ಆದರೆ, ಜನರು ಕನಿಷ್ಠ ಉದ್ಯೋಗ, ಸಮೃದ್ಧಿಯ ಭರವಸೆಯೊಂದಿಗೆ ರಾಜಕೀಯ ಆಡಳಿತದ ಹುಡುಕಾಟದಲ್ಲಿ ಇದ್ದಾರೆ. ಜಾರ್ಖಂಡ್ 2005–06 ರಲ್ಲಿ ಶೇ.74 ಬಡತನದೊಂದಿಗೆ ದೇಶದ ಎರಡನೇ ದೊಡ್ಡ ಬಡ ರಾಜ್ಯವಾಗಿದೆ. 2019–21 ರಲ್ಲಿ, ಇದು ಇನ್ನೂ ಶೇ.29 ಬಡತನದ ದರ ಹೊಂದಿದೆ ಎಂದು ಅಂಕಿಅಂಶಗಳು ಅಂದಾಜಿಸಿವೆ. ಈ ಎರಡು ವರ್ಷಗಳಲ್ಲಿ, ಜಾರ್ಖಂಡ್ ಅನ್ನು ಕೆತ್ತಿದ ಅದರ ಮೂಲ ಅಸ್ತಿತ್ವದ ನೆರೆಯ ಬಿಹಾರವು ಅತ್ಯಂತ ಬಡ ರಾಜ್ಯವಾಗಿತ್ತು. ಇದು ನೀತಿ (NITI) ಆಯೋಗ ಅಂದಾಜಿಸಿದ ಬಡತನ ಸೂಚ್ಯಂಕವನ್ನು ಆಧರಿಸಿದೆ. ಇದು ಬಡತನದ ಬದಲಿಗೆ ವಿವಾದಾತ್ಮಕ ವ್ಯಾಖ್ಯಾನವನ್ನು ಅಳವಡಿಸಿಕೊಂಡಿದೆ ಎನ್ನಲಾಗಿದೆ. ಆದಾಯವನ್ನು ಗಣನೆಗೆ ತೆಗೆದುಕೊಳ್ಳದೆ ಈ ಅಳತೆ ಎಂದು ವಿಮರ್ಶಕರು ಭಾವಿಸುತ್ತಾರೆ ಬಡತನವನ್ನು ಕಡಿಮೆ ಅಂದಾಜು ಮಾಡುತ್ತಿದೆ. ಅದು ಇರಲಿ, ಬೇರೆ ಯಾವುದೇ ವ್ಯಾಖ್ಯಾನದ ಅನುಪಸ್ಥಿತಿಯಲ್ಲಿ, ಡೇಟಾವು ಒಂದು ಅಂಶವನ್ನು ವಿವರಿಸುತ್ತದೆ: ಜಾರ್ಖಂಡ್ ತನ್ನ ಬಡತನ ಮತ್ತು ಅಭಾವದ ಆಘಾತಕಾರಿ ಮಟ್ಟವನ್ನು ಭೇದಿಸಲು ಅಥವಾ ಸುಧಾರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಹತಾಶ

ಜಾರ್ಖಂಡ್ ದೇಶದ ಎರಡನೇ ದೊಡ್ಡ ಬಡ ರಾಜ್ಯ ಎಂದು ಅಂದಾಜಿಸಿಲಾಗಿದೆ; ಆದರೆ ಪ್ರಬಲ ರಾಜಕೀಯ ಪಕ್ಷಗಳು ರಾಜ್ಯದ ಅಭಿವೃದ್ಧಿಗೆ ಅಷ್ಟೇನೂ ಕಾಳಜಿ ವಹಿಸುತ್ತಿಲ್ಲ.

ಜನರು ಒಂದು ಮಾರ್ಗವನ್ನು ಹುಡುಕುತ್ತಾ ಒಂದು ಪಕ್ಷದಿಂದ ಇನ್ನೊಂದಕ್ಕೆ ಓಡುವುದರಲ್ಲಿ ಆಶ್ಚರ್ಯವೇನು ಇಲ್ಲ ಎನಿಸುತ್ತದೆ.

ಚುನಾವಣಾ ರಾಜಕೀಯ ಸುತ್ತಾ ಸುತ್ತುವ ಪರಿ

ಜಾರ್ಖಂಡ್‌ನಲ್ಲಿನ ಘರ್ಷಣೆಗಳು, ನಿರಂತರವಾಗಿ ಬದಲಾಗುತ್ತಿರುವ ಚುನಾವಣಾ ಮೆರಿ–ಗೋ–ರೌಂಡ್ ನಂತೆ ಒಂದು ನೋಟವಾಗಿದೆ. ಆಡಳಿತಗಳ ವಿಫಲತೆಯ ಪ್ರತಿಬಿಂಬ ಇಲ್ಲಿ ಗೋಚರಿಸುತ್ತದೆ. ಚುನಾವಣಾ ಆಯೋಗದ ಡೇಟಾವನ್ನು ಆಧರಿಸಿ ಕೆಳಗಿನ ಚಾರ್ಟ್ ನಲ್ಲಿ ನೋಡಬಹುದು. ಇದು ಎರಡು ಪ್ರಮುಖ ಮೈತ್ರಿಕೂಟಗಳು ಮತ್ತು ಇತರರು ಗೆದ್ದಿರುವ ಸ್ಥಾನಗಳ ಸಂಖ್ಯೆಯನ್ನು ಪ್ರತಿಬಬಿಸುತ್ತದೆ. ಬಿಜೆಪಿ ಮೈತ್ರಿಕೂಟವು ಸ್ವತಃ ಆಲ್ ಜಾರ್ಖಂಡ್ ವಿದ್ಯಾರ್ಥಿ ಸಂಘ (ಎಜೆಎಸ್‌ಯು) ಅನ್ನು ಒಳಗೊಂಡಿತ್ತು, ಇದರ ಮೈತ್ರಿಕೂಟವು ಒಟ್ಟಾಗಿ 2014 ರಲ್ಲಿ 42 ಸ್ಥಾನಗಳನ್ನು ಗೆದ್ದು ಸರ್ಕಾರವನ್ನು ರಚಿಸಿತು. ಕಾಂಗ್ರೆಸ್–ಜೆಎಂಎಂ ಮೈತ್ರಿಕೂಟ, ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಮತ್ತು ಎಡಪಕ್ಷಗಳನ್ನು ಒಳಗೊಂಡಂತೆ 26 ಸ್ಥಾನಗಳನ್ನು ಗೆದ್ದಿಕೊಂಡಿತ್ತು. ಹಲವಾರು ಸಣ್ಣ ಪಕ್ಷಗಳು ಮತ್ತು ಸ್ವತಂತ್ರರನ್ನು ರೂಪಿಸುವ ಇತರರು 13 ಸ್ಥಾನಗಳನ್ನು ಪಡೆದಿದ್ದರು. ಆದರೆ 2019 ರ ಮುಂದಿನ ಚುನಾವಣೆಯಲ್ಲಿ, ಜನರು ಬಿಜೆಪಿ ಸರ್ಕಾರದಿಂದ ಬೇಸತ್ತಾಗಿ, ಮೇಜುಗಳನ್ನು ತಿರುಗಿಸಿದ್ದರು. ಇದು ಮುಖ್ಯಮಂತ್ರಿ ರಘುಬರ್ ದಾಸ್ ಅವರ ನೇತೃತ್ವದಲ್ಲಿ ಪ್ರಾಸಂಗಿಕವಾಗಿ ಮೊದಲ ಬುಡಕಟ್ಟು ಅಲ್ಲದ ಆಡಳಿತ ರಚಿಸಲ್ಪಟ್ಟಿತು.

2019 ರಲ್ಲಿ, ಬಿಜೆಪಿ–ಎಜೆಎಸ್‌ಯು, ಮೈತ್ರಿ 27 ಸ್ಥಾನಗಳನ್ನು ಮಾತ್ರ ಪಡೆದಿತ್ತು., ಕಾಂಗ್ರೆಸ್–ಜೆಎಂಎಂ–ಆರ್‌ಜೆಡಿ–ಎಡ ಮಹಾ ಘಟ್ ಬಂಧನ್ (ಮಹಾ ಮೈತ್ರಿ) 48 ಸ್ಥಾನಗಳ ಸಾಧನೆಗೈದು ಸುಲಭವಾಗಿ ಅಧಿಕಾರಕ್ಕೆ ಬಂದಿತು. 'ಇತರರ' ಸಂಖ್ಯೆಯೂ ಆ ಚುನಾವಣೆಯಲ್ಲಿ 13 ಸ್ಥಾನಗಳಿಂದ 6 ಸ್ಥಾನಗಳಿಗೆ ಕುಸಿದಿತ್ತು ಎಂಬುದನ್ನು ಗಮನಿಸಬೇಕು. 2014 ರಲ್ಲಿ ನರೇಂದ್ರ ಮೋದಿಯವರ ಭರವಸೆಗಳ ಮೊದಲ ಸರದಿಯಲ್ಲಿ ಜನರು ಬಿಜೆಪಿಗೆ ಮತ ಹಾಕಿದ್ದರು ಆದರೆ ಐದು ವರ್ಷಗಳ ನಂತರ, ಜನರ ಕನಸು ಭಗ್ನಗೊಂಡಿತು. ಮೋದಿಯವರ ಸುಳ್ಳು ಭರವಸೆಗಳಿಂದಾಗಿ, ಬಿಜೆಪಿ ನೆಲಕಚ್ಚಿತು. ಜನರು ಹಿಂತಿರುಗಿ ಮತ್ತೆ, ಎಒಒ ಮತ್ತು ಅದರ ಮಿತ್ರಪಕ್ಷಗಳಿಗೆ ಮಣೆ ಹಾಕಿದ್ದರು.

2024 ರ ಲೋಕಸಭಾ ಚುನಾವಣೆಯಲ್ಲಿ, ರಾಷ್ಟ್ರೀಯ ಕಾಳಜಿಗಳು ಪ್ರಾಬಲ್ಯ ಹೊಂದಿದ್ದವು ಮತ್ತು ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಗೆ ರಾಜ್ಯದಿಂದ ಘನ ಜನಾದೇಶವನ್ನು ನೀಡಲಾಯಿತು, ಎಲ್ಲಾ ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿತು. ಅಸೆಂಬ್ಲಿ ಕ್ಷೇತ್ರಗಳಾದ್ಯಂತ ಈ ಮತವನ್ನು ಕಳೆದು ನೋಡಿದರೆ, ಬಿಜೆಪಿ 47 ಸ್ಥಾನಗಳಲ್ಲಿ ಮತ್ತು ಅದರ ಮಿತ್ರ ಪಕ್ಷವಾದ ಎಜೆಎಸ್‌ಯು 5 ಮುನ್ನಡೆ ಸಾಧಿಸುತ್ತದೆ. ಇದು ಎನ್‌ಡಿಎ ಗೆ ಒಟ್ಟು 52 ಸ್ಥಾನಗಳನ್ನು ತಂದುಕೊಟ್ಟಿತು. ವಿರೋಧ ಪಕ್ಷವಾದ ಇಂಡಿಯಾ ಬಣವು 29 ಅಸೆಂಬ್ಲಿ ಕ್ಷೇತ್ರಗಳಲ್ಲಿ, ಅದರಲ್ಲಿ 14 ಜೆಎಂಎಂ ಮತ್ತು 15 ಕಾಂಗ್ರೆಸ್ ಸ್ಥಾನ ಪಡೆದವು.

ಇತ್ತೀಚಿನ ಚುನಾವಣಾ ಇತಿಹಾಸದ ಈ ಸಂಕ್ಷಿಪ್ತ ಪುನರಾವರ್ತನೆಯು ಮುಂಬರುವ ವಿಧಾನಸಭಾ ಚುನಾವಣೆಗಳ ಮೇಲೆ ಯಾವ ರೀತಿಯ ಪ್ರಭಾವ ಬೀಳಬಹುದು ನೋಡಣ? ಹಿಂದಿನಂತೆ ಜನರು ಕೆಲವು ಬದಲಾವಣೆಗಳನ್ನು ಹುಡುಕುವ ಮಟ್ಟಿಗೆ ಪರಿಸ್ಥಿತಿ ಉದ್ಭವಗೊಂಡಿರುವುದು ಕಾಣುತ್ತಿದೆ. ಇದರಲ್ಲಿ ಹೆಚ್ಚು ಪರಿಗಣಿಸಲ್ಪಡುವ ಅಂಶವೆಂದರೆ, ಜನರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಪರಿಹರಿಸುವ ಹೊಸ ಶಕ್ತಿಯ ಹೊರಹೊಮ್ಮುವಿಕೆಗೆ ಖಂಡಿತ ಅವಕಾಶದ ವಾತಾವರಣವಿದೆ ಎಂದೆನುಸುತ್ತದೆ. ಆದರೆ ಚಾಲ್ತಿಯಲ್ಲಿರುವ ಭ್ರಷ್ಟ ಮತ್ತು ಅವನತಿಯ ರಾಜಕೀಯ ಶಕ್ತಿಗಳಿಂದ ಜನರನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸಲು ನಿರಂತರ ಪ್ರಯತ್ನಗಳು ನಡೆಯುತ್ತಲಿವೆ.

ಪರ್ಯಾಯ ನೀತಿಗಳ ಅಗತ್ಯವಿದೆ

ಯಾವ ರೀತಿಯ ಪರ್ಯಾಯ ನೀತಿಗಳು ಜನರಿಗೆ ನಿಜವಾಗಿಯೂ ಪ್ರಯೋಜನವನ್ನು ನೀಡಬಲ್ಲವು? ಅಗ್ರಗಣ್ಯವಾಗಿ, ಮೊದಲ ಅಂಶವೆಂದರೆ, ಖನಿಜ ಸಂಪನ್ಮೂಲಗಳ ಕಡೆಗೆ ಸುಸ್ಥಿರ ಮತ್ತು ನ್ಯಾಯೋಚಿತ ನೀತಿಯ ಅಗತ್ಯತೆ ಜನರ ಗಮನವನ್ನು ಸೆಳೆಯುತ್ತದೆ. ಇದರ ಅರ್ಥವೆಂದರೆ, ಕಲ್ಲಿದ್ದಲು ಗಣಿಗಾರಿಕೆ ಮತ್ತು ಇತರ ಹೊರ ತೆಗೆಯುವ ಚಟುವಟಿಕೆಗಳಂತಹ ಕೈಗಾರಿಕೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು. ಹೊರ ತೆಗೆಯಲಾದ ಖನಿಜ ಸಂಪತ್ತಿನ ಮೇಲಿನ ರಾಯಧನ ಮತ್ತು ವಿವಿಧ ಕೆಳಮಟ್ಟದ ಸಂಸ್ಕರಣೆಯನ್ನು ರಾಜ್ಯದ ಜನರ ಕಲ್ಯಾಣಕ್ಕಾಗಿ ಬಳಸಲು ಸಂಪನ್ಮೂಲಗಳನ್ನು ಸಂಗ್ರಹಿಸಲು ರಾಜ್ಯ ಸರ್ಕಾರಗಳು ಕಾರ್ಯಸೂಚಿ ಹೊಂದಿರಬೇಕು.

ವಿದ್ಯುತ್ ಉತ್ಪಾದನೆ ಯಂತಹ ಇತರ ಸಂಬಂಧಿತ ಕೈಗಾರಿಕೆಗಳು ದೇಶೀಯ ಅಗತ್ಯಗಳನ್ನು ಮೊದಲು ಮತ್ತು ಕೈಗೆಟುಕುವ ದರಗಳಲ್ಲಿ ಪೂರೈಸಲು ಸಜ್ಜಾಗಬೇಕು. ಭೂಮಿಯನ್ನು ಖಾಸಗಿಯಾಗಿ ಸ್ವಾಧೀನ ಪಡಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು ಮತ್ತು ಅರಣ್ಯಗಳ ನಿರ್ಲಜ್ಜ ವಿನಾಶ ಅಥವಾ ಬುಡಕಟ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಹೆಚ್ಚು ಮಾಪನಾಂಕವಾಗಿ ನಿರ್ಣಯಿಸಬೇಕು, ಸಮುದಾಯಗಳ ಒಪ್ಪಿಗೆಯೊಂದಿಗೆ ಮತ್ತು ಉದ್ಯೋಗ ಮತ್ತು ಪರಿಹಾರದ ಸಾಕಷ್ಟು ಖಾತರಿಗಳೊಂದಿಗೆ ಮುನ್ನಡಯಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಾರ್ಖಂಡ್ ನಿಂದ ಸಂಪನ್ಮೂಲಗಳ ಹರಿವು ಮತ್ತು ದೇಶೀಯ ಮತ್ತು ವಿದೇಶಿ ಉದ್ಯಮಿಗಳ ಜೇಬಿಗೆ ಅಥವಾ ಗೂಡಿಗೆ ಹೋಗುವುದನ್ನು ತಡೆಹಿಡಿಯಬೇಕು. ಇದರಿಂದ ಜನರು ಖನಿಜ ಸಂಪತ್ತಿನಿಂದ ಪ್ರಯೋಜನ ಪಡೆಯುವಂತಾಗುತ್ತದೆ.

ಒಟ್ಟಾರೆಯಾಗಿ, ರಾಜ್ಯ ದೇಶೀಯ ಉತ್ಪನ್ನದ (GSDP) ಮೂರನೇ ಒಂದು ಭಾಗದಷ್ಟು ಕೃಷಿಯು ಕೊಡುಗೆ ನೀಡುತ್ತಿದೆ. ಇದು ಕೈಗಾರಿಕೆಗಳ ಕೊಡುಗೆಯಷ್ಟೆ ಸರಿಸುಮಾರು ಅದೇ ಪಾಲಿನಷ್ಟಿದೆ. ಆದಾಗ್ಯೂ, ಜಾರ್ಖಂಡ್ ಆರ್ಥಿಕ ಸಮೀಕ್ಷೆಯು ಉದ್ಯೋಗಗಳಲ್ಲಿ ತೀವ್ರವಾದ ಬದಲಾವಣೆಯನ್ನು ಬಹಿರಂಗಪಡಿಸುತ್ತದೆ, ಕೃಷಿಯಲ್ಲಿ ದುಡಿಯುವ ಪುರುಷರ ಪಾಲು 2017–18 ರಲ್ಲಿ ಸುಮಾರು ಶೇಕಡಾ 43 ರಿಂದ 2022–23 ರಲ್ಲಿ ಶೇಕಡಾ 30 ಕ್ಕೆ ಇಳಿದಿದೆ. ಆದರೆ ಮಹಿಳೆಯರ ಪಾಲು ಶೇಕಡಾ ಸುಮಾರು 80 ಪ್ರತಿಶತ ಅಂದರೆ, ಶೇ 60 ರಷ್ಟು ಏರಿದೆ.

ಅತ್ಯಲ್ಪ ಹಿಡುವಳಿಗಳ ತೀವ್ರ ಹೆಚ್ಚಳ ಮತ್ತು ಇತರ ಎಲ್ಲಾ ದೊಡ್ಡ ಹಿಡುವಳಿಗಳಲ್ಲಿನ ಕುಸಿತದೊಂದಿಗೆ, ಇದು ಅತ್ಯಂತ ಸಣ್ಣ, ಜೀವನಾಧಾರ ಮಟ್ಟದ ಕೃಷಿಯೊಂದಿಗೆ ಕೃಷಿಯಲ್ಲಿ ಭೀಕರ ಬಿಕ್ಕಟ್ಟನ್ನು ಸೂಚಿಸುತ್ತದೆ. ಪುರುಷ ಕೃಷಿ ಕಾರ್ಮಿಕರ ಕುಸಿತವನ್ನು ಗಣಿಗಾರಿಕೆ ಅಥವಾ ಉತ್ಪಾದನೆಗೆ ಬದಲಾಯಿಸುವುದರಿಂದ ಸರಿದೂಗಿಸಲು ಅಸಾಧ್ಯ. ಈ ಎರಡು ವಲಯಗಳಲ್ಲಿನ ಅವರ ಷೇರುಗಳು ಅನುಕ್ರಮವಾಗಿ 1.7 ಪ್ರತಿಶತ ಮತ್ತು 9 ಪ್ರತಿಶತದಷ್ಟು ಅಗಾಧವಾಗಿರುತ್ತವೆ. 2017–18 ರಲ್ಲಿ 20 ಪ್ರತಿಶತಕ್ಕೆ ಹೋಲಿಸಿದರೆ 2022–23ರಲ್ಲಿ ಸುಮಾರು 26 ಪ್ರತಿಶತದಷ್ಟು ಪುರುಷರು ಕೆಲಸ ಮಾಡುವ ನಿರ್ಮಾಣ ಕ್ಷೇತ್ರದಲ್ಲಿ ಅನೌಪಚಾರಿಕ ಕಾಲೋಚಿತ ಕೆಲಸವನ್ನು ಒಪ್ಪಿಕೊಳ್ಳಬೇಕಾದ ಹೆಚ್ಚಿನ ಪುರುಷರು ಕೃಷಿಯನ್ನು ತೊರೆದಿದ್ದಾರೆ.

ರೈತರಿಗೆ ಉತ್ತಮ ನೀರಾವರಿ, ಅಗ್ಗದ ಒಳಹರಿವು, ವಿಸ್ತೃತ ಬುಟ್ಟಿಯ ಉತ್ಪನ್ನಗಳಿಗೆ ಹೆಚ್ಚಿದ ಕನಿಷ್ಠ ಬೆಂಬಲ ಬೆಲೆಯಲ್ಲಿ ಖಚಿತವಾದ ಸಂಗ್ರಹಣೆ ಮತ್ತು ಇತರ ನೀತಿಗಳೊಂದಿಗೆ ಮಾತ್ರ ಈ ಬಿಕ್ಕಟ್ಟನ್ನು ಪರಿಹರಿಸಬಹುದು. ಇತರ ಕೃಷಿ ಉತ್ಪನ್ನಗಳಾದ ಹಣ್ಣುಗಳು ಮತ್ತು ತರಕಾರಿಗಳು, ಔಷಧೀಯ ಸಸ್ಯಗಳು ಮತ್ತು ನಗದು ಬೆಳೆಗಳಿಗೆ ಸಹ ಬೆಂಬಲ ಬೆಲೆಯ ಅಗತ್ಯವಿದೆ. ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆಯಲ್ಲಿನ ಆಘಾತಕಾರಿ ಕಡಿಮೆ ಮಟ್ಟದ ಉದ್ಯೋಗವು ರಾಜ್ಯದಲ್ಲಿನ ಹೊರತೆಗೆಯುವ ಕೈಗಾರಿಕೆಗಳು ಸ್ಥಳೀಯ ಉದ್ಯೋಗವನ್ನು ಗಮನದಲ್ಲಿರಿಸಿ ಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರಗಳ ವೈಫಲ್ಯವನ್ನು ಬಹಿರಂಗಪಡಿಸುತ್ತದೆ.

ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ, ಬಿಜೆಪಿ ನೇತೃತ್ವದ ಮೈತ್ರಿಯು ಅಂತಹ ನೀತಿಗಳಿಂದ ದೂರವಿದ್ದು, ಧಾರ್ಮಿಕ ವಿಭಜನೆ ಮತ್ತು ಅಸ್ಮಿತೆ ಆಧಾರಿತ ರಾಜಕೀಯವನ್ನು ಪ್ರಚೋದಿಸುತ್ತಿದೆ. ಇಂಡಿಯಾ ಬ್ಲಾಕ್ ಕೂಡ ಆರ್ಥಿಕ ನೀತಿಗಳಲ್ಲಿನ ಮೂಲಭೂತ ಬದಲಾವಣೆಗಳಿಗಿಂತ ಹೆಚ್ಚಾಗಿ 'ಮೈಯ್ಯ ಸಮ್ಮಾನ್ ಯೋಜನೆ' ಯಂತಹ ತನ್ನ ನೀತಿಗಳ ಮೇಲೆ ಆಧರಿಸಿದೆ. ಬಿಜೆಪಿಯ ವಿಭಜಕ ಕಾರ್ಯಸೂಚಿಗೆ ಅವರ ಪ್ರತಿ ಸವಾಲು ಕೂಡ ನೀರಸವಾಗಿದೆ. ಪ್ರಾಯಶಃ ಎಡ ಶಕ್ತಿಗಳು ದೊಡ್ಡ ಬೆಂಬಲಕ್ಕಾಗಿ ದೃಢವಾದ ಸ್ಪರ್ಧೆಯನ್ನು ಮಾಡುವ ಸಮಯ ಒದಗಿ ಬಂದಿದೆ, ಆದರೂ ಅದು ಇನ್ನೂ ಅಧಿಕಾರ ಹಿಡಿಯುವಷ್ಟು ಸ್ಪರ್ಧೆ ಮಾಡುವ ಸ್ಥಿತಿಯಲ್ಲಿಲ್ಲ. ಕಾದು ನೋಡೋಣ?

ಅನು:ನಾಗರಾಜ ನಂಜುಂಡಯ್ಯ



ಹಿಂದುತ್ವ ಮತ್ತು ಉನ್ನತ ನ್ಯಾಯಾಂಗ

ಪ್ರಕಾಶ್ ಕಾರತ್

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರ ನಿವೃತ್ತಿಯ ಸಂದರ್ಭ ಬಹಳ ದೊಡ್ಡ ಪ್ರಮಾಣದಲ್ಲಿ ಟೀಕಾತ್ಮಕ ವಿಶ್ಲೇಷಣೆ ಮತ್ತು ಟಿಪ್ಪಣಿಗಳು ಪ್ರಕಟವಾಗಿವೆ. ಜಸ್ಟಿಸ್ ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್‌ನ ಸಿಜೆಐಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಸಿಜೆಐಗಳಲ್ಲಿ ಒಬ್ಬರಾಗಿದ್ದರಿಂದ ಇದು ಸಹಜವಾಗಿಯೇ ಇದೆ. ಅದರಲ್ಲೂ ಅವರು ಎರಡು ವರ್ಷದ ಅಧಿಕಾರಾವಧಿ ಹೊಂದಿದ್ದುದು ಕೂಡ ಗಮನಾರ್ಹ. ಯಾಕೆಂದರೆ ಕಳೆದ ಎರಡು ದಶಕಗಳಲ್ಲಿ ಇತರ ಯಾವುದೇ ವ್ಯಕ್ತಿ ಇಷ್ಟು ದೀರ್ಘ ಸಮಯ ಸಿಜೆಐ ಆಗಿರಲಿಲ್ಲ.

ಸಂವಿಧಾನ ಮತ್ತು ನಾಗರಿಕರ ಹಕ್ಕುಗಳ ಸಂರಕ್ಷಕ ಸ್ಥಾನದಲ್ಲಿರುವ ನ್ಯಾಯಾಂಗದ ಮುಖ್ಯಸ್ಥರಾಗಿ ಅವರ ಪಾತ್ರದ ಸರಿಯಾದ ಮೌಲ್ಯಮಾಪನ ಮಾಡಬೇಕಾದರೆ ಸಿಜೆಐ ಆಗಿ ಅವರ ಕೆಲಸವನ್ನು ಸಂಪೂರ್ಣವಾಗಿ ಪರಿಗಣಿಸಬೇಕಾಗುತ್ತದೆ. ಹಾಗೆ ಮಾಡುವಾಗ, ಸಿಜೆಐ ಚಂದ್ರಚೂಡ್ ಅವರು ಯಾವ ಹಿನ್ನೆಲೆಯಲ್ಲಿ ತಮ್ಮ ನ್ಯಾಯಾಂಗ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಿದರು ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ತನ್ನ ಅಧಿಕಾರದ ಎರಡನೇ ಅವಧಿಯಲ್ಲಿ ಮೋದಿ ಸರ್ಕಾರವು ಹಿಂದುತ್ವ ಕಾರ್ಯಸೂಚಿಯನ್ನು ಪೂರ್ಣಗೊಳಿಸಲು ತುಂಬಾ ಆಕ್ರಮಣಕಾರಿಯಾದ ಪ್ರಯತ್ನಗಳನ್ನು ನಡೆಸಿದೆ. ಅದು ಸಂವಿಧಾನ ಹಾಗೂ ನಾಗರಿಕರ ಮೂಲಭೂತ ಹಕ್ಕುಗಳನ್ನು ಬುಡಮೇಲು ಮಾಡುವಂತಿವೆ. ಸಾಂವಿಧಾನಿಕ ವಿಷಯಗಳ ಮೇಲಿನ ಸಿಜೆಐ ಚಂದ್ರಚೂಡ್‌ರ ತೀರ್ಪುಗಳು ಮತ್ತು ಬಹುಸಂಖ್ಯಾತ ದಾಳಿಯನ್ನು ಇಂಥ ಸನ್ನಿವೇಶದಲ್ಲಿ ನೋಡಬೇಕಾಗುತ್ತದೆ.

ಕೋರ್ಟ್‌ನ ನ್ಯಾಯಮೂರ್ತಿಯಾಗಿ ಒಂದು ಹಾಗೂ ಸಿಜೆಐ ಆಗಿ ಇನ್ನೊಂದು –ಹೀಗೆ ಎರಡು ತೀರ್ಪುಗಳು ಸತ್ವಪರೀಕ್ಷೆಯಾಗಿ ನಿಲ್ಲುತ್ತವೆ.

ಅಯೋಧ್ಯೆ ವಿವಾದದ ಬಗ್ಗೆ ತೀರ್ಪು ಕೊಟ್ಟ ಐದು ಸದಸ್ಯರ ಪೀಠದಲ್ಲಿ ನ್ಯಾ. ಚಂದ್ರಚೂಡ್ ಇದ್ದರು. ಪೀಠದ ತೀರ್ಪನ್ನು ಬರೆದಿದ್ದು ಅವರೇ. ಬಾಬರಿ ಮಸೀದಿ ಇದ್ದ ಇಡೀ ವಿವಾದಿತ ಜಾಗವನ್ನು ರಾಮ ಮಂದಿರ ನಿರ್ಮಾಣಕ್ಕಾಗಿ ಹಿಂದೂಗಳಿಗೆ ಹಸ್ತಾಂತರ ಮಾಡಬೇಕೆಂದು ಆ ಪೀಠ ತೀರ್ಪು ನೀಡಿತ್ತು. ಸಾಕ್ಷ್ಯ ಮತ್ತು ವಾಸ್ತವಾಂಶಗಳ ಬದಲು ಬಹುತೇಕವಾಗಿ ಧಾರ್ಮಿಕ ಭಾವನೆಗಳು ಮತ್ತು ನಂಬಿಕೆಯ ಆಧಾರದಲ್ಲಿ ಈ ತೀರ್ಪನ್ನು ನೀಡಲಾಗಿತ್ತು. ಬಾಬರಿ ಮಸೀದಿ ನಾಶವು ಒಂದು ಅಸಾಂವಿಧಾನಿಕ ಹಾಗೂ ಅತಿರೇಕದ ಕೃತ್ಯವೆಂದು ಸ್ವತಃ ಒಪ್ಪಿಕೊಂಡರೂ ಸುಪ್ರೀಂ ಕೋರ್ಟ್ ಈ ರೀತಿಯ ತೀರ್ಪನ್ನು ಕೊಟ್ಟಿತ್ತು.

ನ್ಯಾಯಾಂಗದ ಈ ತೀರ್ಪು, ಆರೆಸ್ಸೆಸ್–ವಿಶ್ವ ಹಿಂದೂ ಪರಿಷದ್‌ನ (ವಿಎಚ್‌ಪಿ) ಕ್ಲೇಮನ್ನು ಕಾನೂನುಬದ್ಧಗೊಳಿಸಿತು. ಹಾಗೂ ಬಿಜೆಪಿಯ ಒಂದು ಪ್ರಮುಖ ಬೇಡಿಕೆಯನ್ನು ಈಡೇರಿಸಿತ್ತು.

ಹಿಂದುತ್ವ ಶಕ್ತಿಗಳಿಗೆ ಲೈಸೆನ್ಸ್

ಇದು ಒಂದು ಬಾರಿಯ (ಒನ್ ಟೈಮ್) ದಿಕ್ಚ್ಯುತಿ ಅಲ್ಲ ಎನ್ನುವುದಕ್ಕೆ ಸಿಜೆಐ ಆಗಿದ್ದಾಗ ಚಂದ್ರಚೂಡ್ ವಾರಾಣಸಿಯ ಜ್ಞಾನವಾಪಿ ಮಸೀದಿ ಪ್ರಕರಣವನ್ನು ಮತ್ತೆ ತೆರೆದರು ಎನ್ನುವುದೇ ಸಾಕ್ಷಿಯಾಗಿದೆ. ಇಂಥ ಪ್ರಕರಣಗಳ ಪುನರಾರಂಭವನ್ನು ನಿಷೇಧಿಸುವ 1991ರ ಧಾರ್ಮಿಕ ಸ್ಥಳಗಳ ಸಂರಕ್ಷಣೆ ಕಾನೂನನ್ನು ಅಗೌರವಿಸಿ, ಚಂದ್ರಚೂಡ್ ಅವರು ಈ ಮೊಕದ್ದಮೆಯನ್ನು ಮುಂದುವರಿಸಲು ಅನುಮತಿಸಿದರು. ಅದರ ಧಾರ್ಮಿಕ ಸ್ವರೂಪವನ್ನು ನಿರ್ಧರಿಸಲು ಮಾತ್ರವೇ ಜ್ಞಾನವಾಪಿ ಮಸೀದಿಯ ಲಕ್ಷಣವನ್ನು ಬದಲಾಯಿಸಲು ಹಿಂದೂಗಳು ಕೋರುತ್ತಿಲ್ಲ ಎಂಬ ಸಂಶಯಾಸ್ಪದ ಆಧಾರದಲ್ಲಿ ಈ ಅನುಮತಿ ನೀಡಲಾಗಿತ್ತು. ಇದು, ವಾರಣಾಸಿ ಮತ್ತು ಮಥುರಾದಲ್ಲಿನ ವಿವಾದಗಳನ್ನು ಕೆದಕಲು ಹಿಂದೂತ್ವ ಶಕ್ತಿಗಳಿಗೆ ಲೈಸೆನ್ಸ್ ನೀಡಿತ್ತು.

ನ್ಯಾ. ಚಂದ್ರಚೂಡ್ ನೇತೃತ್ವದ ಪೀಠವೊಂದು ಸಂವಿಧಾನದ 370ನೇ ವಿಧಿಯ ರದ್ದತಿ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಬರ್ಖಾಸ್ತು ಮಾಡಿದ್ದಕ್ಕೆ ಸಂಬಂಧಿಸಿ ನೀಡಿದ್ದು ಇನ್ನೊಂದು ಪ್ರಮುಖ ತೀರ್ಪಾಗಿದೆ. ಈ ತೀರ್ಪು, ಜಮ್ಮು ಮತ್ತು ಕಾಶ್ಮೀರ ಸಂವಿಧಾನ ರಚನಾ ಸಭೆ ಅಸ್ತಿತ್ವದಲ್ಲಿ ಇಲ್ಲದಿರುವುದರಿಂದ 370ನೇ ವಿಧಿಯನ್ನು ತಿದ್ದುಪಡಿ ಮಾಡಲು ಕಾರ್ಯಾಂಗದ ಏಕಪಕ್ಷೀಯ ಅಧಿಕಾರವನ್ನು ಎತ್ತಿಹಿಡಿದಿತ್ತು.

ಸಂವಿಧಾನದ 3ನೇ ವಿಧಿಯನ್ನು ಉಲ್ಲಂಘಿಸುವ ಪ್ರಕ್ರಿಯೆ ಮೂಲಕ ಜಮ್ಮು ಮತ್ತು ಕಾಶ್ಮೀರವನ್ನು ಕೆಳದರ್ಜೆಗೆ ಇಳಿಸಿದ ಪ್ರಕರಣದಲ್ಲಿ ಈ ವಿಷಯದಿಂದ ನುಣುಚಿಕೊಂಡ ತೀರ್ಪು, ಮುಂದೆ ಯಾವತ್ತಾದರೂ ಒಂದು ದಿನ ಜಮ್ಮು



ಮತ್ತು ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸುವ ಒಕ್ಕೂಟ ಸರಕಾರದ ಆಶ್ವಾಸನೆಯನ್ನು ಒಪ್ಪಿಕೊಂಡಿತು. 370ನೇ ವಿಧಿಯನ್ನು ರದ್ದುಪಡಿಸುವಲ್ಲಿ ಕಾರ್ಯಾಂಗದ ಏಕಪಕ್ಷೀಯ ಕ್ರಮವನ್ನು ಹೇಗಾದರೂ ಮಾಡಿ ಅನುಮೋದಿಸಿದ್ದಲ್ಲದೆ ಈ ತೀರ್ಮಾನಕ್ಕೆ ಬೇರೆ ಯಾವುದೇ ಅರ್ಥ ಕಲ್ಪಿಸಲು ಆಗುವುದಿಲ್ಲ. 370ನೇ ವಿಧಿಯನ್ನು ರದ್ದುಪಡಿಸುವುದು ಬಿಜೆಪಿ–ಆರೆಸ್ಸೆಸ್ ಅಜೆಂಡಾದ ಇನ್ನೊಂದು ಪ್ರಮುಖ ವಿಷಯವೆನ್ನುವುದು ಇಲ್ಲಿ ಪ್ರಾಸಂಗಿಕವಾಗುತ್ತದೆ.

ಮಾಸ್ಟರ್ ಆಫ್ ದ ರೋಸ್ಟರ್ ಡ್ಯೂಟಿ ಮತ್ತು ಕೊಲೆಜಿಯಂ ವ್ಯವಸ್ಥೆಯ ಕಾರ್ಯ ನಿರ್ವಹಣೆ, ನ್ಯಾ.ಚಂದ್ರಚೂಡ್ ಅವಧಿಯಲ್ಲಿ ಕಳವಳಕ್ಕೊಳಗಾದ ಇತರ ಕೆಲವು ಅಂಶಗಳಲ್ಲಿ ಸೇರಿವೆ. ಇಲ್ಲಿ ಕೂಡ, ಎದ್ದು ಕಾಣುವಂಥ ಒಂದೇ ರೀತಿಯ ವಿನ್ಯಾಸ ಎದ್ದು ಕಾಣುತ್ತದೆ. ಭೀಮಾ ಕೋರೆಗಾಂವ್ ಪ್ರಕರಣ ಮತ್ತು ಈಶಾನ್ಯ ದೆಹಲಿಯ ಕೋಮು ಗಲಭೆಗಳಲ್ಲಿ ದೀರ್ಘ ಅವಧಿಗೆ ಬಂಧನಕ್ಕೊಳಗಾದವರ ಕೇಸ್‌ಗಳ ಸಹಿತ ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಹಂಚಿಕೆ ಮಾಡಿದ್ದು ಇಂಥ ಪ್ರಕರಣಗಳನ್ನು ನಿರ್ದಿಷ್ಟ ಬೆಂಚ್‌ಗೆ ಒಪ್ಪಿಸಿದ್ದರಲ್ಲಿ ಉದ್ದೇಶಪೂರ್ವಕ ಹುನ್ನಾರ ಕಾಣಿಸುತ್ತದೆ. ನಾಗರಿಕ ಸ್ವಾತಂತ್ರ್ಯ ಮತ್ತು ಜಾಮೀನು ಮಂಜೂರು ಮಾಡುವ ವಿಷಯದಲ್ಲಿ ಸಾಂಪ್ರದಾಯಿಕ ನಿಲುವನ್ನು ಹೊಂದಿರುವ ಜಡ್ಜ್‌ಗಳೇ ಇಂಥ ಪೀಠಗಳಲ್ಲಿದ್ದರು. ಕೊಲಿಜಿಯಂ ಕೆಲಸದ ವಿಚಾರದಲ್ಲಿ ಹೇಳುವುದಾದರೆ, ಹೈ ಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ನೇಮಕ ಮತ್ತು ನ್ಯಾಯಮೂರ್ತಿಗಳ ಆಯ್ಕೆಯನ್ನು ಕಾರ್ಯಾಂಗದ ನಿಯಂತ್ರಣಕ್ಕೆ ಬಿಟ್ಟುಕೊಡುವುದು ಪ್ರಮುಖ ಲಕ್ಷಣವಾಗಿದೆ.

ಆದರೆ, ಈ ಎಲ್ಲದರ ಹೊರತಾಗಿಯೂ, ವೈಯಕ್ತಿಕ ಸ್ವಾತಂತ್ರ್ಯಗಳು ಮತ್ತು ಸಾಂವಿಧಾನಿಕ ತತ್ವಗಳ ದೃಢವಾದ ರಕ್ಷಕನಾಗಬೇಕಿದ್ದ ಒಬ್ಬ ಪಾಂಡಿತ್ಯಪೂರ್ಣ ಜಡ್ಜ್, ಸಂವಿಧಾನ ಮತ್ತು ಅದರ ಮೌಲ್ಯಗಳಿಗೆ ನಿಷ್ಠೆಯ ಬದಲು ತನ್ನ ಧಾರ್ಮಿಕ ನಂಬಿಕೆಗೆ ಹೆಚ್ಚಿನ ಒಲವು ತೋರಿದರೆನ್ನುವುದು ಎದ್ದು ಕಾಣುವಂಥ ವಿಷಯವಾಗಿದೆ. ಚಂದ್ರಚೂಡ್, ತಮ್ಮ ಅಧಿಕಾರದ ಕೊನೆ ಭಾಗದಲ್ಲಿ ಅಯೋಧ್ಯೆ ಕೇಸ್‌ನಲ್ಲಿ ಪರಿಹಾರ ತೋರಿಸುವಂತೆ ದೇವರನ್ನು ಪ್ರಾರ್ಥಿಸಿದ್ದೆ ಎನ್ನುವ ಮೂಲಕ ಬಹಳಷ್ಟು ಜನರಲ್ಲಿ ಅಚ್ಚರಿ ಮೂಡಿಸಿದ್ದರು. ತೀರ್ಪು ಸಂವಿಧಾನ ಮತ್ತು ಕಾನೂನನ್ನು ಆಧರಿಸಿಲ್ಲ, ಆದರೆ ದೈವದ ಮಧ್ಯಪ್ರವೇಶದಿಂದ ಅದನ್ನು ನೀಡಲಾಗಿದೆ ಎಂದು ಪಶ್ಚಾತ್ತಾಪ ಪಡುವ ಆ ತೀರ್ಪನ್ನು ಬರೆದಾತ ಇಲ್ಲಿದ್ದಾರೆ.

ಇದಕ್ಕೂ ಹಿಂದೆ, ಗುಜರಾತ್‌ನ ದ್ವಾರಕಾ ದೇವಸ್ಥಾನಕ್ಕೆ ಭೇಟಿ ನೀಡಿದ ನಂತರ ವಕೀಲರ ಸಭೆಯೊಂದರಲ್ಲಿ ಮಾತನಾಡಿದ ಚಂದ್ರಚೂಡ್, ದೇವಾಲಯದ ಕೇಸರಿ ಧ್ವಜ ನ್ಯಾಯದ ಧ್ವಜವಾಗಿದೆ ಎಂದು ಹೇಳಿದ್ದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಮಾತ್ರವಲ್ಲದೆ ಉನ್ನತ ನ್ಯಾಯಾಂಗದಲ್ಲಿ ಬೆಳೆಯುತ್ತಿರುವ ಮೌಲ್ಯಗಳನ್ನು ಇವೆಲ್ಲವೂ ತೋರಿಸುತ್ತವೆ.

ಮೋದಿ ಆಡಳಿತದ ಒಂದು ದಶಕವು ಉನ್ನತ ನ್ಯಾಯಾಂಗ ಮತ್ತು ಕಾನೂನು ವೃತ್ತಿಪರರಲ್ಲಿ ಹಿಂದೂತ್ವ ಮೌಲ್ಯಗಳನ್ನು ಹರಡಿದ್ದನ್ನು ನೋಡಿದೆ. ಇತ್ತೀಚಿನ ದಿನಗಳಲ್ಲಿ ಅದರ ಸುಳಿವು ಬಹಿರಂಗವಾಗಿಯೇ ಕಾಣಿಸಿದೆ. ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ನಿವೃತ್ತರಾಗುವ ದಿನದಂದು, ಜೀವನಪೂರ್ತಿ ಆರೆಸ್ಸೆಸ್ ಜತೆಗಿನ ತಮ್ಮ ಸಾಹಚರ್ಯವನ್ನು ಘೋಷಿಸಿಕೊಂಡು ಆ ಸಂಘಟನೆಗೆ ತಾನು ಋಣಿಯಾಗಿರುವುದಾಗಿ ಹೇಳಿದರು. ಅದೇ ಹೈಕೋರ್ಟ್‌ನ ಇನ್ನೊಬ್ಬ ಜಡ್ಜ್ ಅಭಿಜಿತ್ ಗಂಗೋಪಾಧ್ಯಾಯ ಲೋಕಸಭೆ ಚುನಾವಣೆಗೂ ಸ್ವಲ್ಪ ದಿನಕ್ಕ ಮುಂಚೆ ರಾಜೀನಾಮೆ ಕೊಟ್ಟು ಕೆಲವೇ ದಿನಗಳಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಹಿಂದೂತ್ವದಿಂದ ಕೆಲವು ಜಡ್ಜ್‌ಗಳ ಲೋಕದೃಷ್ಟಿ ಹೇಗೆ ರೂಪಿತವಾಯಿತು ಎನ್ನುವುದು ಈ ವರ್ಷದ ಜುಲೈನಲ್ಲಿ ಮಧ್ಯಪ್ರದೇಶ ಹೈಕೋರ್ಟ್‌ನ ಇಬ್ಬರು ಸದಸ್ಯರ ಪೀಠ ವ್ಯಕ್ತಪಡಿಸಿದ ಅಭಿಪ್ರಾಯದಿಂದ ಗೊತ್ತಾಗುತ್ತದೆ. ಸರಕಾರಿ ನೌಕರರು ಆರ್‌ಎಸ್‌ಎಸ್ ಸೇರುವ ಮೇಲಿನ ನಿರ್ಬಂಧ ಕುರಿತು ನಿವೃತ್ತ ಸರಕಾರಿ ಉದ್ಯೋಗಿಯೊಬ್ಬ ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡಿದ ಪೀಠ, ಆರೆಸ್ಸೆಸ್‌ನಂಥ ಒಂದು 'ಪ್ರಖ್ಯಾತ ಸಂಸ್ಥೆ'ಯನ್ನು 'ದೇಶದ ನಿಷೇಧಿತ ಸಂಘಟನೆಗಳ ಪಟ್ಟಿಯಲ್ಲಿ ತಪ್ಪಾಗಿ ಸೇರಿಸಲಾಗಿತ್ತು' ಎಂದು ಆರೆಸ್ಸೆಸ್ ಮೇಲಿನ ನಿಷೇಧವನ್ನು ಕೇಂದ್ರ ಸರಕಾರ ರದ್ದುಪಡಿಸಿದ ನಂತರ ನೀಡಿದ ತೀರ್ಪಿನಲ್ಲಿ ಹೇಳಿದೆ. ಕೇಂದ್ರ ಸರಕಾರದ ಐದು ದಶಕಗಳ ತಪ್ಪಿನಿಂದಾಗಿ, 'ಈ ನಿಷೇಧದಿಂದಾಗಿ, ಹಲವು ರೀತಿಯಲ್ಲಿ ದೇಶ ಸೇವೆ ಮಾಡಲು ಬಯಸಿದ್ದ ಅನೇಕ ಕೇಂದ್ರ ಸರಕಾರಿ ನೌಕರರ ಆಸೆ ಕಮರಿತ್ತು' ಎಂದು ಪೀಠದಲ್ಲಿದ್ದ ಜಡ್ಜ್‌ಗಳು ಹೇಳಿದ್ದರು. ಅಂದರೆ, ದೇಶ ಸೇವೆ ಮಾಡಬೇಕಾದರೆ ಆರೆಸ್ಸೆಸ್ ಸೇರಬೇಕೆಂಬುದು ಈ ಜಡ್ಜ್‌ಗಳ ಅಭಿಪ್ರಾಯ ಎಂದಾಯಿತು.

ಹೆಚ್ಚುತ್ತಿರುವ ಪ್ರಭಾವ

ಆರೆಸ್ಸೆಸ್‌ನ ಕಾನೂನು ವಿಭಾಗವು ಉನ್ನತ ನ್ಯಾಯಾಂಗದಲ್ಲಿ ಹೇಗೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದೆ ಎನ್ನುವುದನ್ನು ಕ್ಯಾರವಾನ್ ಮ್ಯಾಗಸಿನ್‌ನ ಅಕ್ಟೋಬರ್ ಸಂಚಿಕೆಯ ಲೇಖನ ಬಹಿರಂಗ ಪಡಿಸಿದೆ. ಅಖಿಲ ಭಾರತೀಯ ಅಧಿವಕ್ತ ಪರಿಷದ್–ಇದು ಆರೆಸ್ಸೆಸ್‌ನ ಕಾನೂನು ರಂಗವಾಗಿದೆ. ಈ ಸಂಘಟನೆಯ ಮುಖಾಂತರ ಅಡ್ವೊಕೇಟ್ ಜನರಲ್‌ಗಳು ಮತ್ತು ನ್ಯಾಯಮೂರ್ತಿಗಳಂಥ ಕಾನೂನು ಅಧಿಕಾರಿಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ನೇಮಕಗೊಳ್ಳುತ್ತಿದ್ದಾರೆ. 33 ಹಾಲಿ ಜಡ್ಜ್‌ಗಳ ಪೈಕಿ ಕನಿಷ್ಠ ಒಂಬತ್ತು ಜಡ್ಜ್‌ಗಳು ಪರಿಷದ್‌ನ ಒಂದು ಅಥವಾ ಹೆಚ್ಚು ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದಾರೆ.

ಸಿಜೆಐ ಚಂದ್ರಚೂಡ್‌ರ ದಾಖಲೆಯು ಉನ್ನತ ಮಟ್ಟದ ನ್ಯಾಯಾಂಗ ಸಂಸ್ಥೆಗಳಲ್ಲಿ ಬಹುಸಂಖ್ಯಾಕರ ಭಾವನೆಗಳು ಪ್ರತಿಫಲನಗೊಳ್ಳುತ್ತಿರುವುದರ ಎಚ್ಚರಿಕೆಯ ಕಥೆಯಾಗಿದೆ. ಒಟ್ಟಿನಲ್ಲಿ, ಉನ್ನತ ನ್ಯಾಯಾಂಗದಲ್ಲಿ ನುಸುಳಲು ಆರೆಸ್ಸೆಸ್‌ಗೆ ಮೋದಿ ಸರಕಾರ ಹೇಗೆ ಸಹಾಯ ಮಾಡಿದೆ ಎನ್ನುವುದರ ಎಚ್ಚರಿಕೆ ಇದಾಗಿದೆ.

ಅನು: ವಿಶ್ವ

ಕಾದ ಕಾಂಚಣದ ಹುಚ್ಚು

ಕಾದ ಕಾಂಚಾಣ ಹುಚ್ಚೆದ್ದು ಕುಣಿದಿದೆ
ಕೆಂಪು, ನೀಲಿ, ಕೇಸರಿ
ಬಗೆ ನಗೆಯ ಧಿರಿಸಲಿ


ಯುದ್ಧ, ಶಾಂತಿ, ವಿರಾಮ, ಸಂಧಾನ
ನಾಟಕದ ರಂಗಿನ ಕಾವಿನಲಿ
ಹಿಟ್ಲರ್ ಮೊಟ್ಟೆಗಳ ಚಿಪ್ಪೊಡೆದ ಸಾಹಸ
ಪ್ರಜಾತಂತ್ರ ಹೆಸರಲ್ಲಿ
ನೆತ್ತರು ಬಸಿವ ಮಾನವೀಯತೆ.

ಅತ್ತ ಟ್ರಂಪ್, ಇತ್ತ ಮೋದಿ
ಮಾಟದ ಮಾಯಗಾರರ ಮಂತ್ರಕೆ
ಕಾದ ಕಾಂಚಣದ ತಕಧಿಮಿ
ಎತ್ತನೋಡಿದರೂ
ಡಾಲರ್ ದತ್ತಿ ಪಡೆದ ಧರ್ಮದಮಲು.

ಚಿಪ್ಪೊಡೆದ ಚಿಟ್ಟೆಗಳು ಒಮ್ಮೆ ಸತ್ತಂತೆ
ಮತ್ತೊಮ್ಮೆ ರೆಕ್ಕೆ ಬಡಿದಂತೆ
ಬಾನತುಂಬ ಬಣ್ಣಬಣ್ಣದ ಆಟ ಅಟ್ಟಹಾಸ
ಹೂ ಮೂಸುವ ನೆಪದಲ್ಲಿ
ಕರುಳ ಕೊರೆದು ಹರಿಬಿಟ್ಟಿವೆ ವಿಷ.

ಎಲ್ಲ ನೋಡುವ ನೇಸರ ಬಿರುಸಾಗುತ್ತಿಲ್ಲ
ಚಿಟ್ಟೆಗಳ ರೆಕ್ಕೆ ಸುಡುವಷ್ಟು
ಶ್ರಮದ ಬಟ್ಟಲಿಗೆ ದೃಢಹೆಜ್ಜೆ ಹಾಕುತ್ತಿಲ್ಲ
ಕುಣಿವ ಕಾಂಚಣದ ಕಾಲು ಮುರಿವಷ್ಟು
ಬೇಸರದ ಕಂಬಳಿಯಲಿ ಪ್ರಜಾತಂತ್ರದ
ಗಾಢನಿದ್ದೆ

ಪಿ.ಆರ್. ವೆಂಕಟೇಶ್







ಶ್ರೀಲಂಕಾದ ಸಂಸತ್ತಿನ ಚುನಾವಣೆಯಲ್ಲಿ ಎಡ ಮೈತ್ರಿಕೂಟಕ್ಕೆ ಐತಿಹಾಸಿಕ ಗೆಲುವು! ಎಡಪಂಥೀಯ ರಾಜಕಾರಣದ ದಿಕ್ಕಿನಲ್ಲಿ ಮತ್ತೊಂದು ಹೆಜ್ಜೆ

ಅಧ್ಯಕ್ಷ ಅನುರ ಕುಮಾರ ಡಿಸಾನಾಯಕೆ ನೇತೃತ್ವದ ಎಡ ಮೈತ್ರಿಕೂಟವು ಶ್ರೀಲಂಕಾ ಸಂಸತ್ ಚುನಾವಣಾ ಇತಿಹಾಸದಲ್ಲಿ ಅಭೂತಪೂರ್ವವಾಗಿ ಮೂರನೇ ಎರಡರಷ್ಟು ಬಹುಮತದೊಂದಿಗೆ ಭರ್ಜರಿ ಜಯ ಸಾಧಿಸಿದೆ. ಶ್ರೀಲಂಕಾದ 10ನೇ ಸಂಸತ್ತಿನ ಚುನಾವಣೆಗೆ ಗುರುವಾರ (ನವೆಂಬರ್ 14) ಮತದಾನ ನಡೆಯಿತು. ಅಂದು ರಾತ್ರಿಯೇ ಮತ ಎಣಿಕೆ ಆರಂಭವಾಯಿತು. ಇದರಲ್ಲಿ ಹಾಲಿ ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ನೇತೃತ್ವದ ಎಡಪಂಥೀಯ ಮೈತ್ರಿಕೂಟವಾದ ನ್ಯಾಷನಲ್ ಪೀಪಲ್ಸ್ ಪವರ್ (ಎನ್ಪಿಪಿ) ಅಲಯನ್ಸ್ ಒಟ್ಟು 159 ಸ್ಥಾನಗಳನ್ನು ಗೆದ್ದಿದೆ. ಇದರ ಮೂಲಕ ಶ್ರೀಲಂಕಾ ಜನತೆ ಎಡಪಂಥೀಯ ರಾಜಕಾರಣದ ದಿಕ್ಕಿನಲ್ಲಿ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ.

ಮೂರನೇ 2ರಷ್ಟು ಬಹುಮತ

ಶ್ರೀಲಂಕಾದ ಸಂಸತ್ತಿನಲ್ಲಿ ಒಟ್ಟು ಸದಸ್ಯರ ಸಂಖ್ಯೆ 225. ಇವರಲ್ಲಿ 196 ಸದಸ್ಯರು ಮತದಾರರಿಂದ ಚುನಾಯಿತರಾಗುತ್ತಾರೆ ಮತ್ತು 29 ಸದಸ್ಯರು ಅನುಪಾತದ ವ್ಯವಸ್ಥೆಯಲ್ಲಿ ಪಕ್ಷಗಳು (ರಾಷ್ಟ್ರೀಯ ಪಟ್ಟಿ) ಪಡೆದ ಮತಗಳ ಆಧಾರದ ಮೇಲೆ ಚುನಾಯಿತರಾಗುತ್ತಾರೆ. ಸಂಸತ್ತಿನಲ್ಲಿ ಬಹುಮತ ಪಡೆಯಲು ಕನಿಷ್ಠ 113 ಸ್ಥಾನಗಳ ಅಗತ್ಯವಿದೆ. ಆ ಮೂಲಕ ನ್ಯಾಶನಲ್ ಪೀಪಲ್ಸ್ ಪವರ್ ಅಲಯನ್ಸ್ ಒಟ್ಟು 159 ಸ್ಥಾನಗಳನ್ನು ಗೆಲ್ಲುವ ಮೂಲಕ 141 ಸ್ಥಾನಗಳನ್ನು ನೇರವಾಗಿ ಮತದಾರರ ಮೂಲಕ ಹಾಗೂ 18 ಸ್ಥಾನಗಳನ್ನು ರಾಷ್ಟ್ರೀಯ ಪಟ್ಟಿ ಮೂಲಕ ಗೆದ್ದು ದಾಖಲೆ ನಿರ್ಮಿಸಿದೆ. ಕಳೆದ ಸಂಸತ್ತಿನ ಚುನಾವಣೆಯಲ್ಲಿ, ಶ್ರೀಲಂಕಾ ಪೊದುಜನ ಪೆರಮುನಾ ಪಕ್ಷವು ರಾಷ್ಟ್ರೀಯ ಪಟ್ಟಿ ಸೇರಿದಂತೆ 145 ಸ್ಥಾನಗಳನ್ನು ಗೆದ್ದಿತ್ತು. ಆದರೆ, ಅಧ್ಯಕ್ಷ ಅನುರ ಕುಮಾರ ಡಿಸ್ಸಾನಾಯಕ ಅವರ ನ್ಯಾಶನಲ್ ಪೀಪಲ್ಸ್ ಪವರ್ ಮೈತ್ರಿಕೂಟ 159 ಸ್ಥಾನಗಳನ್ನು ವಶಪಡಿಸಿಕೊಂಡು ದಾಖಲೆ ನಿರ್ಮಿಸುವ ಮೂಲಕ ಆ ಸಂಖ್ಯೆಯನ್ನು ಮೀರಿದೆ. ಸಜಿತ್ ಪ್ರೇಮದಾಸ ಅವರ ಯುನೈಟೆಡ್ ಪೀಪಲ್ಸ್ ಪವರ್ ಅಲೈಯನ್ಸ್ (ಎಸ್ಜೆಬಿ) 40 ಸ್ಥಾನಗಳನ್ನು, ರನಿಲ್ ವಿಕ್ರಮಸಿಂಘೆ ಅವರ ಪುದಿಯ ಜನನಾಯಕ್ ಮುನ್ನಣಿ (ನ್ಯೂ ಡೆಮಾಕ್ರಟಿಕ್ ಫ್ರಂಟ್ –ಎನ್ಡಿಎಫ್) 5 ಸ್ಥಾನಗಳನ್ನು, ಶ್ರೀಲಂಕಾ ಪೊದುಜನ ಪೆರಮುನ (ಎಸ್‌ಎಲ್ಪಿಪಿ) 3 ಸ್ಥಾನಗಳನ್ನು, ಶ್ರೀಲಂಕಾ ತಮಿಳ್ ಅರಸು ಪಾರ್ಟಿ (ಐಟಿಎಕೆ) 8 ಮತ್ತು ಸರ್ವಜನ ಅಧಿಕಾರಂ (ಎಸ್ಬಿ) ಪಕ್ಷ 1 ಸ್ಥಾನ ಮತ್ತು ಇತರ ಪಕ್ಷಗಳು 9 ಸ್ಥಾನಗಳನ್ನು ಗೆದ್ದಿವೆ.

ಎನ್‌ಪಿಪಿಗೆ 61.56 ರಷ್ಟು ಮತಗಳು

ಮೇಲಾಗಿ ಹಾಲಿ ಅಧ್ಯಕ್ಷ ಅನುರ ಕುಮಾರ ಡಿಸ್ಸಾನಾಯಕ ಅವರ ನ್ಯಾಷನಲ್ ಪೀಪಲ್ಸ್ ಪವರ್ (ಎನ್ ಪಿಪಿ) 68 ಲಕ್ಷದ 63 ಸಾವಿರದ 186 ಮತಗಳಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ನ್ಯಾಷನಲ್ ಪೀಪಲ್ಸ್ ಪವರ್ ಅಲಯನ್ಸ್ 61.56 ಶೇಕಡಾ ಮತಗಳನ್ನು ಗಳಿಸಿದೆ. ಸಜಿತ್ ಪ್ರೇಮದಾಸ ಅವರ ಯುನೈಟೆಡ್ ಪೀಪಲ್ಸ್ ಪವರ್ 19 ಲಕ್ಷ 68 ಸಾವಿರದ 716 ಮತಗಳನ್ನು ಪಡೆದಿದೆ. ಇದು ಚಲಾವಣೆಯಾದ ಮತಗಳ ಪೈಕಿ ಶೇ.17.66ರಷ್ಟು ಮಾತ್ರ. ರನಿಲ್ ವಿಕ್ರಮಸಿಂಘೆ ಅವರ ನ್ಯೂ ಡೆಮಾಕ್ರಟಿಕ್ ಫ್ರಂಟ್ ಕೇವಲ 5 ಲಕ್ಷದ 835 ಮತಗಳನ್ನು ಪಡೆದಿದೆ. ಇದು ಶೇ. 4.49 ರಷ್ಟಿದೆ.

ತಮಿಳು ಪ್ರದೇಶಗಳಲ್ಲಿ ಐತಿಹಾಸಿಕ ಗೆಲುವು!

ಇದೆಲ್ಲದರ ಮೇಲೆ ಅಧ್ಯಕ್ಷ ಅನುರ ಕುಮಾರ ಡಿಸ್ಸಾನಾಯಕ್ ಅವರ ಒಕ್ಕೂಟವು ಬ್ಯಾಟಿಕಲೋವಾ ಮತ್ತು ಜಾಫ್ನಾವನ್ನು ಹೊರತುಪಡಿಸಿ ಎಲ್ಲಾ ತಮಿಳು ಪ್ರದೇಶಗಳಲ್ಲಿ ಇತಿಹಾಸದಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಜಯಗಳಿಸಿದೆ.

ಮಲೆನಾಡಿನ ತಮಿಳರ ಪ್ರಭಾವ!

ಗುಡ್ಡಗಾಡು ತಮಿಳರು ಹೆಚ್ಚು ವಾಸಿಸುವ ನುವಾರಾ ಎಲಿಯಾ ಜಿಲ್ಲೆಯಲ್ಲೂ ನ್ಯಾಷನಲ್ ಪೀಪಲ್ಸ್ ಪವರ್ ಪ್ರಾಬಲ್ಯ ಸಾಧಿಸಿದೆ. ಮಲೆನಾಡಿನ ಜನರು ವಾಸಿಸುವ ಕಂಡಿ, ಮಾತ್ತಳೈ, ರತ್ನಪುರಿ, ಕೆಕಾಳೈ, ಪದೂಳೈ, ಕಳುತ್ತುರೈ ಸೇರಿದಂತೆ ಎಲ್ಲ ಪ್ರದೇಶಗಳಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ ಪ್ರಭಾವಿತವಾಗಿದೆ. ಜಾಫ್ನಾ, ಕಿಲಿನೊಚ್ಚಿ ಸೇರಿದಂತೆ ಜಿಲ್ಲೆಗಳನ್ನು ಸಂಪರ್ಕಿಸಲು ಜಾಫ್ನಾ ಚುನಾವಣಾ ಕ್ಷೇತ್ರವು ನೆಲೆಗೊಂಡಿದೆ. ಕಳೆದ ಬಾರಿ ಶ್ರೀಲಂಕಾದ ತಮಿಳ್ ಅರಸು ಪಕ್ಷದ ವಶದಲ್ಲಿದ್ದ ಜಾಫ್ನಾ ಕ್ಷೇತ್ರವನ್ನು ಈ ಬಾರಿ ನ್ಯಾಷನಲ್ ಪೀಪಲ್ಸ್ ಪವರ್ ತನ್ನ ವಶಕ್ಕೆ ತೆಗೆದುಕೊಂಡಿದೆ. ನ್ಯಾಷನಲ್ ಪೀಪಲ್ಸ್ ಪವರ್ ಇಲ್ಲಿ 6 ರಲ್ಲಿ 3 ಸ್ಥಾನಗಳನ್ನು ಗೆದ್ದಿದೆ. ಮನ್ನಾರ್, ವವುನಿಯಾ ಮತ್ತು ಮುಲ್ಲೈತೀವು ಸೇರಿದಂತೆ ಮೂರು ಆಡಳಿತ ಜಿಲ್ಲೆಗಳನ್ನು ಒಳಗೊಂಡಿರುವ ಚುನಾವಣಾ ಜಿಲ್ಲೆಯಾಗಿದ್ದು, ಇಲ್ಲಿಯೂ ನ್ಯಾಷನಲ್ ಪೀಪಲ್ಸ್ ಪವರ್ ಒಕ್ಕೂಟವು ಅತ್ಯಧಿಕ ಮತಗಳನ್ನು ಗಳಿಸಿದೆ.

ರಾಜಕೀಯ ಪಕ್ಷಗಳು	ಗೆದ್ದ ಮತಗಳು	ಸ್ಥಾನಗಳು
ನ್ಯಾಷನಲ್ ಪೀಪಲ್ಸ್ ಪವರ್ (NPP)	68,63,186	159
ಯುನೈಟೆಡ್ ಪೀಪಲ್ಸ್ ಪವರ್ (SJB)	19,68,716	40
ನ್ಯೂ ಡೆಮಾಕ್ರಟಿಕ್ ಫ್ರಂಟ್ (NDF)	5,00,835	5
ಶ್ರೀಲಂಕಾ ಪೊದುಜನ ಪೆರಮುನ (SLPP)	3,50,429	3
ಶ್ರೀಲಂಕಾ ತಮಿಳ್ ಅರಸು ಪಾರ್ಟಿ (ITAK)	2,57,813	8
ಸರ್ವಜನ ಅಧಿಕಾರಂ (SB)	178,006	1
ಯುನೈಟೆಡ್ ಡೆಮಾಕ್ರಟಿಕ್ ವಾಯ್ಸ್ (UDV)	83,488	0
ಇತರೆ ಪಕ್ಷಗಳು		

ಅಂಬಾರೈ ಜಿಲ್ಲೆಯಲ್ಲಿ ಮುಸ್ಲಿಮರು ಬೆಂಬಲ!

ಕ್ಯಾಂಡಿ ಜಿಲ್ಲೆಯೊಂದರಲ್ಲೇ 5 ಲಕ್ಷ ಮತಗಳನ್ನು, 9 ಸಂಸದೀಯ ಸ್ಥಾನಗಳನ್ನು ನ್ಯಾಷನಲ್ ಪೀಪಲ್ಸ್ ಪವರ್ ಗೆದ್ದಿದೆ. ನುವರೇಲಿಯಾ ಜಿಲ್ಲೆಯೂ ಈ ಬಾರಿ ಎನ್ ಪಿಪಿ ತೆಕ್ಕೆಗೆ ಬಂದಿದೆ. ತೀಗಾಮಡುಲ್ಲ (ಅಂಬಾರೈ) ಜಿಲ್ಲೆಯಲ್ಲಿ ಕಳೆದ ಬಾರಿಯ ಸಂಸದೀಯ ಚುನಾವಣೆಯಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿಕೂಟ 8ನೇ ಸ್ಥಾನ ಪಡೆದಿತ್ತು, ಈ ಬಾರಿ ಮೊದಲನೇ ಸ್ಥಾನ ಪಡೆದಿದೆ. ಅಂಬಾರೈ ಜಿಲ್ಲೆಯಲ್ಲಿ ಹೆಚ್ಚಿನ ಮುಸ್ಲಿಮರು ವಾಸಿಸುತ್ತಿದ್ದು, ಮುಸ್ಲಿಂ ಪಕ್ಷಗಳನ್ನು ಮೀರಿ, ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿಕೂಟವನ್ನು ಬಹುತೇಕ ಮುಸ್ಲಿಮರು ಆಯ್ಕೆ ಮಾಡಿದ್ದಾರೆ.

ತಿರುಕೋಣಮಲ್ಯೆ ಜಿಲ್ಲೆಯಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ ಮೇಲುಗೈ ಸಾಧಿಸಿದೆ. ಮಾತ್ತರೈ ಜಿಲ್ಲೆಯಲ್ಲಿ 3 ಲಕ್ಷದ 17 ಸಾವಿರ ಮತಗಳನ್ನು ಪಡೆದು ಒಟ್ಟು 7ರಲ್ಲಿ 6 ಸ್ಥಾನಗಳನ್ನು ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿಕೂಟ ಗಳಿಸಿದೆ. ಪತ್ತೂಳೈ ಜಿಲ್ಲೆಯಲ್ಲಿ 2.75 ಲಕ್ಷ ಮತಗಳೊಂದಿಗೆ 8 ಸ್ಥಾನಗಳ ಪೈಕಿ 6 ಸ್ಥಾನಗಳನ್ನು ನ್ಯಾಷನಲ್ ಪೀಪಲ್ಸ್ ಪವರ್ ಅಲಯನ್ಸ್ ಗೆದ್ದುಕೊಂಡಿದೆ.

ತಮಿಳು ಜನರ ವಿಶ್ವಾಸ ಗಳಿಸಿದ ದಿಸಾನಾಯಕೆ

ವಿಶೇಷವಾಗಿ ತಮಿಳರು ಬಹುಸಂಖ್ಯಾತರಾಗಿರುವ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ಇಲ್ಲಿಯವರೆಗೆ ತಮಿಳು ರಾಜಕೀಯ ಪಕ್ಷಗಳು ಮಾತ್ರವೇ ಜಯಗಳಿಸುತ್ತಿದ್ದ ಕ್ಷೇತ್ರಗಳಲ್ಲಿ, ಮೊದಲ ಬಾರಿಗೆ ಮಧ್ಯಪ್ರದೇಶವನ್ನು ಆಳುವ ಪಕ್ಷವು (ನ್ಯಾಷನಲ್ ಪೀಪಲ್ಸ್ ಪವರ್ ಅಲಯನ್ಸ್) ಬಹುಮತ ಗಳಿಸಿದೆ. ಕಳೆದ ಅಧ್ಯಕ್ಷೀಯ ಚುನಾವಣೆಯ ಸಮಯದಲ್ಲಿ, ತಮಿಳು ಜನನಿಬಿಡ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿಕೂಟ ಕಡಿಮೆ ಬೆಂಬಲವನ್ನು ಹೊಂದಿತ್ತು. ಆದಾಗ್ಯೂ, ಸಂಸತ್ ಚುನಾವಣೆಯಲ್ಲಿ ತಮಿಳರು ನೇರವಾಗಿ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷವನ್ನು ಬೆಂಬಲಿಸಿದ್ದಾರೆ. ಕಳೆದ ವಾರ ಉತ್ತರ ಪ್ರಾಂತ್ಯದಲ್ಲಿ ಅಧ್ಯಕ್ಷ ಅನುರ ಕುಮಾರ ಡಿಸ್ಸಾನಾಯಕೆ ನಡೆಸಿದ ಪ್ರಚಾರವು ತಮಿಳರಲ್ಲಿ ಅಭಿಮಾನ ಮತ್ತು ವಿಶ್ವಾಸವನ್ನು ಮೂಡಿಸಿದೆ ಎಂಬುದನ್ನು ಚುನಾವಣಾ ಫಲಿತಾಂಶ ಬಿಂಬಿಸಿದೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ.

ಗುಡಿಸಿಹೋದ ರಾಜಪಕ್ಸೆ ಕುಟುಂಬ

ಶ್ರೀಲಂಕಾದ ರಾಜಕೀಯ ಇತಿಹಾಸದಲ್ಲಿ ಅನಿವಾರ್ಯ ರಾಜಕೀಯ ಕುಟುಂಬವಾಗಿ ಕಂಡ ರಾಜಪಕ್ಸೆ ಕುಟುಂಬವನ್ನು ಈ ಬಾರಿ ಜನ ಶ್ರೀಲಂಕಾ ಸಂಸದೀಯ ರಾಜಕೀಯ ಕ್ಷೇತ್ರದಿಂದ ಸಂಪೂರ್ಣವಾಗಿ ಗುಡಿಸಿಹಾಕಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ರಾಜಪಕ್ಸೆ ಕುಟುಂಬದ ಪರವಾಗಿ ಸ್ಪರ್ಧಿಸಿದ್ದ ಏಕೈಕ ವ್ಯಕ್ತಿ ಸಮಲ್ ರಾಜಪಕ್ಸೆ ಅವರ ಪುತ್ರ ಶಶೀಂದ್ರ ರಾಜಪಕ್ಸೆ ಕೂಡ ಸೋಲು ಕಂಡಿದ್ದರು. ಈ ಪೈಕಿ ಶ್ರೀಲಂಕಾ ಪೊದುಜನ ಪೆರಮುನಾ ಒಂದೇ ಒಂದು ಸ್ಥಾನವನ್ನು ಪಡೆದಿಲ್ಲ. ರಾಷ್ಟ್ರೀಯ ಪಟ್ಟಿಯಲ್ಲಿ ಎರಡು ಸ್ಥಾನಗಳು ಮಾತ್ರ ಲಭ್ಯವಿವೆ.

ಶ್ರೀಲಂಕಾದ ಜನರು ಎಡಪಂಥೀಯ ರಾಜಕಾರಣದ ದಿಕ್ಕಿನಲ್ಲಿ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ!

ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆ ಸೆಪ್ಟೆಂಬರ್ 21 ರಂದು ನಡೆಯಿತು. ಇದರಲ್ಲಿ ಶ್ರೀಲಂಕಾದ 76 ವರ್ಷಗಳ ಪ್ರಜಾಸತ್ತಾತ್ಮಕ ಆಡಳಿತ ಮತ್ತು 46 ವರ್ಷಗಳ ಅಧ್ಯಕ್ಷೀಯ ಚುನಾವಣಾ ಇತಿಹಾಸದಲ್ಲಿ ಬಂಡವಾಳಶಾಹಿ ಪಕ್ಷಗಳು ಸೋತಿವೆ. ಮಾರ್ಕ್ಸ್ವಾದ–ಲೆನಿನಿಸಂ ಅನ್ನು ತನ್ನ ಮೂಲ ನೀತಿ ಎಂದು ಘೋಷಿಸಿದ ಜನತಾ ವಿಮುಕ್ತಿ ಪೆರಮುನ (ಜೆವಿಪಿ) ನಾಯಕ ಅನುರ ಕುಮಾರ ಡಿಸ್ಸಾನಾಯಕೆ ಪ್ರಚಂಡ ಜಯ ಸಾಧಿಸಿದರು. 2022ರಲ್ಲಿ ಶ್ರೀಲಂಕಾದಲ್ಲಿ ಅತ್ಯಂತ ಗಂಭೀರವಾದ ಆರ್ಥಿಕ ಸಮಸ್ಯೆ ಎದುರಾದಾಗ ಜನಪರ ಹೋರಾಟದ ನೇತೃತ್ವ ವಹಿಸಿದ್ದ ಡಿಸ್ಸಾನಾಯಕೆ 'ಬದಲಾವಣೆಯೊಂದೇ ಪರಿಹಾರ' ಎಂಬ ಘೋಷಣೆಯೊಂದಿಗೆ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಯಲ್ಲಿ 'ಸಮೃದ್ಧ ನಾಡು, ಸುಂದರ ಬದುಕು' ಎಂಬ ಘೋಷಣೆಯೊಂದಿಗೆ ಸ್ಪರ್ಧಿಸಿದ್ದರು. ಅವರು ಜೆವಿಪಿ ನಾಯಕರಾಗಿದ್ದರೂ, ಅವರು 27 ಸಣ್ಣ ಸಂಘಟನೆಗಳನ್ನು ಒಟ್ಟುಗೂಡಿಸಿ 'ದೇಸಿಯ ಮಕ್ಕಳ್ ಶಕ್ತಿ'(ನ್ಯಾಷನಲ್ ಪೀಪಲ್ಸ್ ಪವರ್) ಎಂಬ ಮೈತ್ರಿಕೂಟವನ್ನು ರಚಿಸುವ ಮೂಲಕ ಚುನಾವಣೆಯಲ್ಲಿ ಗೆದ್ದರು. ಅದರಲ್ಲಿ ಅವರು ಜನರ ಅಗಾಧ ಬೆಂಬಲದೊಂದಿಗೆ 9 ನೇ ಅಧ್ಯಕ್ಷರಾಗಿ ಆಯ್ಕೆಯಾದರು. ಆದಾಗ್ಯೂ, ಬದಲಾವಣೆಯನ್ನು ಜಾರಿಗೆ ತರಲು ಬಹುಮತದ ಸಂಸದರ ಕೊರತೆಯಿಂದಾಗಿ, ಅಧ್ಯಕ್ಷ ಡಿಸಾನಾಯಕ್ ಅವರು ಸಂಸತ್ತಿನ ಚುನಾವಣೆಯನ್ನು ಘೋಷಿಸಿದರು. ಅಧ್ಯಕ್ಷೀಯ ಚುನಾವಣೆಯ ನಂತರ, ದಿಸ್ಸಾ ನಾಯಕ್ ಅವರ ನ್ಯಾಷನಲ್ ಪೀಪಲ್ಸ್ ಪವರ್ ಒಕ್ಕೂಟವು ಸಂಸತ್ತಿನ ಚುನಾವಣೆಯಲ್ಲೂ ಐತಿಹಾಸಿಕ ಗೆಲುವು ಸಾಧಿಸಿದೆ.

ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣೆಗಳು ನವೆಂಬರ್ 20ರಂದು ನಡೆಯಲಿದೆ. ರಾಷ್ಟ್ರೀಯವಾಗಿಯೂ ಈ ರಾಜ್ಯದ ಚುನಾವಣೆ ನಿರ್ಣಾಯಕವಾದ್ದು ಮತ್ತು ಮಹತ್ವದ್ದಾಗಿದ್ದು ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಇತ್ತೀಚಿನ ಚುನಾವಣಾ ರಾಜಕೀಯ ಹಿನ್ನೆಲೆ, ಇಂದಿನ ಪರಿಸ್ಥಿತಿ, ಚುನಾವಣಾ ವಿಷಯ ಪ್ರಚಾರ, ಸಂಬಾವ್ಯ ಫಲಿತಾಂಶಗಳ ವಿಶ್ಲೇಷಣೆ ಇಲ್ಲಿದೆ.

ಮಹಾರಾಷ್ಟ್ರ: ಇಂಡಿಯಾ ಕೂಟ ಮತ್ತೆ ಜಯಭೇರಿ ಬಾರಿಸುವುದೆ?



ವಸಂತರಾಜ ಎನ್.ಕೆ.

ಈ ಬಾರಿಯ (2024) ಲೋಕಸಭಾ ಚುನಾವಣೆಯಲ್ಲಿ ಅತ್ಯಂತ ಅನಿರೀಕ್ಷಿತ (ಕನಿಷ್ಠ ಬಿಜೆಪಿಗೆ) ಮತ್ತು ಬಿಜೆಪಿ ವಿರೋಧಿ ಅಲೆ ಸ್ಪಷ್ಟವಾಗಿ ಕಂಡು ಬಂದಿದ್ದು ಉತ್ತರ ಪ್ರದೇಶ ಬಿಟ್ಟರೆ, ಮಹಾರಾಷ್ಟ್ರದಲ್ಲಿ. ಹಾಗಾಗಿ ಲೋಕಸಭಾ ಚುನಾವಣೆಯಲ್ಲಿ ಬಹುಮತ ಕಳೆದುಕೊಂಡ ನಂತರ ನಾಲ್ಕು ರಾಜ್ಯಗಳ ಚುನಾವಣೆಯನ್ನು ಒಟ್ಟಿಗೆ ನಡೆಸಲು ಹಿಂಜರಿಯಿತು. ಹರಿಯಾಣ ಮತ್ತು ಜಮ್ಮು-ಕಾಶ್ಮೀರ ಚುನಾವಣೆಗಳನ್ನು ಮೊದಲ ಹಂತದಲ್ಲಿ ಅಕ್ಟೋಬರ್‌ನಲ್ಲಿ, ಹಾಗೂ ಮಹಾರಾಷ್ಟ್ರ, ಜಾರ್ಖಂಡ್ ಚುನಾವಣೆಗಳನ್ನು ನವೆಂಬರ್‌ನಲ್ಲಿ ನಡೆಸಲು ನಿರ್ಧರಿಸಿತು. ಸಾಮಾನ್ಯವಾಗಿ ನಾಲ್ಕೂ ಚುನಾವಣೆಗಳನ್ನು ಒಟ್ಟಿಗೆ ನಡೆಸಬೇಕಾಗಿತ್ತು. ಇದರಲ್ಲಿ ಮಹಾರಾಷ್ಟ್ರದ ಚುನಾವಣೆ ಬಿಜೆಪಿಗೆ ಅತ್ಯಂತ ಪ್ರಮುಖವಾದ್ದರಿಂದ ಅದಕ್ಕೆ ಗರಿಷ್ಠ ಸಮಯ ತೆಗೆದುಕೊಂಡಿತು.

ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಅಲ್ಲದೆ, ಮಹಾರಾಷ್ಟ್ರದಲ್ಲಿ ಪ್ರಾದೇಶಿಕ ಪಕ್ಷಗಳಾದ ಶಿವಸೇನಾ ಮತ್ತು ಕಾಂಗ್ರೆಸ್‌ನಿಂದ ಬೇರ್ಪಡೆಯಾದ ಶರದ ಪವಾರ್ ನಾಯಕತ್ವದ ಎನ್‌ಸಿಪಿ (ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ) ಪ್ರಮುಖ ಪಕ್ಷಗಳು. ಶಿವಸೇನಾ ಮತ್ತು ಬಿಜೆಪಿ 1989ರ ಚುನಾವಣೆಗಳಿಂದ ಮೈತ್ರಿಕೂಟ ರಚಿಸಿ ಜೊತೆಗೆ ಚುನಾವಣೆಗೆ ಸ್ಪರ್ಧಿಸಿ ಹಲವು ಬಾರಿ ಜಂಟಿಯಾಗಿ ಸರಕಾರ ರಚಿಸಿದ್ದು, 2019ರಲ್ಲಿ ಅವುಗಳ ಮೈತ್ರಿ ಮುರಿದು ಬಿತ್ತು. ಅದೇ ರೀತಿ ಕಾಂಗ್ರೆಸ್–ಎನ್‌ಸಿಪಿ 1999ರಿಂದ ಅಂದರೆ, ಸುಮಾರು 25 ವರ್ಷಗಳಿಂದ ಮೈತ್ರಿಕೂಟದಲ್ಲಿವೆ.

ಮಹಾರಾಷ್ಟ್ರದಲ್ಲಿ 1952ರಿಂದ 2009ರ ವರೆಗೆ (1978 ಮತ್ತು 1995 ಹೊರತುಪಡಿಸಿ) ಕಾಂಗ್ರೆಸ್ ಭದ್ರಕೋಟೆಯಾಗಿದ್ದು, 1995ರಲ್ಲಿ ಮೊದಲ ಬಾರಿಗೆ ಶಿವಸೇನಾ–ಬಿಜೆಪಿ ಅಧಿಕಾರಕ್ಕೆ ಬಂದಿತ್ತು. 1999ರಲ್ಲಿ ಕಾಂಗ್ರೆಸ್‌ನಿಂದ ಎನ್‌ಸಿಪಿ ಬೇರ್ಪಡೆಯಾದರೂ, ಕಾಂಗ್ರೆಸ್ ಜತೆಗೆ ಮೈತ್ರಿಕೂಟದಲ್ಲಿತ್ತು. ಮುಖ್ಯ ಸ್ಪರ್ಧೆ 2019ರ ವರೆಗೆ ಶಿವಸೇನಾ–ಬಿಜೆಪಿ ಮತ್ತು ಕಾಂಗ್ರೆಸ್–ಎನ್‌ಸಿಪಿ ಕೂಟಗಳ ನಡುವೆಯೇ ಇತ್ತು. 2014 ಮತ್ತು 2019ರಲ್ಲಿ ಶಿವಸೇನಾ–ಬಿಜೆಪಿ ಕೂಟ ಗೆಲುವು ಸಾಧಿಸಿತ್ತು.

ಈ ಬಾರಿಯ ಚುನಾವಣಾ ಸ್ಪರ್ಧೆಯಲ್ಲಿ ವಿವಿಧ ಪಕ್ಷಗಳ ಬಲಾಬಲ, ಸಂಭಾವ್ಯ ಫಲಿತಾಂಶವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕಳೆದ ಒಂದು ದಶಕದ ಚುನಾವಣಾ ಫಲಿತಾಂಶಗಳನ್ನು ಪರಿಶೀಲಿಸಬೇಕು. ಕೋಷ್ಟಕ 1 ರಲ್ಲಿ 2014ರ ವಿಧಾನಸಭೆ, 2019ರ ಲೋಕಸಭೆ ಮತ್ತು 2019ರ ವಿಧಾನಸಭೆಗಳಲ್ಲಿ ಸೀಟು ಮತ್ತು ಮತಗಳಿಕೆಯಲ್ಲಿ ಪಕ್ಷಗಳ ಮತ್ತು ಮೈತ್ರಿಕೂಟಗಳ ಬಲಾಬಲಗಳನ್ನು ಕೊಡಲಾಗಿದೆ.

ಕೋಷ್ಟಕ–1

ಪಕ್ಷ/ಕೂಟ	2014 ವಿಧಾನಸಭೆ	2019 ಏಪ್ರಿಲ್ ಲೋಕಸಭೆ	2019 ನವೆಂಬರ್ ವಿಧಾನಸಭೆ
ಬಿಜೆಪಿ ಸೀಟು	122	23(122)	105
ಬಿಜೆಪಿ ಮತ%	27.8	27.8	25.8
ಶಿವಸೇನಾ ಸೀಟು	63	18(105)	56
ಶಿವಸೇನಾ ಮತ%	19.4	23.5	16.4
ಎನ್‌ಡಿಎ ಸೀಟು	**185**	**41**	**161**
ಎನ್‌ಡಿಎ ಮತ%	**47.2**	**51.3**	**42.2**
ಕಾಂಗ್ರೆಸ್ ಸೀಟು	42	1(22)	44
ಕಾಂಗ್ರೆಸ್ ಮತ%	18	16.4	15.9
ಎನ್‌ಸಿಪಿ ಸೀಟು	41	4(23)	54
ಎನ್‌ಸಿಪಿ ಮತ%	17.2	15.7	16.7
ಯುಪಿಎ ಸೀಟು	**83**	**5**	**108**
ಯುಪಿಎ ಮತ%	**35.2**	**32.1**	**32.6**
ಇತರ ಸೀಟು	19#	2* (16)	29#
ಇತರ ಮತ%	12.4	10.5	14.7
ಒಟ್ಟು ಸೀಟು	288	48	288

* 1 ಎಐಎಂಐಎಂ + 1 ಪಕ್ಷೇತರ


ಯುಪಿಎ/ಎನ್‌ಡಿಎ ಗೆ ಸೇರಿದ ಮತ್ತು ಸೇರದ ಎಲ್ಲ ಪಕ್ಷಗಳ ಸಂಖ್ಯೆ ಇಲ್ಲಿದೆ.

ಕೋಷ್ಟಕ 1 ರಿಂದ ಈ ಕೆಳಗಿನ ಅಂಶಗಳನ್ನು ತಿಳಿಯಬಹುದು.

* ಈ ಅವಧಿಯಲ್ಲಿ ಎನ್‌ಡಿಎ ಕೂಟ ಯುಪಿಎ ಕೂಟಕ್ಕಿಂತ ಮತಗಳಿಕೆಯಲ್ಲಿ ಸ್ಪಷ್ಟವಾಗಿ ಮುಂದಿತ್ತು.
* ಆದರೂ ವಿಧಾನಸಭೆಯಲ್ಲಿ ಯುಪಿಎ ಮತ್ತು ಇತರ ಪಕ್ಷಗಳ ಮತಗಳು ಸೇರಿದರೆ ಎನ್‌ಡಿಎ ಕೂಟಕ್ಕಿಂತ ಹೆಚ್ಚಿತ್ತು ಮತ್ತು 2014ರಿಂದ 2019ಕ್ಕೆ ಗಮನಾರ್ಹವಾಗಿ ಇಳಿದಿತ್ತು.
* ವಿಧಾನಸಭೆಯಲ್ಲಿ ಇತರ ಪಕ್ಷಗಳು ಯಾವುದೇ ಕೂಟದ ಜತೆ ಅಥವಾ ಸ್ವತಂತ್ರವಾಗಿ ಶೇ. 13–15 ಮತ ಗಳಿಸುತ್ತಿದ್ದವು. ಅವರ ಸೀಟುಗಳು ಗಮನಾರ್ಹ ಏರಿಕೆ ಕಂಡಿತ್ತು.
* 2019ರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಬಹುಪಾಲು ಸೀಟು ಗಳಿಸಿ ಗೆದ್ದಿದ್ದರೂ, ಮುಖ್ಯಮಂತ್ರಿ ಪದಕ್ಕೆ ತಿಕ್ಕಾಟದಲ್ಲಿ ಎನ್‌ಡಿಎ ಕೂಟ ಮುರಿದು ಬಿತ್ತು. ಕಾಂಗ್ರೆಸ್ ಮತ್ತು ಎನ್‌ಸಿಪಿ ಕೂಟ ಶಿವಸೇನಾವನ್ನು ತಮ್ಮ ಕೂಟಕ್ಕೆ ಆಹ್ವಾನಿಸಿ ಅದರ ನಾಯಕ ಉದ್ಧವ ಠಾಕ್ರೆ ಅವರಿಗೆ ಮುಖ್ಯಮಂತ್ರಿಯನ್ನಾಗಿ ಮಾಡಿ 'ಮಹಾ ವಿಕಾಸ ಅಘಾಡಿ' ಎಂಬ ಹೊಸ ಮೈತ್ರಿಕೂಟ ಸ್ಥಾಪಿಸಿತು.



ಆದರೆ ಜೂನ್ 2022ರಲ್ಲಿ ಬಿಜೆಪಿ ತನ್ನ ಪ್ರಭುತ್ವದ ಬಲ ಮತ್ತು ಧನಬಲಗಳನ್ನು ನಗ್ನವಾಗಿ ಬಳಸಿ 'ಆಪರೇಷನ್ ಕಮಲ' ನಡೆಸಿ ಶಿವಸೇನಾ ಮತ್ತು ಎನ್‌ಸಿಪಿ ಪಕ್ಷಗಳನ್ನು ಒಡೆದು 'ಮಹಾ ವಿಕಾಸ ಅಘಾಡಿ' ಸರಕಾರವನ್ನು ಉರುಳಿಸಿ 'ಮಹಾಯುತಿ' ಸರಕಾರ ರಚಿಸಿತು. ಈ ಅಸಂವಿಧಾನಿಕ ಕೃತ್ಯಗಳಲ್ಲಿ



ಗವರ್ನರ್ ಜತೆಗೆ, ಸುಪ್ರೀಂ ಕೋರ್ಟು, ಚುನಾವಣಾ ಕಮಿಶನ್ ಸಹ ಶಾಮೀಲಾಗಿದ್ದವು. ಇದರಿಂದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಪಕ್ಷಗಳ ಕೂಟಗಳ ಬಲಾಬಲ ಬದಲಾಯಿತು. ಲೋಕಸಭಾ ಚುನಾವಣೆಯ ಹೊತ್ತಿಗೆ (2024 ಎಪ್ರಿಲ್) ಪಕ್ಷಗಳ ಬಲಾಬಲ ಕೋಷ್ಟಕ–2ರಲ್ಲಿ ತೋರಿಸಿದಂತೆ ಇತ್ತು.

ಆದರೆ 2024ರ ಲೋಕಸಭಾ ಚುನಾವಣೆಯಲ್ಲಿ ಜನರು ಪಕ್ಷಗಳ ಕೂಟಗಳ ಬಲಾಬಲವನ್ನು ತಲೆಕೆಳಗು ಮಾಡಿದರು. ಎನ್‌ಡಿಎ ಕೂಟ ಭಾರೀ ಸೋಲು ಅನುಭವಿಸಿತು. ಹಿಂದಿನ 41 ಸೀಟು ಮತ್ತು ಶೇ. 51.3 ಮತಗಳಿಕೆಯಿಂದ ಕೇವಲ 17 ಸೀಟು ಮತ್ತು ಶೇ. 43.55 ಮತಗಳಿಕೆಗೆ ಕುಸಿಯಿತು. ಮತಗಳಿಕೆಯಲ್ಲಿ ಎನ್‌ಡಿಎ ಗಿಂತ ಅಲ್ಪ ಮುನ್ನಡೆ ಮಾತ್ರ ಸಾಧಿಸಿದ್ದ, ಆದರೆ ಅದರ ಹಿಂದಿನ ಸಾಧನೆ ಶೇ. 32.6ರಿಂದ 43.71ಕ್ಕೆ ಜಿಗಿದು, ಇಂಡಿಯಾ ಕೂಟ ಸೀಟು ಗಳಿಕೆಯನ್ನು 30ಕ್ಕೆ ಏರಿಸಿಕೊಂಡಿತು. ಕೋಷ್ಟಕ–2ರ 3ನೇ ಕಾಲಂನಲ್ಲಿ ತೋರಿಸಿದಂತೆ 151 ವಿಧಾನಸಭಾ ಸೀಟುಗಳಲ್ಲಿ

ಪುಟ 10 ಕ್ಕೆ

ಕೋಷ್ಟಕ–2

ಪಕ್ಷ/ಕೂಟ	2024 ಎಪ್ರಿಲ್ ವಿಧಾನಸಭೆ	2024 ಎಪ್ರಿಲ್ ಲೋಕಸಭೆ ಫಲಿತಾಂಶ	2024 ಲೋಕಸಭಾ (ಮುನ್ನಡೆ ವಿ.ಸ. ಕ್ಷೇತ್ರ)	2024 ಸೀಟು ಸ್ಪರ್ಧೆ
ಬಿಜೆಪಿ ಸೀಟು	103	9/28	83	141+4
ಬಿಜೆಪಿ ಮತ%		26.18		
ಶಿವಸೇನಾ (ಶಿಂಧ) ಸೀಟು	38	7/15	38	50+6
ಶಿವಸೇನಾ (ಶಿಂದೆ) ಮತ%		12.95		
ಎನ್‌ಸಿಪಿ (ಅಜಿತ್) ಸೀಟು	40	1/4	6	50+9
ಎನ್‌ಸಿಪಿ (ಅಜಿತ್) ಮತ%		3.60		
ಇತರ –ಎನ್‌ಡಿಎ ಸೀಟು	22	0/1	1	5+2
ಇತರ –ಎನ್‌ಡಿಎ ಮತ%		0.82		
ಒಟ್ಟು –ಎನ್‌ಡಿಎ ಸೀಟು	**203**	**17**	**128**	
ಒಟ್ಟು –ಎನ್‌ಡಿಎ ಮತ%		**43.55**		
ಶಿವಸೇನಾ (ಉದ್ಧವ) ಸೀಟು	16	9/21	56	90+2
ಶಿವಸೇನಾ (ಉದ್ಧವ) ಮತ%		16.52		
ಎನ್‌ಸಿಪಿ (ಶರದ) ಸೀಟು	12	8/10	32	85+1
ಎನ್‌ಸಿಪಿ (ಶರದ್) ಮತ%		10.27		
ಕಾಂಗ್ರೆಸ್ ಸೀಟು	37	13/17	63	100+2
ಕಾಂಗ್ರೆಸ್ ಮತ %		16.92		
ಇತರ –ಇಂಡಿಯಾ ಸೀಟು	4	0/0	0	8+10
ಇತರ –ಇಂಡಿಯಾ ಮತ%		0		
ಒಟ್ಟು –ಇಂಡಿಯಾ ಸೀಟು	**69**	**30**	**151**	
ಒಟ್ಟು –ಇಂಡಿಯಾ ಮತ%		**43.71**		
ಇತರ –ಸೀಟು	2	1	9	
ಇತರ –ಮತ %		12.74		
ಒಟ್ಟು ಸೀಟು	**288**		**288**	

ಮಹಾರಾಷ್ಟ್ರ: ಇಂಡಿಯಾ ಕೂಟ ಮತ್ತೆ ಜಯಭೇರಿ......

ಪುಟ 9 ರಿಂದ

ಮುನ್ನಡೆ ಸಾಧಿಸಿತು. ಎನ್‌ಡಿಎ 128 ಸೀಟುಗಳಲ್ಲಿ ಮುನ್ನಡೆ ಸಾಧಿಸಿತು. ಈಗಿನ ತನ್ನ ವಿಧಾನಸಭೆಯ ಸ್ಥಾನಕ್ಕೆ ಹೋಲಿಸಿದರೆ ಶಿವಸೇನಾ(ಶಿಂಧೆ) ಹೆಚ್ಚು ಕಡಿಮೆ ಯಥಾಸ್ಥಿತಿ ಕಾಪಾಡಿಕೊಂಡರೆ, ಬಿಜೆಪಿ 20 ಕ್ಷೇತ್ರಗಳಲ್ಲಿ ಮುನ್ನಡೆ ಕಳೆದುಕೊಂಡಿದೆ. ಅಜಿತ್ ಪವಾರ್ ಎನ್‌ಸಿಪಿ ಪಕ್ಷದ ಮುನ್ನಡೆ 40ರಿಂದ 6ಕ್ಕೆ ಕುಸಿದಿದೆ. ಇಂಡಿಯಾ ಕೂಟ ತನ್ನ ಬಲವನ್ನು (69 ರಿಂದ 151ಕ್ಕೆ) ಇಮ್ಮಡಿಗೊಳಿಸಿಕೊಂಡಿದೆ.

ಅದೇ ಸಮಯದಲ್ಲಿ, ಬಿಜೆಪಿಯ 'ಆಪರೇಶನ್'ಗೆ ಒಳಗಾದ ಪ್ರಾದೇಶಿಕ ಪಕ್ಷಗಳಾದ ಶಿವಸೇನಾ ಮತ್ತು ಎನ್‌ಸಿಪಿ ಯ ಮತಗಳಿಕೆಯ ಮೇಲೆ 2024ರ ಲೋಕಸಭಾ ಚುನಾವಣೆ ವಿರುದ್ಧ ಪರಿಣಾಮಗಳನ್ನು ತೋರಿಸುತ್ತದೆ. 2019ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಶಿವಸೇನಾ ಬಣಗಳ ಒಟ್ಟು ಮತಗಳಿಕೆ (ಶೇ. 16.4ರಿಂದ ಶೇ. 29.5ಕ್ಕೆ) ಏರಿದೆ. ಇದು 2014ರ ವಿಧಾನಸಭೆ, 2019ರ ಲೋಕಸಭಾ ಚುನಾವಣೆಗಳಿಗಿಂತಲೂ ಹೆಚ್ಚಾಗಿದೆ. ಆದರೆ ಎನ್‌ಸಿಪಿ ಬಣಗಳ ಒಟ್ಟು ಮತಗಳಿಕೆ (ಶೇ.13.8) 2019ರ ವಿಧಾನಸಭಾ ಚುನಾವಣೆಗೆ (ಶೇ.16.7) ಹೋಲಿಸಿದರೆ ಕುಸಿದಿದೆ. ಬಿಜೆಪಿ ಸೀಟುಗಳಲ್ಲಿ ಹೊಡೆತ ತಿಂದಿದ್ದರೂ, ತನ್ನ ಒಟ್ಟು ಮತಗಳಿಕೆಯನ್ನು ಕಾಯ್ದುಕೊಂಡಿದೆ ಎಂಬುದು ಗಮನಾರ್ಹವಾಗಿದೆ. ಆದರೆ ಇದು ಹೊಸ ಸ್ಥಿತಿಯಲ್ಲಿ ಹೆಚ್ಚು ಸೀಟುಗಳಲ್ಲಿ ಸ್ಪರ್ಧಿಸಿದ್ದರಿಂದಲೂ ಇರಬಹುದು.

ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳು ನಡೆಯುತ್ತಿವೆ. ಈಗಿನ ಸ್ಪರ್ಧೆಯಲ್ಲಿ ಪಕ್ಷ, ಕೂಟಗಳ ಪಾತ್ರವನ್ನು ಕೋಷ್ಟಕ–2ರಲ್ಲಿ ಕೊನೆಯ ಕಾಲಂ ಕೊಡುತ್ತದೆ. ಪ್ರತಿ ಪಕ್ಷ ಕೂಟದ ಭಾಗವಾಗಿ ಸ್ಪರ್ಧಿಸುತ್ತಿರುವ ಸೀಟುಗಳ ಸಂಖ್ಯೆ ಕೊಡಲಾಗಿದೆ. + ಎಂದು ಕೊಟ್ಟಿರುವ ಸಂಖ್ಯೆ ಕೂಟದ ಇತರ ಪಕ್ಷಗಳಿಗೆ ಕೊಡಲಾಗಿರುವ ಸೀಟುಗಳಲ್ಲಿ 'ಸ್ನೇಹಪರ ಪೈಪೋಟಿ'ಯಲ್ಲಿ ಸ್ಪರ್ಧಿಸಿರುವ ಹೆಚ್ಚುವರಿ ಕ್ಷೇತ್ರಗಳು ಬಿಜೆಪಿ ಎನ್‌ಡಿಎ ಕೂಟ ಕೊಟ್ಟಿರುವ 141 ಸೀಟುಗಳಲ್ಲದೆ 4 ಇತರ ಸೀಟುಗಳಲ್ಲಿ ಎನ್‌ಡಿಎ ಕೂಟದ ಮಿತ್ರರ ವಿರುದ್ಧ ಸ್ಪರ್ಧಿಸುತ್ತಿದೆ. ಪ್ರತಿ ಕೂಟವು ಕೆಲವು ಸೀಟುಗಳಲ್ಲಿ ಇತರ ಪಕ್ಷಗಳಿಗೆ ಪಕ್ಷೇತರ ಅಭ್ಯರ್ಥಿಗಳಿಗೆ ಬಿಟ್ಟುಕೊಟ್ಟಿದೆ. ಉದಾಹರಣೆಗೆ ಎನ್‌ಡಿಎ ರಾಜಾ ಠಾಕ್ರೆಯ ಎಂಎನ್‌ಎಸ್‌ಗೆ 2 ಸಿಟುಗಳನ್ನು ಬಿಟ್ಟಿದೆ. ಆದರೆ ಎಂಎನ್‌ಎಸ್ 100ಕ್ಕೂ ಹೆಚ್ಚು ಸೀಟುಗಳಲ್ಲಿ ಸ್ಪರ್ಧಿಸುತ್ತಿದೆ. ಎನ್‌ಡಿಎ/ಯುಪಿಎ ಕೂಟದ ಯಾವ ಪಕ್ಷ ಎದುರಾಳಿ ಕೂಟದ ಯಾವ ಪಕ್ಷದ ವಿರುದ್ಧ ಎಷ್ಟು ಸೀಟು ಗಳಲ್ಲಿ ಸ್ಪರ್ಧಿಸುತ್ತಿದೆ ಎಂಬ ವಿವರ ಕೋಷ್ಟಕ 3 ರಲ್ಲಿದೆ.

ಇಲ್ಲಿ ಕಂಡುಬಂದಂತೆ ಬಹುಪಾಲು ಪೈಪೋಟಿ ಕಾಂಗ್ರೆಸ್–ಬಿಜೆಪಿ (75), ಶಿವಸೇನಾ ಬಣಗಳ 50, ಎನ್‌ಸಿಪಿ–ಬಿಜೆಪಿ(4), ಎನ್‌ಸಿಪಿ ಬಣಗಳ (38) ನಡುವೆ ನಡೆಯಲಿವೆ.

ಇಂಡಿಯಾ ಕೂಟದ ಭಾಗವಾಗಿ ಸಮಾಜವಾದಿ ಪಕ್ಷ (2+7), ಸಿಪಿಐ(ಎಂ) (2+1), ಪಿಡಬ್ಲ್ಯೂಪಿ (3+2), ಸಿಪಿಐ(1) ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. (+ ಮುಂದಿರುವುದು ಕೂಟದೊಳಗೆ ಸ್ನೇಹಪರ ಸ್ಪರ್ಧೆ)

ಎನ್‌ಡಿಎ ಕೂಟದ ಭಾಗವಾಗಿ ಜನ ಸುರಾಜ್ಯಶಕ್ತಿ (2+1), ರಾಷ್ಟ್ರೀಯ ಯುವ ಸ್ವಾಭಿಮಾನ ಪಕ್ಷ, (1+1), ಶಾಹು ವಿಕಾಸ ಅಘಾಡಿ (1) ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. (+ ಮುಂದಿರುವುದು ಕೂಟದೊಳಗೆ ಸ್ನೇಹಪರ ಸ್ಪರ್ಧೆ)

ಎರಡೂ ಕೂಟಗಳಲ್ಲಿ ಸೀಟು ಹಂಚಿಕೆ ಭಾರೀ ಸವಾಲಿನದ್ದಾಗಿತ್ತು. ಪಕ್ಷಗಳ ನಡುವೆ ಬಹಿರಂಗ ಮತ್ತು ಮುಸುಕಿನ ಗುದ್ದಾಟ ನಡೆದಿತ್ತು. ಸೀಟು ಹಂಚಿಕೆ, ಆಭ್ಯರ್ಥಿ ಘೋಷಣೆ ಆಗುತ್ತಿದ್ದಂತೆ ಭಿನ್ನಮತ ಭುಗಿಲೆದ್ದಿತು. ಹಲವಾರು ಕಡೆ ಬಂಡಾಯ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಹಿರಿಯ ನಾಯಕರ ಮಧ್ಯಪ್ರವೇಶದ ನಂತರವೂ ಹಲವು 'ಸ್ನೇಹಪರ ಪೈಪೋಟಿ' ಇರುವುದು ಇದರಿಂದಾಗಿ.

ಈ ಎರಡೂ ಕೂಟಗಳಲ್ಲದೆ ಬಿಎಸ್‌ಪಿ (288), ಎಂಎನ್‌ಎಸ್ (135), ವಂಚಿತ ಬಹುಜನ ಅಘಾಡಿ (110), ಆಜಾದ್ ಸಮಾಜ (ಕಾಂಶಿರಾಂ) – 40, ಎಐಎಂಐಎಂ (16) ಹಲವು ಸೀಟುಗಳಲ್ಲಿ ಪಕ್ಷಗಳೂ ಕಣದಲ್ಲಿವೆ.

ಈ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಈ ಚುನಾವಣೆ ರಾಷ್ಟ್ರೀಯವಾಗಿ ಸಹ ಅತ್ಯಂತ ನಿರ್ಣಾಯಕವಾಗಿದೆ.

ಕೋಷ್ಟಕ 3

ಪಕ್ಷ	ಬಿಜೆಪಿ	ಶಿವಸೇನಾ (ಶಿಂದೆ)	ಎನ್‌ಸಿಪಿ (ಅಜಿತ್)	ಇತರೇ
ಕಾಂಗ್ರೆಸ್	75	15	7	2
ಶಿವಸೇನಾ (ಉದ್ಧವ್)	31	50	6	4
ಎನ್‌ಸಿಪಿ (ಶರದ್)	40	8	38	
ಇತರೇ	3	4	1	

ಚುನಾವಣಾ ವಿಷಯಗಳು

ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಬಿಜೆಪಿ–ಎನ್‌ಡಿಎ ಕೂಟದ ಪರಾಭವಕ್ಕೆ ಕಾರಣವಾದ ಎಲ್ಲ ಕಾರಣಗಳು ಇನ್ನೂ ಪ್ರಸ್ತುತವಾಗಿವೆ. ಕೆಲವು ಇನ್ನಷ್ಟು ತೀವ್ರವಾಗಿವೆ. ಇವೆಲ್ಲವೂ ಚುನಾವಣಾ ಪ್ರಚಾರದ ವಿಷಯವಾಗದಿದ್ದರೂ, ಅದರ ಫಲಿತದ ಮೇಲೆ ಪರಿಣಾಮ ಬೀರಲಿವೆ.

ಪ್ರಾದೇಶಿಕ ಅಸ್ಮಿತೆ

ಸಂವಿಧಾನಾತ್ಮಕ ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲ ನಿಯಮಗಳನ್ನು ಉಲ್ಲಂಘಿಸಿ, ನೈತಿಕತೆಯನ್ನು ಗಾಳಿಗೆ ತೂರಿ ಪ್ರಾದೇಶಿಕ ಪಕ್ಷಗಳಾದ ಶಿವಸೇನೆ ಮತ್ತು ಎನ್‌ಸಿಪಿಗಳನ್ನು ಒಡೆದದ್ದು ಜನತೆಯ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಅದು ಈಗಲೂ ಮುಂದುವರೆಯುತ್ತಿದೆ. ಈ ಪಕ್ಷಗಳ ಮೂಲನಾಯಕರ ಪರವಾಗಿ ಸಹಾನುಭೂತಿಯಿದೆ.

ಕಳೆದ ಎರಡು ವರ್ಷಗಳಲ್ಲಿ ಶಿಂಧೆ ನಾಯಕತ್ವದ ಮಹಾಯುತಿ ಕೂಟ ನೀಡಿದ ಅತ್ಯಂತ ಭ್ರಷ್ಟ ಅದಕ್ಷ ಸರಕಾರದಿಂದ ಸಹ ಜನ ತೀವ್ರವಾಗಿ ಆಕ್ರೋಶಗೊಂಡಿದ್ದಾರೆ. ಅಗಸ್ಟ್ 26, 2024ರಂದು ಸಿಂಧೂದುರ್ಗ ಜಿಲ್ಲೆಯ ಮಾಲ್ವಾನ್‌ನಲ್ಲಿ ಸ್ಥಾಪಿಸಿದ್ದ ಛತ್ರಪತಿ ಶಿವಾಜಿಯ 35 ಅಡಿ ಎತ್ತರದ ಬೃಹತ್ ಪ್ರತಿಮೆ ಕುಸಿದು ಬಿದ್ದದ್ದು ಈ ಸರಕಾರದ ಭ್ರಷ್ಟತೆಯ, ಅದಕ್ಷತೆಯ ಪ್ರತೀಕವಾಗಿ ಬಿಟ್ಟಿದೆ. ಮಾತ್ರವಲ್ಲ ಪ್ರಾದೇಶಿಕ ಅಸ್ಮಿತೆಯ ಭಾವನೆಗಳಿಗೆ ಘಾಸಿ ಮಾಡಿದೆ. ಕೋಟ್ಯಾಂತರ ರೂ. ಖರ್ಚಾದ ಪ್ರತಿಮೆಯ ಈ ಕುಸಿತ ಭ್ರಷ್ಟ ಕಾಂಟ್ರಾಕ್ಟರ್‌ನ ಕಳಪೆ ಕಾಮಗಾರಿಯ ಫಲವೆಂಬುದು ಸ್ಪಷ್ಟ. ಇದನ್ನು ಸ್ವತಃ ಪ್ರಧಾನ ಮಂತ್ರಿ ಮೋದಿ ಅವರು ಲೋಕಸಭಾ ಚುನಾವಣೆಯಲ್ಲಿ ಭಾವನಾತ್ಮಕ ಲಾಭ ಪಡೆಯುವ ಭಾಗವಾಗಿ ಡಿಸೆಂಬರ್ 4, 2023ರಂದು ವೈಭವ, ವಿಜೃಂಭಣೆಯಿಂದ ಲೋಕಾರ್ಪಣೆ ಮಾಡಲಾಗಿತ್ತು.

ಮಹಾಯುತಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ 'ಗುಜರಾತಿ ಲಾಬ್ಬಿ'ಯ ಪ್ರಭಾವ ವಿಪರೀತವಾಗಿದ್ದು, ಮಹಾರಾಷ್ಟ್ರಕ್ಕೆ ಬರಲಿದ್ದ ಹಲವು ಪ್ರಮುಖ ಪ್ರಾಜೆಕ್ಟುಗಳು ಗುಜರಾತಿಗೆ ವರ್ಗಾವಣೆಯಾಗಿವೆ. ಇವುಗಳಲ್ಲಿ ಪ್ರಮುಖವಾದ್ದು: ಟಾಟಾ ವಿದ್ಯುತ್ ವಾಹನ ಕಾರ್ಖಾನೆ, ವೇದಾಂತ–ಫಾಕ್ಸ್ ಕಾನ್ ಸೆಮಿಕಂಡಕ್ಟರ್ ಸ್ಥಾವರ, ಬೋಯಿಂಗ್, ಏರ್ ಬಸ್ ಕಾರ್ಖಾನೆ ಮತ್ತು ಅಂತರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರ (ಐಎಫ್‌ಎಸ್‌ಸಿ). ಇತ್ತೀಚೆಗೆ ಇಡೀ ಧಾರಾವಿ ಪ್ರದೇಶವನ್ನು ಅದಾನಿಗೆ ಪುನರ್–ಅಭಿವೃದ್ಧಿಗೆ ದಾನ ಮಾಡಿದ್ದು ಸಹ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯದ ಹಾಲು ಉತ್ಪಾದಕ ಮಹಾನಂದ ಡೈರಿಯನ್ನೂ ಅಮೂಲ್‌ಗೆ ವರ್ಗಾಯಿಸಿ ಅದನ್ನು ರಾಜ್ಯದಲ್ಲಿ (ಕರ್ನಾಟಕದಲ್ಲಿ ಆದಂತೆ) ಪ್ರಬಲಗೊಳಿಸುವ ಪ್ರಯತ್ನ ಇನ್ನಷ್ಟು ಆಕ್ರೋಶಕ್ಕೆ ಕಾರಣವಾಗಿದೆ.

2019ರಲ್ಲಿ 'ಮಹಾ ವಿಕಾಸ ಅಘಾಡಿ' ಸರಕಾರ ರಚಿಸದಂತೆ ಮಾಡುವ ಪ್ರಯತ್ನದಲ್ಲಿ ಮತ್ತು ಜೂನ್ 2022ರಲ್ಲಿ ಅದನ್ನು ಉರುಳಿಸುವ ಪ್ರಯತ್ನದಲ್ಲಿ ಅದಾನಿ ಪಾತ್ರವಿತ್ತು. ಅವರು ಆಗ ಬಿಜೆಪಿ ಪಕ್ಷದ ಅಧಿಕೃತ ಸಭೆಗಳಲ್ಲಿ ಭಾಗವಹಿಸಿದ್ದರು ಎಂದು ಇತ್ತೀಚೆಗೆ ಅಜಿತ್ ಪವಾರ್ ಹೇಳಿದ್ದು ಈ 'ಗುಜರಾತಿ ಲಾಬ್ಬಿ'ಯ ಮತ್ತು ಬಿಜೆಪಿಯ ವಿರುದ್ಧ ವ್ಯಾಪಕ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಆರ್ಥಿಕ ಸಂಕಟಗಳು

ಎನ್‌ಡಿಎ ಪರಾಭವಕ್ಕೆ ಇನ್ನೊಂದು ಕಾರಣ ಜನ ಎದುರಿಸುತ್ತಿದ್ದ ಆರ್ಥಿಕ ಸಂಕಟಗಳು ಆಗಿದ್ದವು. ಕೃಷಿ ಮತ್ತು ಇತರ ಕ್ಷೇತ್ರಗಳ ಸಂಕಟಗಳು, ತೀವ್ರ ಬೆಲೆಏರಿಕೆ, ನಿರುದ್ಯೋಗದ ಸಮಸ್ಯೆಗಳು ಎಪ್ರಿಲ್ ಗಿಂತಲೂ ಇನ್ನಷ್ಟು ದುರ್ಭರವಾಗಿವೆಯೇ ವಿನಾ ಯಾವುದೇ ಪರಿಹಾರ ಕಂಡಿಲ್ಲ. ರಾಜ್ಯ ಮತ್ತು ಕೇಂದ್ರದಲ್ಲಿ ಈಗ 'ಡಬ್ಬಲ್ ಇಂಜಿನ್' ಸರಕಾರ ಇರುವುದರಿಂದ ಬೇರೆ ಪಕ್ಷಗಳನ್ನು ದೂರುವಂತಿಲ್ಲ. ಎಲ್ಲ ಆಕ್ರೋಶವೂ ಬಿಜೆಪಿ–ಎನ್‌ಡಿಎ ವಿರುದ್ಧವೇ ತಿರುಗುತ್ತದೆ. ರೈತರಿಗೆ ಸಿಗುವ ಸೋಯಾಬಿನ್, ಹತ್ತಿ, ಈರುಳ್ಳಿ, ಕಬ್ಬು ಮತ್ತು ಹಾಲಿನ ಬೆಲೆ ಕುಸಿದಿದ್ದು ಪ್ರಮುಖ ಸಂಕಟವಾಗಿದೆ. ಸೋಯಾಬೀನ್ ಮತ್ತು ಹತ್ತಿಗಳನ್ನು ಹೆಚ್ಚಾಗಿ ವಿದರ್ಭ ಮತ್ತು ಮರಾಠಾವಾಡ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಈಗ ಆ ಬೆಳೆಗಳ ಕಟಾವಿನ ಸಮಯ. ರೈತರಿಗೆ ಸಿಗುತ್ತಿರುವುದು ಈ ಬೆಳೆಗಳಿಗೆ ನಿಗದಿ ಮಾಡಿದ ಕನಿಷ್ಠ ಬೆಂಬಲ ಬೆಲೆಗಿಂತ ಪ್ರತಿ ಕ್ವಿಂಟಾಲಿಗೆ 1000 ರೂ. ಕಡಿಮೆ ಬೆಲೆ. ಮಹಾಯುತಿ ಸರಕಾರದ ಅವಧಿಯಲ್ಲಿ ಬರ, ಅಕಾಲಿಕ ಮಳೆ, ನೆರೆ, ಆಲಿಕಲ್ಲು ಮಳೆಗಳ ಸರಣಿಯೇ ಬಂದಿದ್ದು, ಇವುಗಳಿಂದ ಆದ ನಷ್ಟಕ್ಕೆ ಯಾವುದೇ ಪರಿಹಾರದ ಸೊಲ್ಲೇ ಇಲ್ಲ.

ರಾಜ್ಯದ ಆರ್ಥಿಕ ಬೆಳವಣಿಗೆಯ ದರ 2014–19ರಲ್ಲಿ ಶೇ. 6.1 ಇದ್ದಿದ್ದು 2019–24ರಲ್ಲಿ ಶೇ. 4.5ಕ್ಕೆ ಇಳಿದಿದೆ. ರಾಜ್ಯದ ಕೈಗಾರಿಕಾ ಬೆಳವಣಿಗೆಯ ದರ 2014–19ರಲ್ಲಿ ಶೇ. 5.5 ಇದ್ದಿದ್ದು 2019–24ರಲ್ಲಿ ಶೇ. 1.3ಕ್ಕೆ ಇಳಿದಿದೆ. 2019–24ರ ಅವಧಿಯ ಸರಾಸರಿ ಮನ್ಯುಫ್ಯಾಕ್ಚರಿಂಗ್ ಬೆಳವಣಿಗೆ ದರ ಈಗ ನಕಾರಾತ್ಮಕ (ಶೇ.1) ಆಗಿದೆ. ರಾಜ್ಯದ ಮೇಲೆ 7.11 ಲಕ್ಷ ಕೋಟಿ ರೂ. ಸಾಲದ ಭಾರವಿದೆ. ಮುಂದಿನ ವರ್ಷದ ಹೊತ್ತಿಗೆ ಸಾಲದ ಬೆಳವಣಿಗೆಯ ದರ ಆರ್ಥಿಕ ಬೆಳವಣಿಗೆಯ ದರಕ್ಕಿಂತ ಹೆಚ್ಚಾಗಲಿದೆ. ರಾಷ್ಟ್ರೀಯ ಆದಾಯದಲ್ಲಿ ರಾಜ್ಯದ ಪಾಲು 2010–11ರಲ್ಲಿ ಶೇ. 15.2 ಇದ್ದಿದ್ದು, 2023–24ರಲ್ಲಿ ಶೇ. 13.3ಕ್ಕೆ ಇಳಿದಿದೆ. ರಾಜ್ಯಗಳ ತಲಾ ಆದಾಯದಲ್ಲಿ ಈಗ ರಾಜ್ಯ 6ನೇ ಸ್ಥಾನಕ್ಕೆ ಕುಸಿದಿದೆ. ಜನಾರೋಗ್ಯ ಅಭಿಯಾನ ತಯಾರಿಸಿದ ಆರೋಗ್ಯ ರಿಪೋರ್ಟ್ ಕಾರ್ಡ್‌ನಲ್ಲಿ ರಾಜ್ಯಕ್ಕೆ ಬಹಳ ಕಡಿಮೆ (100ರಲ್ಲಿ 23) ಅಂಕ ಕೊಟ್ಟಿದೆ. ಆರೋಗ್ಯಕ್ಕೆ ರಾಜ್ಯದ ತಲಾ ವೆಚ್ಚ ಕೇವಲ ರೂ. 1979 (ರಾಷ್ಟ್ರೀಯ ಸರಾಸರಿ ರೂ 2342ಕ್ಕಿಂತಲೂ ಕಡಿಮೆ). ರಾಜ್ಯ ದೇಶದಲ್ಲಿ ಕೆಳಗಿನಿಂದ 6ನೇ ಸ್ಥಾನದಲ್ಲಿದೆ.

'ಲಾಡಲೀ ಬೆಹನಾ' ಮಹಾಯುತಿ ಕೈ ಹಿಡಿಯುವುದೇ?

ಲೋಕಸಭಾ ಚುನಾವಣೆಯಲ್ಲಿ ಪರಾಭವದ ನಂತರ ಗಾಬರಿಯಾಗಿದ್ದ ಮತ್ತು ಕಾಂಗ್ರೆಸ್ 'ಗ್ಯಾರಂಟಿ ರಾಜಕೀಯ'ದ ಪರಿಣಾಮ ಕಂಡಿದ್ದ ಮಹಾಯುತಿ ಸರಕಾರ ವಿಧಾನಸಭಾ ಚುನಾವಣಾ ತಯಾರಿಯ ಭಾಗವಾಗಿ, ತರಾತುರಿಯಲ್ಲಿ 'ಲಾಡಲಿ ಬೆಹನಾ' (ಮುದ್ದಿನ ತಂಗಿ) ಯೋಜನೆ ಘೋಷಿಸಿತು. ಕರ್ನಾಟಕದ 'ಗೃಹಲಕ್ಷ್ಮಿ' ಮತ್ತು ಮಧ್ಯ ಪ್ರದೇಶದ ಅದೇ ಹೆಸರಿನ ಯೋಜನೆಯನ್ನು ಹೋಲುವ ಇದರ ಅಡಿಯಲ್ಲಿ 21ರಿಂದ 65 ವರ್ಷದವರೆಗಿನ ಮತ್ತು 2.5 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯದ ಮಹಿಳೆಯರು ಪ್ರತಿ ತಿಂಗಳು ರೂ. 1500 ಪಡೆಯುತ್ತಾರೆ. ಈ ಯೋಜನೆಯ ಕಳೆದ 5 ತಿಂಗಳುಗಳಿಂದ ಜಾರಿಯಾಗಿದ್ದು 2.40 ಕೋಟಿ ಮಹಿಳೆಯರು ಇದನ್ನು ಪಡೆಯುತ್ತಿದ್ದಾರೆ ಎಂದು ಸರಕಾರ ಹೇಳುತ್ತಿದೆ. ಇದು ಲೋಕಸಭಾ ಚುನಾವಣೆಯ ನಂತರದ ಪ್ರಮುಖ ಬೆಳವಣಿಗೆ. ಇದು ತನ್ನ ಕೈ ಹಿಡಿಯುವುದು ಎಂಬುದು ಮಹಾಯುತಿಯ ಭರವಸೆ. ಇದು ಜಾರಿಯಾಗಿ ಅದರ ಪರಿಣಾಮ ಬೀರಬೇಕು ಎಂದೇ ರಾಜ್ಯದ ಚುನಾವಣೆಯನ್ನು ಆದಷ್ಟು ದೂರ ತಳ್ಳಲಾಗಿತ್ತು. ಮಹಾಯುತಿಯ ಪರವಾಗಿ (ಭರವಸೆಗೆ ಬದಲಾಗಿ ಜಾರಿಯಾದ ಯೋಜನೆಯಾಗಿ) ಇದು ದೊಡ್ಡ ಮತ್ತು ಒಂದೇ ಸಕಾರಾತ್ಮ ಅಂಶವಾಗಿದ್ದರೂ, ಇತರ ನಕಾರಾತ್ಮಕ ಅಂಶಗಳನ್ನು ಶಮನ ಗೊಳಿಸುವುದು ಸಾಧ್ಯವೇ ಎಂಬುದನ್ನು ಕಾದು ನೋಡಬೇಕು. ಆದರೆ ಇದು ಮಹಾಯುತಿಯ ನಷ್ಟವನ್ನು ಸ್ವಲ್ಪ ಮಟ್ಟಿಗಾದರೂ ಭರಿಸಬಹುದು.

ಮಹಾ ವಿಕಾಸ ಅಘಾಡಿ ತನ್ನದೇ ಆದ 5 ಗ್ಯಾರಂಟಿಗಳನ್ನು ಘೋಷಿಸಿ 'ಲಾಡಲಿ ಬೆಹನಾ' ಗೆ ಕೌಂಟರ್ ಕೊಟ್ಟಿದೆ. ಅವರ ಮಹಾಲಕ್ಷ್ಮಿ ಯೋಜನೆ ಪ್ರಕಾರ ಅರ್ಹ ಮಹಿಳೆಯರು ತಿಂಗಳಿಗೆ ರೂ 3000 ಮತ್ತು ಉಚಿತ ಬಸ್ ಪ್ರಯಾಣ ಪಡೆಯುತ್ತಾರೆ. ರೈತರಿಗೆ 3 ಲಕ್ಷ ಸಾಲಮನ್ನಾ ಮತ್ತು ಸಾಲಪಾವತಿಗೆ ರೂ. 50,000, ಆರೋಗ್ಯ ವಿಮೆ ಇಲ್ಲದ 25 ಲಕ್ಷ ಜನರಿಗೆ ಆರೋಗ್ಯ ವಿಮೆ, ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ 4,000, ರೂ 500 ಸಬ್ಸಿಡಿ ದರದಲ್ಲಿ ವರ್ಷಕ್ಕೆ 6 ಅಡುಗೆ ಅನಿಲ ಸಿಲಿಂಡರುಗಳನ್ನು ಕೊಡುವ ಗ್ಯಾರಂಟಿಗಳನ್ನು ನೀಡಿದೆ. ಇದಲ್ಲದೆ ಜಾತಿ ಜನಗಣತಿ, ಮೀಸಲಾತಿಗೆ ಶೇ.50 ಮಿತಿ ಕಿತ್ತು ಹಾಕುವುದು, 2.5 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು, ರೈತ ಆತ್ಮಹತ್ಯೆ ತಡೆಯಲು ತುರ್ತು ಕ್ರಮಗಳು, ರೈತರಿಗೆ ಕನಿಷ್ಠ ಬೆಂಬಲ ಬೆಲೆ ಜಾರಿ, ಸಣ್ಣ, ಮಧ್ಯಮ ಉದ್ಯಮಗಳ ಸ್ಥಾಪನೆಗೆ ಉತ್ತೇಜನ ಸೇರಿದಂತೆ 25 ಭರವಸೆಗಳನ್ನು ನೀಡಿದೆ. ಇದಕ್ಕೆ ಪ್ರತಿಯಾಗಿ ಮಹಾಯುತಿಯ 10 ಗ್ಯಾರಂಟಿಗಳಲ್ಲಿ 'ಲಾಡಲಿ ಯೋಜನೆಯ ಭತ್ಯೆ ರೂ. 1500ರಿಂದ ರೂ. 2100ಕ್ಕೆ ಏರಿಕೆ, ಕಿಸಾನ್ ಸಮ್ಮಾನ್ ವಾರ್ಷಿಕ ರೂ. 12ರಿಂದ 15 ಸಾವಿರಕ್ಕೆ ಏರಿಕೆ, ವೃದ್ಧಾಪ್ಯ ಪೆನ್ಸನ್ ರೂ. 1500ನಿಂದ ➚

ರೂ. 2100ಕ್ಕೆ ಏರಿಕೆ, ವಿದ್ಯುತ್ ಬಿಲ್‌ನಲ್ಲಿ ಶೇ. 30 ಸಬ್ಸಿಡಿ, ಕನಿಷ್ಟ ಬೆಂಬಲ ಬೆಲೆ ಮೇಲೆ ಶೇ. 20 ಸಬ್ಸಿಡಿ – ಇತ್ಯಾದಿ ಸೇರಿವೆ.

ಎರಡು ಕೂಟಗಳ ಗ್ಯಾರಂಟಿ ಸಮರದಲ್ಲಿ ಮಹಾ ವಿಕಾಸ ಅಘಾಡಿಯೇ ಮುಂದೆ ಇರುವಂತೆ ಕಾಣುತ್ತದೆ.

'ಏಕ್ ಹೈ ತೋ ಸೇಫ್ ಹೈ' ಅಥವಾ 'ಬಟೇಂಗೆ ತೋ ಕಟೆಂಗೆ'

ಈಗಾಗಲೇ ನೋಡಿದ ಹಾಗೆ ಹಲವು ವಿಷಯಗಳಲ್ಲಿ ಆಳುವ ಡಬ್ಬಲ್ ಇಂಜಿನ್ ಸರಕಾರದ ವೈಫಲ್ಯಗಳಿಂದ ಜನ ಬೇಸತ್ತಿದ್ದು ಲೋಕಸಭಾ ಚುನಾವಣೆಯ ಫಲಿತಾಂಶ ಪುನರಾವರ್ತನೆಯಾಗಬಹುದು ಎಂಬ ಆತಂಕವಿದೆ. ಇದಕ್ಕೆ ಬಿಜೆಪಿ ಬಳಿ ಸಿದ್ಧೌಷಧವಿದೆ. ಅದು ಕೋಮುವಾದಿ 'ಭಯೋತ್ಪಾದಕ' ಪ್ರಚಾರ ಅಥವಾ ಅಪಪ್ರಚಾರ; ಮುಸ್ಲಿಮರ, ಇತರ ಅಲ್ಪಸಂಖ್ಯಾತರ, ವಲಸೆಗಾರರ, ಮತ್ತು ವಿರೋಧ ಪಕ್ಷಗಳ ಕುರಿತು ಭಯ ಹಬ್ಬಿಸುವುದು. ಇದರಿಂದ ಧ್ರುವೀಕರಣ ಸಾಧಿಸಿ ತನ್ನ ಕೋರ್ ಮತದಾರರನ್ನು ಉಳಿಸಿಕೊಳ್ಳುವುದರಲ್ಲಿ ಮಾತ್ರವಲ್ಲ, ಇತರ ವಿಷಯಗಳನ್ನು ಮರೆಸಿ ಇತರರನ್ನು ಸೆಳೆಯುವ ತಂತ್ರವನ್ನು ಬಿಜೆಪಿ ಪಕ್ಕಾ ಮಾಡಿದೆ. ಈ ತಂತ್ರದ ಸೂಪರ್–ಪರಿಣತ ಯುಪಿ ಮುಖ್ಯಮಂತ್ರಿ ಯೋಗಿ ಅವರು ಆರಂಭಿಸಿದ 'ಬಟೇಂಗೆ ತೋ ಕಟೆಂಗೆ' ಘೋಷಣೆ ಈ ಥರದ ಪ್ರಯತ್ನ. ಜಾತಿ ಜನಗಣತಿ ಹಿಂದೂ ಸಮಾಜವನ್ನು 'ಒಡೆಯುತ್ತದೆ' ಮತ್ತು ಒಡೆದ ಮೇಲೆ 'ಅನ್ಯರು' (ಅಂದರೆ ಮುಸ್ಲಿಮರು) ನಿಮ್ಮನ್ನು 'ಕಡಿಯುತ್ತಾರೆ' ಎಂಬ "ಭಯೋತ್ಪಾದಕ' ಭಾಷಣಗಳನ್ನು ಯೋಗಿ ಅವರು ಮಾಡಿದರು. ಆದರೆ ಹಲವು ಮುಸ್ಲಿಂ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಿರುವ ಮತ್ತು ಮುಸ್ಲಿಮರ ಮತ ಕಳೆದುಕೊಳ್ಳ ಬಯಸದ ಅಜಿತ್ ಪವಾರ್ ಇದು ಮಹಾರಾಷ್ಟ್ರದಲ್ಲಿ 'ನಡೆಯುವುದಿಲ್ಲ' ಮತ್ತು 'ಸರಿಯಾದ್ದಲ್ಲ'ವೆಂದು ಸಾರ್ವಜನಿಕವಾಗಿಯೇ ಹೇಳಿದರು. ಶಿಂಧೆ ಸಹ ಇದಕ್ಕೆ ಅಸಮ್ಮತಿ ವ್ಯಕ್ತಪಡಿಸಿದರು ಎನ್ನಲಾಗಿದೆ. ಅಲ್ಲದೆ ಈ ಕೋಮು ಪ್ರಚಾರ ಆಚಾರ ಸಂಹಿತೆಯ ಉಲ್ಲಂಘನೆಯೆಂದು ಮಹಾ ವಿಕಾಸ ಅಘಾಡಿ ಚುನಾವಣಾ ಕಮಿಶನ್‌ಗೆ ದೂರು ಕೊಟ್ಟಿತು.

ಹಾಗಾಗಿ ಅದೇ 'ಮದ್ಯ'ವನ್ನು ಇನ್ನೊಂದು 'ಬಾಟಲಿ'ಯಲ್ಲಿ ಹಾಕಲಾಯಿತು. ಅದೇ ಪ್ರಧಾನಿ ಮೋದಿ, ಗೃಹಮಂತ್ರಿ ಶಾ ಇತರ ಹಲವು ನಾಯಕರೂ ಈಗ ಬಿರುಸಿನಿಂದ ಮಾರುತ್ತಿರುವ "ಏಕ್ ಹೈ ತೋ, ಸೇಫ್ ಹೈ' ಇದರರ್ಥವೂ ಅದೇ. ಮುಸ್ಲಿಮರನ್ನು ಸಂಪ್ರೀತಗೊಳಿಸಲು ಹಿಂದೂ–ವಿರೋಧಿ ಕಾಂಗ್ರೆಸ್ ಜಾತಿವಾರಾಗಿ ಹಿಂದೂಗಳನ್ನು ಒಡೆಯುತ್ತಿದೆ. ಚುನಾವಣಾ ಕಮಿಶನ್ ದೃಷ್ಟಿಯಿಂದ ಇದು ಸೇಫ್ ಘೋಷಣೆ. ಅವರಿಗೆ ಯಾವುದೂ ಸೇಫ್ ಬಿಡಿ! ಆದರೆ ಇದು 'ದೇಶದ ಐಕ್ಯತೆಯನ್ನು ಸೇಫ್ ಮಾಡುವ' ಘೋಷಣೆ ಎಂದು ಮತದಾರರು ತಪ್ಪರ್ಥ ಮಾಡಿಕೊಳ್ಳದಂತೆ, 'ಮೋದಿ–ಶಾ ಇಬ್ಬರೂ ಮತ್ತು ಇತರರು ಪುನರುಚ್ಚರಿಸುತ್ತಾ 'ಔರಂಗಜೇಬ್ ಸಂತಾನ', 'ನುಸುಳುಕೋರರು', 'ವಕ್ಫ್ ರೈತರ ಜಮೀನು ಕಿತ್ತುಕೊಳ್ಳುತ್ತಿದೆ', 'ಲ್ಯಾಂಡ್ ಜಿಹಾದ್', 'ಮುಸ್ಲಿಮರಿಗೆ ಮೀಸಲಾತಿ ಕೊಡಲು ಒಬಿಸಿ ಮೀಸಲಾತಿ ಕಿತ್ತುಕೊಳ್ಳಲಾಗುತ್ತದೆ'... ಇತ್ಯಾದಿ ಮಾತುಗಳನ್ನೂ ಆಡುತ್ತಾರೆ.

ಆದರೆ ಈ ಘೋಷಣೆಗಳು ಬಿಜೆಪಿ ಕೂಟವನ್ನು ಹೆಚ್ಚೇನೂ ಸೇಫ್ ಮಾಡಲಾರದು. ಏಕೆಂದರೆ ಕೃಷಿ ಬಿಕ್ಕಟ್ಟು, ನಿರುದ್ಯೋಗ ಸಮಸ್ಯೆ ತೀವ್ರವಾಗುತ್ತಿದ್ದಂತೆ ಮೀಸಲಾತಿ ಬೇರೆ ರಾಜ್ಯಗಳಂತೆ ಮಹಾರಾಷ್ಟ್ರದಲ್ಲೂ ಕಗ್ಗಂಟಾಗುತ್ತಿದೆ. ಮರಾಠಾ ಸಮುದಾಯವನ್ನು ಒಬಿಸಿ ಪಟ್ಟಿಗೆ ಸೇರಿಸಬೇಕೆಂಬ ಹಕ್ಕೊತ್ತಾಯ ಕಳೆದ ಹಲವು ವರ್ಷಗಳಿಂದ ಜ್ವಲಂತ ಸಮಸ್ಯೆಯಾಗಿದೆ. ಈ ಚಳುವಳಿ ತೀವ್ರವಾಗಿರುವ ಮರಾಠಾವಾಡದ 8 ಸೀಟುಗಳಲ್ಲಿ ಬಿಜೆಪಿ ಒಂದು ಸೀಟನ್ನೂ ಗೆಲ್ಲಲಿಲ್ಲ. ಇತ್ತೀಚೆಗೆ ಮರಾಠಾ ಮೀಸಲಾತಿ ಚಳುವಳಿ (ಉಪವಾಸ ಸತ್ಯಾಗ್ರಹ, ಮುಂಬಯಿಗೆ ಜಾಥಾ ಇತ್ಯಾದಿ) ನಾಯಕತ್ವ ವಹಿಸಿರುವ ಮನೋಜ್ ಜಾರಂಗೆ ಪಾಟೀಲ್ ಮರಾಠಾ ಅಭ್ಯರ್ಥಿಗಳು ಈ ವಿಷಯದ ಮೇಲೆ ಚುನಾವಣೆಯಲ್ಲಿ ಭಾಗವಹಿಸಲು ಕರೆ ಕೊಟ್ಟಿದ್ದರು. ಆದರೆ ಕೊನೆ ಗಳಿಗೆಯಲ್ಲಿ ಎಲ್ಲರನ್ನು ಹಿಂತೆಗೆಯಲು ಹೇಳಿದರು. ಈ ನಿರ್ಣಯ ಮಹಾ ವಿಕಾಸ ಅಘಾಢಿಗೆ ಸಹಾಯಕವಾಗುತ್ತದೆ ಎಂದು ಹೇಳಲಾಗಿದೆ. ರಾಜಕೀಯವಾಗಿ ಆರ್ಥಿಕವಾಗಿಯೂ ಪ್ರಬಲವಾಗಿರುವ ಮರಾಠಾ ಸಮುದಾಯ ಜನಸಂಖ್ಯೆಯಲ್ಲಿ ಸುಮಾರು ಶೇ. 30ರಷ್ಟಿದ್ದು, ಅವರು ಒಬಿಸಿಗೆ ಸೇರಿಸಲು ಕೇಳುತ್ತಿರುವುದನ್ನು ಈಗ ಈ ಪಟ್ಟಿಯಲ್ಲಿರುವ ಸಮುದಾಯಗಳು ವಿರೋಧಿಸುತ್ತಿವೆ. ಪ್ರತ್ಯೇಕ ಮೀಸಲಾತಿ ಕೊಡಲು ಶೇ. 50 ಮಿತಿ ತಡೆಯಾಗಿದೆ. ಹಾಗಾಗಿ ಪ್ರತಿಯೊಂದು ಸಮುದಾಯದ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಜಾತಿ ಜನಗಣತಿಯಲ್ಲಿ ತಿಳಿದು, ಶೇ.50 ಮಿತಿ ತೆಗೆದು ವೈಜ್ಞಾನಿಕವಾಗಿ ಮೀಸಲಾತಿ ವ್ಯವಸ್ಥೆ ರೂಪಿಸುವುದು ಸರಿಯಾದ ಕ್ರಮ. ಬಿಜೆಪಿ ಇಷ್ಟು ಕಟುವಾಗಿ ಇದನ್ನು ವಿರೋಧಿಸುವುದು ಅದಕ್ಕೆ ಸಹಾಯಕವಾಗಲಿಕ್ಕಿಲ್ಲ.

ಬಿಜೆಪಿ ಒಂದು ಕಡೆ ಜಾತಿ ಜನಗಣತಿಯನ್ನು ವಿರೋಧಿಸುತ್ತಾ, ಇನ್ನೊಂದು ಕಡೆ ಒಂದು ಜಾತಿಯನ್ನು ಇನ್ನೊಂದು ಜಾತಿಯ ವಿರುದ್ಧ ಎತ್ತಿ ಕಟ್ಟುವ ಆಟ ಸಹ ಆಡುತ್ತಿದೆ. ಧಂಗಾರ್ ಎಂಬ ಸಾಕಷ್ಟು ಸಂಖ್ಯೆಯಲ್ಲಿರುವ ಅಲೆಮಾರಿ ಸಮುದಾಯವನ್ನು ಪರಿಶಿಷ್ಟ ಬುಡಕಟ್ಟು ಸ್ಥಾನಕ್ಕೆ ಒತ್ತಾಯ ಮಾಡಲು ಪ್ರಚೋದಿಸುತ್ತಿದೆ. ಇದನ್ನು ಈಗ ಪರಿಶಿಷ್ಠ ಬುಡಕಟ್ಟು ಪಟ್ಟಿಯಲ್ಲಿರುವ ಸಮುದಾಯಗಳು ವಿರೋಧಿಸುತ್ತಿವೆ.

ಬಿಜೆಪಿ ನಾಯಕತ್ವದ ಎನ್‌ಡಿಎ ಭಾರತದ ಸಂವಿಧಾನದತ್ತ ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯ, ಸಮಾನತೆ, ಒಕ್ಕೂಟವಾದಗಳನ್ನು ಒಳಗಿಂದಲೇ ಕೊರೆದು ಟೊಳ್ಳಾಗಿಸಿ ಹಿಂದುತ್ವ ಫ್ಯಾಸಿಸ್ಟ್ ಮಾದರಿಯ ಪ್ರಭುತ್ವ ಸ್ಥಾಪಿಸುವತ್ತ ಹೊರಟಿದೆ. ಇದೂ ಒಂದು ಚುನಾವಣಾ ವಿಷಯ. ಇದನ್ನು ತಡೆಯಬೇಕಾದರೆ ಮಹಾರಾಷ್ಟ್ರದಲ್ಲಿ ಎನ್‌ಡಿಎ ಯನ್ನು ಸೋಲಿಸುವುದು ಅಗತ್ಯವಿದೆ ಎಂದು ನಂಬಿರುವ ಜನವಿಭಾಗವೂ ಇದೆ.

ಮಹಾ ವಿಕಾಸ ಅಘಾಡಿ ಮತ್ತೆ ಜಯಭೇರಿ ಬಾರಿಸುವುದೇ?

ಈಗಾಗಲೇ ಹೇಳಿದ ಹಾಗೆ ಲೋಕಸಭಾ ಚುನಾವಣೆಯ ಫಲಿತಾಂಶಕ್ಕೆ ಕಾರಣವಾದ ಹೆಚ್ಚಿನ ಅಂಶಗಳು ಈಗಲೂ ಪ್ರಸ್ತುತವಾಗಿವೆ. ಪ್ರಾದೇಶಿಕ ಅಸ್ಮಿತೆ, ಆರ್ಥಿಕ ಸಂಕಷ್ಟಗಳು ಇನ್ನಷ್ಟು ತೀವ್ರವಾಗಿದೆ. ಮಹಾಯುತಿಯ 'ಲಾಡಲಿ ಬೆಹನಾ" ಇತ್ಯಾದಿ ಗ್ಯಾರಂಟಿ ಯೋಜನೆಗಳಿಗೆ ಮಹಾವಿಕಾಸ ಅಘಾಡಿ 'ಪಂಚ ಗ್ಯಾರಂಟಿ'ಗಳ ಕೌಂಟರ್ ಕೊಟ್ಟಿದೆ. ಸಂವಿಧಾನದ ಸಂರಕ್ಷಣೆ, ಜಾತಿ ಜನಗಣತಿಯನ್ನು ಬೆಂಬಲಿಸುವ ಒಂದು ಜನವಿಭಾಗದ ಆಯ್ಕೆ ಸ್ಪಷ್ಟವಾಗಿದೆ. ಇನ್ನು ಉಳಿಯುವುದು ಕೋಮುವಾದಿ ಧ್ರುವೀಕರಣದ ತಂತ್ರ. ಇಲ್ಲೂ ಬಿಜೆಪಿಗೆ ತೀವ್ರ ಸವಾಲುಗಳಿವೆ. ಎಲ್ಲರಿಗೂ ತಿಳಿದಿರುವ ಹಾಗೆ ಕೋಮುವಾದಿ ಧ್ರುವೀಕರಣದಲ್ಲಿ ವಿರೋಧ ಪಕ್ಷಗಳನ್ನು ಜಾತಿವಾದಿ ಹಿಂದೂ–ವಿರೋಧಿ ಮುಸ್ಲಿಂ–ಸಂಪ್ರೀತಗೊಳಿಸುವ ಶಕ್ತಿಗಳು ಎಂದು ಜರೆದು ನಂಬಿಸುವುದು ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಶಿವಸೇನೆ ಪ್ರಮುಖ ಪಾತ್ರ ವಹಿಸುತ್ತಿರುವ ಮಹಾ ವಿಕಾಸ ಅಘಾಡಿ ಗೆ ಈ ಲೇಬಲ್ಲು ಅಂಟಿಸುವುದು ಸುಲಭವಲ್ಲ. ಏಕೆಂದರೆ ದಶಕಗಳ ಕಾಲ ಬಿಜೆಪಿಯ ಮೈತ್ರಿ ಹೊಂದಿದ್ದ ಶಿವಸೇನಾ ಹಿಂದುತ್ವ ಪಕ್ಷವೆಂದೇ ಗುರುತಿಸಲ್ಪಡುವಂಥದ್ದು. ಬಾಬ್ರಿ ಮಸೀದಿ ಧ್ವಂಸದಲ್ಲಿ ಕರಸೇವೆಯಲ್ಲಿ ಶಿವಸೈನಿಕರೂ ಭಾಗವಹಿಸಿದ್ದರು. ಅದೇ ಸಮಯದಲ್ಲಿ, ಶಿವಸೇನಾ ಹಿಂದುತ್ವ ಸಿದ್ಧಾಂತಕ್ಕೆ ಬದ್ಧವಾಗಿದ್ದರೂ ಅದರ ನೆಲೆ ಕೇವಲ ಧಾರ್ಮಿಕ ನೆಲೆಯದ್ದಲ್ಲ. ಮರಾಠಿ ಸಾಮಾನ್ಯ ಮನುಷ್ಯನ ಕಲ್ಯಾಣ, ಪ್ರಾದೇಶಿಕ ಅಸ್ಮಿತೆ, ಸಾಮಾಜಿಕ ಸೇವೆಯ ಜಾಲದ ಮೂಲಕ ಕಟ್ಟಿದ ಸಾಮಾಜಿಕ ನೆಲೆ ಹೆಚ್ಚು ಮುಖ್ಯವಾದ್ದು. ಅದು ಹಿಂದುತ್ವಕ್ಕೆ ಬಂದಿದ್ದು ಹೆಚ್ಚಾಗಿ ಕಾಂಗ್ರೆಸ್–ವಿರೋಧಿ ರಂಗದಲ್ಲಿ ಭಾಗವಹಿಸುತ್ತಾ ಬಿಜೆಪಿಯ ಸನಿಹಕ್ಕೆ ಬಂದಾಗ.

ಂ ು ್ ು ಾ ವ ್ ು ದ ್ ೀ ಪಕ್ಷಗಳ ಮೈತ್ರಿಕೂಟ ಪರಿಣಾವುಕಾರಿಂುಾಗಲು ವೈವಿಧ್ಯ ನೆಲೆಯ ಜನವಿಭಾಗಗಳು ಇರುವುದು ಒಳ್ಳೆಯದು. ಆದರೆ ಒಂದು ಪಕ್ಷದ ಅಭ್ಯರ್ಥಿ ಸ್ಪರ್ಧಿಸಿದಾಗ ಉಳಿದ ಪಕ್ಷಗಳ ಬೆಂಬಲಿಗ ಕಾರ್ಯಕರ್ತರು, ಜನವಿಭಾಗಗಳ ಮತ ಪರಸ್ಪರ ಪೂರ್ಣವಾಗಿ ವರ್ಗಾವಣೆಯಾಗ ಬೇಕಾಗುತ್ತದೆ. ಇದಕ್ಕೆ ಕೂಟದ ಪಕ್ಷಗಳು ಸೈದ್ಧಾಂತಿಕ ರಾಜಕೀಯ ಕಣ್ಣೋಟಗಳಾದರೂ ಪರಸ್ಪರ ವಿರೋಧಿಯಾಗಿರಬಾರದು. ಈ ದೃಷ್ಟಿಯಿಂದ ಹಿಂದುತ್ವ ಸಿದ್ಧಾಂತದ ಬಿಜೆಪಿ–ಶಿವಸೇನಾ ಕೂಟ ಮತ್ತು 'ಸೆಕ್ಯುಲರ್' ಪಕ್ಷಗಳಾದ ಕಾಂಗ್ರೆಸ್–ಎನ್‌ಸಿಪಿ ಕೂಟ ಪರಿಣಾಮಕಾರಿ ಕೂಟಗಳು. ಹಾಗಾಗಿಯೇ ಕೆಲವು ದಶಕಗಳಿಂದ ಎರಡೂ ಕೂಟಗಳು ಇದ್ದವು. 2019ರ ಚುನಾವಣೆಯ ನಂತರ ಮಹಾ ವಿಕಾಸ ಅಘಾಡಿ ಆಗಲಿ, 2022ರ ನಂತರ ರಚನೆಯಾದ ಮಹಾಯುತಿ ಕಿಚಡಿ ಕೂಟಗಳೇ ಎನ್ನಬೇಕು. ಸಾಮಾಜಿಕ ನ್ಯಾಯ ಸಮಾನ ಸಿದ್ಧಾಂತ ಹೊಂದಿದ್ದರೂ ಎಸ್‌ಪಿ–ಬಿಎಸ್‌ಪಿ ಯ ಜನವಿಭಾಗಗಳ ನಡುವಿನ ಸಾಮಾಜಿಕ ಭಿನ್ನತೆಗಳಿಂದಲೇ ಆ ಕೂಟ ಪರಿಣಾಮಕಾರಿಯಾಗದ್ದನ್ನು ನೋಡಿದ್ದೇವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದ ಈ ಎರಡು ಕೂಟಗಳು ಪರಿಣಾಮಕಾರಿ ಆಗಲಿಕ್ಕಿಲ್ಲವೆಂದು ಭಾವಿಸಲಾಗಿತ್ತು. ಆದರೆ ಹಿಂದಿನ ಮತ್ತು ನಂತರದ ಕೂಟದೊಳಗೆ ಮತ ಗಳಿಕೆ ನೋಡಿದರೆ ಸ್ವಲ್ಪ ಮಟ್ಟಿಗೆ ಅಜಿತ್ ಪವಾರ್ ಬಣಕ್ಕೆ ಈ ಸಮಸ್ಯೆ ಕಾಡಿದೆ ಎನ್ನಬಹುದು. ಆದರೆ ಮಹಾ ವಿಕಾಸ ಅಘಾಢಿಯನ್ನು ಅದು ಕಾಡಿಲ್ಲ. ಪ್ರಾದೇಶಿಕ ಅಸ್ಮಿತೆ, ಆರ್ಥಿಕ ಸಂಕಟಗಳು, ಸಂವಿಧಾನದ ಸಂರಕ್ಷಣೆ ಮತ್ತು ಪ್ರಸ್ತುತ ಸರಕಾರಗಳ ವೈಫಲ್ಯದ ವಿರುದ್ಧ ಪ್ರಧಾನ ವಿಷಯವಾದ್ದರಿಂದ ಇರಬಹುದು. ಹಾಗಾಗಿ ಈ ಬಾರಿಯೂ ಕೋಮು ಧ್ರುವೀಕರಣದ ಪ್ರಯತ್ನ ಅಜಿತ್ ಪವಾರ್ ಬಣಕ್ಕೆ ಏಟು ಕೊಡಬಹುದು. ಲೋಕಸಬಾ ಚುನಾವಣೆಯಲ್ಲಿ ಶಿಂದೆ ಮುಖ್ಯಮಂತ್ರಿಯಾಗಿದ್ದರಿಂದ ಅವರ ಶಿವಸೇನಾ ಬಣ ತನ್ನ ನೆಲೆಯನ್ನು ಉಳಿಸಿಕೊಂಡಿರಬಹುದು. ಇದು ವಿಧಾನಸಭಾ ಚುನಾವಣೆಯಾಗಿರುವುದರಿಂದ, ಶಿಂಧೆಯನ್ನು ಮಹಾಯುತಿ ಸಂಭಾವ್ಯ ಮುಖ್ಯಮಂತ್ರಿಯಾಗಿ ಘೋಷಿಸದ್ದರಿಂದ ಮತ್ತು ಮಹಾ ವಿಕಾಸ ಅಘಾಡಿ ಸರಕಾರ ರಚನೆಯಾಗುವ ಸಾಧ್ಯತೆ ಹೆಚ್ಚಿರುವುದರಿಂದ ಶಿಂಧೆ ಬಣಕ್ಕೆ ಹೆಚ್ಚಿನ ಕುತ್ತು ಬರಬಹುದು.

ಮಹಾರಾಷ್ಟ್ರದಲ್ಲಿ ಎರಡು ಕೂಟಗಳಲ್ಲದೆ ಸೀಮಿತವಾದರೂ ಗಟ್ಟಿ ನೆಲೆ ಸಿದ್ಧಾಂತ ಹೊಂದಿರುವ ಹಲವು ಸಣ್ಣ ಸ್ವತಂತ್ರ ಪಕ್ಷಗಳು ಇವೆ, ಇವು ಕೆಲವೊಮ್ಮೆ ಅವಕಾಶವಾದಿಯಾಗಿ ಇತರ ಪಕ್ಷಗಳ ಪ್ರಾಕ್ಸಿಯಾಗುವುದು ಇದೆ. ಕೋಷ್ಟಕ–1, ಕೋಷ್ಟಕ–2 ಗಮನಿಸಿದರೆ ಈ ಪಕ್ಷಗಳು ಗಮನಾರ್ಹ (ಶೇ.10–15) ಮತ ಗಳಿಸುವುದು ಕಂಡು ಬಂದಿದೆ. ಆದರೆ ಲೋಕಸಬಾ ಚುನಾವಣೆಯಲ್ಲಿ ತಮ್ಮ ಕೆಲವು ನೆಲೆಗಳಾಚೆಗೆ ಜನ ಅವನ್ನು ನಿರ್ಲಕ್ಷಿಸುವುದು ಕಂಡು ಬಂದಿದೆ. 2019ರ ಚುನಾವಣೆಗಳಲ್ಲಿ ವ್ಯಾಪಕ ಸ್ಪರ್ಧೆಯಿಂದ ಯುಪಿಎ ಗೆ ನಷ್ಟ ಮಾಡಿ ಎನ್‌ಡಿಎ ಗೆಲುವಿಗೆ ಕಾರಣವಾದ ಪ್ರಕಾಶ ಅಂಬೇಡ್ಕರ್ ಅವರ ಪಕ್ಷ ಮತ್ತು ಎಐಎಂಐಎಂ ಗಳನ್ನು ಇಲ್ಲಿ ಉದಾಹರಿಸಬಹುದು. ವ್ಯಾಪಕವಾಗಿ ಸ್ಪರ್ಧಿಸಿರುವ ಕೆಲವು ಪಕ್ಷಗಳು ಈ ರೀತಿಯಾಗಿ ಪ್ರಾಕ್ಸಿಯಾಗಿ ಫಲಿತಾಂಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದ್ದರೂ, ಅದು ಕಡಿಮೆಯೇ ಎಂದು ಹೇಳಬಹುದು. ಆದರೆ ಪ್ರಭಾವಶಾಲಿ, ಶ್ರೀಮಂತ ಪಕ್ಷೇತರ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಚುನಾಯಿತರಾಗುವ ಸಾಧ್ಯತೆಯಿದ್ದು, ಎರಡು ಕೂಟಗಳ ಅಂತರ ಸಣ್ಣದಿದ್ದರೆ ಅವರು ಸರಕಾರ ರಚನೆಯಲ್ಲಿ ದೊಡ್ಡ ಪಾತ್ರ ವಹಿಸಬಹುದು.

ಮೇಲೆ ಹೇಳಿದ ಎಲ್ಲ ಅಂಶಗಳನ್ನು ಪರಿಶೀಲಿಸಿದರೆ ಮಹಾರಾಷ್ಟ್ರದ ಚುನಾವಣೆಗಳಲ್ಲಿ ಮಹಾ ವಿಕಾಸ ಅಘಾಢಿಗೆ ಗೆಲುವಿನ ಹೆಚ್ಚಿನ ಸಾಧ್ಯತೆಯಿದೆ ಎನ್ನಬಹುದು. ಆದರೆ ಭಾರೀ ಬಹುಮತ ಪಡೆಯದ ಹೊರತು, ಅದಕ್ಕೆ ಸರಕಾರ ರಚಿಸಲು ಸಾಧ್ಯವಾಗುತ್ತಾ ಎಂಬುದು ಬೇರೆ ಪ್ರಶ್ನೆ. ❍

ಮಹಾ ವಿಕಾಸ್ ಅಘಾಡಿಯ (ಎಂವಿಎ) ಭಾಗವಾದ ಸಿಪಿಐ(ಎಂ) ಮೂರು ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ದಹಾನು (ಎಸ್‌ಟಿ) ಕ್ಷೇತ್ರದಲ್ಲಿ ಸಿಪಿಐ(ಎಂ)ನ ಹಾಲಿ ಶಾಸಕರಾದ ವಿನೋದ್ ನಿಕೋಲ್ ಅವರು ಸ್ಪರ್ಧಿಸಿದ್ದರೆ, ನಾಶಿಕ್ ಜಿಲ್ಲೆಯ ಕಲ್ವಾನ್ (ಎಸ್‌ಟಿ) ಕ್ಷೇತ್ರದಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ, ಮಾಜಿ ಶಾಸಕ ಜೆಪಿ ಗವಿತ್ ಅವರು ಸ್ಪರ್ಧಿಸಿದ್ದಾರೆ. ಸೊಲ್ಲಾಪುರ ಸಿಟಿ ಸೆಂಟ್ರಲ್ ಕ್ಷೇತ್ರದಲ್ಲಿ ಮಾಜಿ ಶಾಸಕ ನರಸಯ್ಯ ಆದಾಂ ಅವರು ಸ್ಪರ್ಧೆ ಮಾಡಿದ್ದಾರೆ.

ಸಿಪಿಐ(ಎಂ) ಪಕ್ಷವು ದಹಾನು (ಪಾಲ್ಘರ್) ಮತ್ತು ಕಲ್ವನ್ (ನಾಸಿಕ್) ಕ್ಷೇತ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ವಿರುದ್ಧ ಸ್ಪರ್ಧಿಸುತ್ತಿದ್ದರೆ, ಮೂರನೇ ಸ್ಥಾನವಾದ ಸೋಲಾಪುರ ಸಿಟಿ ಸೆಂಟ್ರಲ್‌ನಲ್ಲಿ ಎಂವಿಎ ಬ್ಲಾಕ್‌ನ ಹೊರಗೆ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಸಿಪಿಐ(ಎಂ) ಹೋರಾಟ ನಡೆಸುತ್ತಿದೆ.



ಬುಲ್‌ಡೋಜರ್ 'ಬಾಬಾ', 'ಮಾಮಾ'ಗಳ ಹಾರಾಟಕ್ಕೆ ಸರ್ವೋಚ್ಚ ನ್ಯಾಯಾಲಯದ ಲಗಾಮು

'ಬುಲ್‌ಡೋಜರ್ ನ್ಯಾಯ' ಎಂದರೆ ಅರಾಜಕತೆ, ಅದರ ಹೆಸರಲ್ಲಿ ಸರಕಾರ ಯಾವುದೇ ಕಟ್ಟಡವನ್ನು ಧ್ವಂಸ ಮಾಡುವಂತಿಲ್ಲ, ಅದು ಕಾನೂನುಹೀನತೆಯಾಗುತ್ತದೆ. ಸರಕಾರಗಳು ನ್ಯಾಯಾಧೀಶರಾಗಿ ರೂಪಾಂತರಗೊಂಡು, ವಿಚಾರಣಾಧೀನ ಆಪಾದಿತ ವ್ಯಕ್ತಿಗಳ ಮನೆಗಳಿಗೆ ಬುಲ್‌ಡೋಜರ್‌ಗಳನ್ನು ನುಗ್ಗಿಸುವುದು ಬೆಳಗು ಹರಿಯುವಷ್ಟರಲ್ಲಿ ಒಂದು ಕುಟುಂಬ ಆಶ್ರಯಹೀನವಾಗುತ್ತದೆ ಎಂಬ ಬಗ್ಗೆ ಯೋಚನೆಯನ್ನೂ ಮಾಡದ ಅಧಿಕಾರಬಲದ ನಗ್ನ ಪ್ರದರ್ಶನವಾಗುತ್ತದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಕಟುವಾಗಿ ಹೇಳಿದೆ.

ಸರಕಾರಗಳ, ಮುಖ್ಯವಾಗಿ ಬಿಜೆಪಿ ನೇತೃತ್ವದ ಸರಕಾರಗಳ 'ಬುಲ್‌ಡೋಜರ್ ಸಂಸ್ಕೃತಿ'ಯಿಂದ ಪರಿಹಾರ ಒದಗಿಸಬೇಕು ಎಂದು ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ದಿಲ್ಲಿಯ ನಾಗರಿಕರು ಸಲ್ಲಿಸಿದ ಅರ್ಜಿಗಳ ವಿಚಾರಣೆ ಮಾಡಿದ ದೇಶದ ಸರ್ವೋಚ್ಚ ನ್ಯಾಯಾಲಯ ನವಂಬರ್ 13ರಂದು ತೀರ್ಪು ನೀಡಿದೆ.

"ಬುಲ್‌ಡೋಜರ್ ಕ್ರಮಗಳು ಕಾನೂನುಬಾಹಿರ ಮತ್ತು ದುರುದ್ದೇಶಪೂರ್ಣವಾದದ್ದು ಎಂದಿರುವ ಸುಪ್ರೀಂ ಕೋರ್ಟಿನ ತೀರ್ಪನ್ನು ಸ್ವಾಗತಿಸುತ್ತೇನೆ. ಇದು ಈ ಹಿಂದೆಯೇ ಬರಬೇಕಾಗಿತ್ತು, ಬಿಜೆಪಿ ನೇತೃತ್ವದ ರಾಜ್ಯಗಳಲ್ಲಿ ಹಲವಾರು ಮನೆಗಳನ್ನು ಕೆಡವಿ ಹಾಕದಂತೆ ಉಳಿಸಬಹುದಾಗಿತ್ತು" ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

ಈಗಲಾದರೂ ಈ ತೀರ್ಪು ಬಂದಿದೆ. ಇದು ಬಡವರನ್ನು, ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯಗಳ ಬಡವರನ್ನು ಗುರಿಯಿಟ್ಟು ಬಿಜೆಪಿ ನಡೆಸಿರುವ ಧ್ವಂಸಕಾರ್ಯದಿಂದ ನರಳುತ್ತಿರುವವರಿಗೆ ಮತ್ತು ಭವಿಷ್ಯದಲ್ಲಿಯೂ ಇಂತಹ ಕೃತ್ಯಗಳಿಂದ ನರಳಬಹುದಾದವರಿಗೆ ನ್ಯಾಯ ಒದಗಿಸಿದೆ ಎಂದು ಅವರು ಹೇಳಿದ್ದಾರೆ.

ಎರಡೂವರೆ ವರ್ಷಗಳ ಹಿಂದೆ, ಎಪ್ರಿಲ್ 20, 2022ರಂದು ದಿಲ್ಲಿಯ ಜಹಂಗಿರ್‌ಪುರದಲ್ಲಿ ಅಲ್ಪಸಂಖ್ಯಾತರ ಮನೆ ಮತ್ತು ಜೀವನಾಧಾರಗಳ ಧ್ವಂಸ ಕಾರ್ಯದಲ್ಲಿ ತೊಡಗಿದ್ದ ಬುಲ್‌ಡೋಜರನ್ನು ಅಕ್ಷರಶಃ ಅಡ್ಡಗಟ್ಟಿ ನಿಂತು ನಿಲ್ಲಿಸಿದ್ದ ಬೃಂದಾಕಾರಟ್ ಇದನ್ನು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಒಯ್ದ ಅರ್ಜಿದಾರರಲ್ಲಿ ಒಬ್ಬರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಎಪ್ರಿಲ್ 19, 2022ರಂದು ದಿಲ್ಲಿ ಬಿಜೆಪಿ ಅಧ್ಯಕ್ಷ ಆದೇಶ್



ಗುಪ್ತ ಉತ್ತರ ದಿಲ್ಲಿ ಮುನಿಸಿಪಲ್ ಕಾರ್ಪೊರೇಷನ್(ಎನ್‌ಡಿಎಂಸಿ) ಮೇಯರ್‌ಗೆ "ಸಮಾಜಘಾತುಕರು ಮತ್ತು ಗಲಭೆಕೋರರ ಅತಿಕ್ರಮಣಗಳನ್ನು ಬುಲ್‌ಡೋಝು ಮಾಡಬೇಕು" ಎಂದು ಬರೆದ ಪತ್ರಕ್ಕೆ ಸ್ಪಂದಿಸಿ ಮರುದಿನವೇ ದಿಲ್ಲಿಯ ಜಹಂಗೀರ್‌ಪುರದಲ್ಲಿ ಎನ್‌ಡಿಎಂಸಿ, ಸುಪ್ರೀಂ ಕೋರ್ಟ್ ತಡೆಯಾಜ್ಞೆ ಇದ್ದರೂ 'ಬುಲ್‌ಡೋಜರ್ ನ್ಯಾಯ'ಕ್ಕೆ ಇಳಿಯಿತು. 11 ಗಂಟೆಯ ವೇಳೆಗೆ ಬೃಂದಾ ಕಾರಟ್ ಧ್ವಂಸಕಾರ್ಯದಲ್ಲಿ ತೊಡಗಿದ್ದ ಬುಲ್‌ಡೋಜರ್ ಮುಂದೆ ನಿಂತು ತಡೆಯಾಜ್ಞೆಯನ್ನು ಮುಖದ ಮುಂದೆ ಹಿಡಿದಾಗಲೇ ಅದು ನಿಂತದ್ದು.

ಈ ತಕ್ಷಣದ 'ಬುಲ್‌ಡೋಜರ್ ನ್ಯಾಯ'ದ ಪ್ರಕ್ರಿಯೆ ಆರಂಭವಾದದ್ದು ಉತ್ತರಪ್ರದೇಶದಲ್ಲಿ. ಅಲ್ಲಿಯ ಮುಖ್ಯಮಂತ್ರಿಗೆ ಇದಕ್ಕಾಗಿ ಹಿಂದುತ್ವ ಮಂದಿಯಿಂದ 'ಬುಲ್‌ಡೋಜರ್ ಬಾಬಾ' ಎಂಬ ಬಿರುದು ಸಿಕ್ಕಿದೆ. ಇದನ್ನು ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಮುಂದುವರೆಸಿ 'ಬುಲ್‌ಡೋಜರ್ ಮಾಮಾ' ಎಂದೆನಿಸಿಕೊಂಡಿದ್ದಾರೆ. ಬಿಜೆಪಿಯ ಚುನಾವಣಾ ರ‍್ಯಾಲಿಗಳಲ್ಲಿ ಬುಲ್‌ಡೋಜರ್‌ಗಳನ್ನು ಹೆಮ್ಮೆಯಿಂದ ಪ್ರದರ್ಶಿಸಲಾಗಿದೆ.

ಒಂದು ಧಾರ್ಮಿಕ ಮೆರವಣಿಗೆ ನಡೆಯುತ್ತದೆ, ಅದರ ಬೆನ್ನ ಹಿಂದೆಯೇ ಕೋಮು ಹಿಂಸಾಚಾರ ನಡೆಯುತ್ತದೆ, ಅದನ್ನು ಅನುಸರಿಸಿಯೇ ಬುಲ್‌ಡೋಜರ್ ಬರುತ್ತದೆ, ಇದು ಸಾಮಾನ್ಯವಾಗಿ ಗಮನಿಸಿರುವ 'ಕ್ರೊನೋಲಜಿ' ಎಂದೊಬ್ಬ ವಿಶ್ಲೇಷಕರು ಹೇಳುತ್ತಾರೆ.

ದಿಲ್ಲಿಯಲ್ಲಿ ಈ ಬುಲ್‌ಡೋಜರ್ ಕ್ರಮಗಳ ವಿರುದ್ಧ ಬಲವಾದ ಪ್ರತಿರೋಧ ಒಡ್ಡಿರುವ ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿಯು ನ್ಯಾಯ ಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ನ್ಯಾಯಪೀಠದ ಈ ತೀರ್ಪು 'ಬುಲ್‌ಡೋಜರ್ ರಾಜಕೀಯ'ಕ್ಕೆ ನೀಡಿರುವ ಕಪಾಳಮೋಕ್ಷ ಎಂದು ಹೇಳಿದೆ. ನಮ್ಮ ಸಂವಿಧಾನದಲ್ಲಿ ಇಂಥಹ ಕೃತ್ಯಗಳಿಗೆ ಜಾಗವಿಲ್ಲ, ಆಡಳಿತದ ಇಂತಹ ಅನುಚಿತ ಮತ್ತು ಸ್ವೇಚ್ಛಾಚಾರದ ಕ್ರಮಗಳ ವಿರುದ್ಧ ಕಾನೂನಿನ ಪ್ರಕಾರ ಕಠಿಣವಾಗಿ ವರ್ತಿಸಲಾಗುವುದು ಎಂದು ಎಚ್ಚರಿಸಿರುವುದನ್ನು ಅದು ಸ್ವಾಗತಿಸಿದೆ.

ಉತ್ತರಪ್ರದೇಶದ ಮುಖ್ಯಮಂತ್ರಿ, ದಿಲ್ಲಿಯ ಉಪರಾಜ್ಯಪಾಲ, ಹರ್ಯಾಣ ಮತ್ತು ಉತ್ತರಾಖಂಡದಲ್ಲಿನ ಅಧಿಕಾರಸ್ಥರು ಸೇರಿದಂತೆ ಈ ಕಾನೂನುಹೀನತೆಯಲ್ಲಿ ತೊಡಗಿರುವವರನ್ನು, ಅವರ ಬಂಟರಾಗಿ ಕೆಲಸ ಮಾಡುತ್ತಿರುವ ಅಧಿಕಾರಶಾಹಿಗಳನ್ನು ಕಟಕಟೆಯಲ್ಲಿ ನಿಲ್ಲಿಸಬೇಕು ಎಂದಿರುವ ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿಯು, ಇಂತಹ ಸಂವಿಧಾನ ಬಾಹಿರ ಮತ್ತು ಕಾನೂನುಬಾಹಿರ ಕ್ರಮಗಳು ಉಂಟು ಮಾಡುತ್ತಿರುವ ನಷ್ಟವನ್ನು ರಾಜಕೀಯ ಮುಖಂಡರಿಂದ ಹಿಡಿದು ಅಧಿಕಾರಶಾಹಿಗಳವರೆಗೂ ಎಲ್ಲರೂ ಭರಿಸುವಂತೆ ಮಾಡಬೇಕು ಎಂದು ಆಗ್ರಹಿಸಿದೆ.

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಹರಡಿರುವ 'ಬುಲ್‌ಡೋಝರ್ ನ್ಯಾಯ'ದ ಅಡಿಯಲ್ಲಿ ಒಬ್ಬ ವ್ಯಕ್ತಿ ಒಂದು ಕ್ರಿಮಿನಲ್ ಕೇಸಿನಲ್ಲಿ ಆರೋಪಿಯಾಗಿದ್ದ ಅಥವ ಶಿಕ್ಷೆಗೆ ಒಳಪಟ್ಟ ಮಾತ್ರಕ್ಕೆ ಆತನ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಮನೆಯನ್ನು ಸೂಕ್ತ ಕಾನೂನು ವಿಧಾನಗಳನ್ನು ಅನುಸರಿಸದೆ ಧ್ವಂಸ ಮಾಡುವುದು ಸಂಪೂರ್ಣವಾಗಿ ಅಸಾಂವಿಧಾನಿಕ ಎಂದು ಈ ತೀರ್ಪು ಹೇಳಿದೆ. ಹೀಗೆ ಮಾಡುವುದು ಆ ವ್ಯಕ್ತಿಯ ಕುಟುಂಬಕ್ಕೆ ನೀಡುವ 'ಸಾಮೂಹಿಕ ಶಿಕ್ಷೆ'ಯಾಗುತ್ತದೆ. ಕಾರ್ಯಾಂಗ, ಆರೋಪಗಳ ಆಧಾರದ ಮೇಲಷ್ಟೇ ಒಬ್ಬ ವ್ಯಕ್ತಿಯನ್ನು ತಪ್ಪಿತಸ್ಥ ಎಂದು ಸಾರಿ ಆತನ ಆಸ್ತಿಯನ್ನು ಯಾವುದೇ ಕಾನೂನು ವಿಧಾನಗಳನ್ನು ಅನುಸರಿಸದೆ ಧ್ವಂಸ ಮಾಡಲು ಸಾಧ್ಯವಿಲ್ಲ, ಅದು "ಕಾನೂನಿನ ಆಳ್ವಿಕೆಯ ಮೂಲ ತತ್ವಕ್ಕೆ ಪ್ರಹಾರ ಮಾಡುತ್ತದೆ, ಇದಕ್ಕೆ ಅವಕಾಶವಿಲ್ಲ" ಎಂದು ಅದು ಹೇಳಿದೆ.


ಕಾರ್ಯಾಂಗದ(ಅಂದರೆ ಸರಕಾರದ) ಇಂತಹ ಅತ್ಯಾಚರಣೆಗಳಿಗೆ ಕಾನೂನಿನ ಅಡಿಯಲ್ಲಿ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ನಮ್ಮ ಸಾಂವಿಧಾನಿಕ ವಿಧಿ–ವಿಧಾನ ಮತ್ತು ಮೌಲ್ಯಗಳು ಇದಕ್ಕೆ ಅವಕಾಶ ಕೊಡುವುದಿಲ್ಲ. ಇಂತಹ ಅಧಿಕಾರದ ದುರುಪಯೋಗವನ್ನು ಮತ್ತು ದುಸ್ಸಾಹಸಗಳನ್ನು ನ್ಯಾಯಾಲಯ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಇಲ್ಲಿ ತಲೆಯ ಮೇಲೊಂದು ಸೂರು ಹೊಂದಿರುವ ಹಕ್ಕು ಮತ್ತು ಜೀವನದ ಹಕ್ಕಿನ ಪ್ರಶ್ನೆಗಳೂ ಇವೆ. ಏಕೆಂದರೆ ಇಂತಹ ಧ್ವಂಸಕಾರ್ಯಗಳು ಇಡೀ ಕುಟುಂಬದ ಮೇಲೆ ದುಷ್ಪರಿಣಾಮ ಬೀರುತ್ತವೆ ಎಂದೂ ತೀರ್ಪು ಹೇಳಿದೆ.

ಮನಬಂದಂತೆ ಬುಲ್‌ಡೋಝರ್‌ಗಳನ್ನು ಹರಿಬಿಡುವ ಇಂತಹ ಕೃತ್ಯಗಳನ್ನು ತಡೆಯಲು ಸಂವಿಧಾನದ ಅಡಿಯಲ್ಲಿ ಕಲಮು 142 ನೀಡಿರುವ ಅಧಿಕಾರವನ್ನು ಬಳಸಿ ನ್ಯಾಯಪೀಠ ಸಮಗ್ರ ಮಾರ್ಗದರ್ಶಕ ನಿಯಮಗಳನ್ನು ತೀರ್ಪಿನಲ್ಲಿ ಪಟ್ಟಿ ಮಾಡಿದೆ.

ನ್ಯಾಯಪೀಠ ಆಸ್ತಿಗಳ ಧ್ವಂಸವನ್ನು ಕಾನೂನುಬಾಹಿರ ಎಂದು ಸಾರಿರುವುದು ಅತ್ಯಂತ ತೃಪ್ತಿದಾಯಕ ಸಂಗತಿ, ಆದರೆ ಇಂತಹ ಧ್ವಂಸಕೃತ್ಯಗಳಿಗೆ ಬಲಿಯಾದವರಿಗೆ ನಷ್ಟಭರ್ತಿಯ ಬಗ್ಗೆ ಹೇಳಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟಿನ ಮುಂದೆ ಹೋದ ಇಬ್ಬರು ಅರ್ಜಿದಾರರು ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆಯಲ್ಲಿ, 'ಬುಲ್‌ಡೋಝರ್ ಬಾಬಾ'ರ ಸರಕಾರದ ವಕ್ತಾರರೊಬ್ಬರು ಕೂಡ ಈ ತೀರ್ಪನ್ನು 'ಸ್ವಾಗತಿಸಿ'ದ್ದಾರೆ! ಇದು ತಮ್ಮ ಸರಕಾರದ ವಿರುದ್ಧ ನೀಡಿರುವ ತೀರ್ಪಲ್ಲ ಎಂದು ಹೇಳಲೂ ಅವರು ಮರೆತಿಲ್ಲ!



ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಅಧಿಕಾರಸ್ಥ 'ಮಹಾಯುತಿ' ಅಭ್ಯರ್ಥಿಗಳ ಸಂಪತ್ತು 17 ಪಟ್ಟು ವೇಗವಾಗಿ ಬೆಳೆದಿದೆ!

ಒಂದು ಅಧ್ಯಯನದ ಪ್ರಕಾರ, ಕಳೆದ ನಾಲ್ಕು ವರ್ಷಗಳಲ್ಲಿ ಮಹಾರಾಷ್ಟ್ರದ ಆಡಳಿತಾರೂಢ ಮಹಾಯುತಿಯ ಅಭ್ಯರ್ಥಿಗಳ ಸಂಪತ್ತು ಸಾಮಾನ್ಯ ಭಾರತೀಯರಿಗಿಂತ 17 ಪಟ್ಟು ವೇಗವಾಗಿ ಬೆಳೆದಿದೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಅಘಾಡಿ (ಎಂವಿಎ) ಅಭ್ಯರ್ಥಿಗಳ ಸಂಪತ್ತು 5ಪಟ್ಟು ದರದಲ್ಲಿ ಬೆಳೆದಿದೆ. (ದಿ ವೈರ್, ನ. 13)

ಆಳುವ ಕೂಟ, ವಿರೋಧಿ ಕೂಟ ಮತ್ತು ಜನಸಾಮಾನ್ಯರ ನಡುವಿನ ಈ ತಾರತಮ್ಯ ರಾಜ್ಯದ ಅಧಿಕಾರ ಕೇಂದ್ರ ಮುಂಬೈನಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ ಎನ್ನುತ್ತದೆ ಈ ಅಧ್ಯಯನ. ಅಲ್ಲಿ ಮಹಾಯುತಿ ಅಭ್ಯರ್ಥಿಗಳ ಸಂಪತ್ತು ಸರಾಸರಿ ನಾಗರಿಕರಿಗಿಂತ 43 ಪಟ್ಟು ವೇಗವಾಗಿ ಬೆಳೆದಿದೆ. ಎಂವಿಎ ಅಭ್ಯರ್ಥಿಗಳು ತಮ್ಮ ಸಂಪತ್ತಿನಲ್ಲಿ ಸಾಮಾನ್ಯ ಭಾರತೀಯರ 6 ಪಟ್ಟು ಹೆಚ್ಚಳವನ್ನು ಕಂಡಿದ್ದಾರೆ, ಇದು ಬಿಜೆಪಿ ನೇತೃತ್ವದ ಮಹಾಯುತಿ ಅಭ್ಯರ್ಥಿಗಳ ಬೆಳವಣಿಗೆ ದರಕ್ಕಿಂತ 86% ಕಡಿಮೆಯಾಗಿದೆ.

ಮಹಾರಾಷ್ಟ್ರದ ಒಬ್ಬ ಸಾಮಾನ್ಯ ಮಹಾಯುತಿ ಅಭ್ಯರ್ಥಿಯ ಸಂಪತ್ತು ಸರಿಸುಮಾರು ಶೇ.120ರಷ್ಟು ಏರಿಕೆಯನ್ನು ಕಂಡಿದೆ. 2019ರಲ್ಲಿ 21.5 ಕೋಟಿ ರೂ.ನಿಂದ 2024ರಲ್ಲಿ 47.1 ಕೋಟಿ ರೂ.ಗಳಿಗೆ ಏರಿದೆ. ಇದಕ್ಕೆ ಹೋಲಿಸಿದರೆ, ಎಂವಿಎ ಅಭ್ಯರ್ಥಿಯ ಸಂಪತ್ತು ಶೇ.62ರಷ್ಟು ಬೆಳೆದಿದೆ, ರೂ.16.4 ಕೋಟಿಯಿಂದ ರೂ.26.5 ಕೋಟಿಗೆ ತಲುಪಿದೆ. ಭಾರತೀಯ ಪ್ರಜೆಯ ಸರಾಸರಿ ಸಂಪತ್ತು 2024ರಲ್ಲಿ ಸುಮಾರು 3.5 ಲಕ್ಷ ರೂ. ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ಭಾರತೀಯರ ನಿಜಸಂಪತ್ತು ವಾರ್ಷಿಕವಾಗಿ ಕೇವಲ ಶೇ.0.7ರಷ್ಟು ಬೆಳೆದಿದೆ.

ಮಹಾಯುತಿಯ ಪ್ರಮುಖ ಪಕ್ಷ ಬಿಜೆಪಿಯ ಅಭ್ಯರ್ಥಿಗಳ ಸಂಪತ್ತಿನಲ್ಲಿ ಇತರ ಮಹಾಯುತಿ ಅಭ್ಯರ್ಥಿಗಳಿಗಿಂತ ಹೆಚ್ಚಿನ ಹೆಚ್ಚಳ ಕಂಡುಬಂದಿದೆ. ಸಾಮಾನ್ಯ ಮಹಾರಾಷ್ಟ್ರ ಬಿಜೆಪಿ ಅಭ್ಯರ್ಥಿಯ ಸಂಪತ್ತು 26 ಕೋಟಿಯಿಂದ 64 ಕೋಟಿ ರೂ.ಗಳಿಗೆ ಏರಿಕೆಯಾಗಿದೆ, ಇದು ಶೇ.144 ಹೆಚ್ಚಳ. ಹಣದುಬ್ಬರಕ್ಕೆ ಸರಿಹೊಂದಿಸಿದಾಗಲೂ ಇದು ಶೇ.77ರಷ್ಟು ನೆಗೆತವನ್ನು ತೋರಿಸುತ್ತದೆ.

ಇನ್‌ಫಾರ್ಮಡ್ ವೋಟರ್ ಪ್ರಾಜೆಕ್ಟ್ ಎಂಬ ಸಂಸ್ಥೆ ಮಾಡಿದ ಈ ಅಧ್ಯಯನ ಆಳುವ ಕೂಟದವರ ಸಂಪತ್ತಿನಲ್ಲಿ ಆದ ಹೆಚ್ಚಳದ ಪ್ರಮಾಣ ಎಂತಹದು ಎಂಬುದಕ್ಕೆ ಒಂದು ಉದಾಹರಣೆಯನ್ನೂ ಉಲ್ಲೇಖಿಸಿದೆ.

2019ರಿಂದ ಮಹಾಯುತಿ ಅಭ್ಯರ್ಥಿಗಳು ಸಂಗ್ರಹಿಸಿದ ಹೆಚ್ಚುವರಿ ಸಂಪತ್ತನ್ನು ಸಾಮಾಜಿಕ ಅಭಿವೃದ್ಧಿಯತ್ತ ಹೊರಳಿಸಿದ್ದರೆ, ಸಾರ್ವಜನಿಕ ಕಾರ್ಯಕ್ರಮಗಳಿಗೆ ಸುಮಾರು 7,375 ಕೋಟಿ ರೂ. ಲಭ್ಯವಾಗುತ್ತಿತ್ತು. ಈ ಮೊತ್ತದಿಂದ 77,000ಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ಹಣವನ್ನು ನೀಡಬಹುದು, ಆ ಮೂಲಕ ಇದರಿಂದ ರಾಜ್ಯದಾದ್ಯಂತ ಶಿಶುಪಾಲನಾ ಸೌಲಭ್ಯಗಳಲ್ಲಿನ ಗಂಭೀರ ಕೊರತೆಯನ್ನು ಪರಿಹರಿಸಬಹುದಾಗಿತ್ತು ಎಂದು ಈ ಅಧ್ಯಯನ ಹೇಳುತ್ತದೆ!



ಬ್ರಿಕ್ಸ್ ದೇಶಗಳ ಕಝಾನ್ ಶೃಂಗಸಭೆ:

ಐಎಂಎಫ್–ವಿಶ್ವಬ್ಯಾಂಕ್–ಡಬ್ಲ್ಯುಟಿಒ ಇವುಗಳನ್ನು ಬ್ರಿಕ್ಸ್ ಹೆಚ್ಚು ಪ್ರಾತಿನಿಧಿಕಗೊಳಿಸಬಲ್ಲುದೇ?



ರಷ್ಯಾದ ಕಝಾನ್‌ನಲ್ಲಿ ನಡೆದ ಬ್ರಿಕ್ಸ್ ದೇಶಗಳ 16ನೇ ಶೃಂಗಸಭೆ ಮಹತ್ವದ ಪ್ರಶ್ನೆಗಳನ್ನೆತ್ತಿದೆ. ಆದರೆ, ಜಾಗತಿಕ ದಕ್ಷಿಣದ ಸಮಸ್ಯೆಗಳ ಬಗ್ಗೆ ಅದು ಅಳವಡಿಸಿಕೊಂಡ ವಿಧಾನದ ಮೂಲಭೂತ ಮಿತಿಗಳನ್ನು ನಿರ್ಲಕ್ಷಿಸುವಂತಿಲ್ಲ. ಐಎಂಎಫ್–ವಿಶ್ವ ಬ್ಯಾಂಕ್–ಡಬ್ಲ್ಯುಟಿಒ ಈಗಿರುವ ಸ್ಥಿತಿಯಲ್ಲಿ ಕೆಲವು ನ್ಯೂನತೆಗಳಿಂದ ಕೂಡಿವೆ ಮತ್ತು ಅವು ಸಾಕಷ್ಟು ಪ್ರಾತಿನಿಧಿಕವಾಗಿಲ್ಲ ಎಂದು ಬ್ರಿಕ್ಸ್ ಘೋಷಣೆ ಹೇಳುತ್ತದೆ. ಈ ಸಂಸ್ಥೆಗಳೇ, ಅವುಗಳ ಮೂಲತತ್ವವೇ ದೋಷಪೂರಿತವಾಗಿರುವಾಗ ಅವನ್ನು ಹೆಚ್ಚು ಪ್ರಾತಿನಿಧಿಕಗೊಳಿಸಲು ಸಾಧ್ಯವೇ? ವಿಶ್ವ ಬಂಡವಾಳಶಾಹಿ ರೂಪಿಸಿರುವ ಈ ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚು ಪ್ರಾತಿನಿಧಿಕವಾಗಿ ಮಾಡಿದರೂ ಸಹ, ಅವುಗಳಲ್ಲಿ ಅಂತರ್ಗತವಾಗಿರುವ ಅಪಾಯವನ್ನು ಕಡೆಗಣಿಸಲಾಗದು. ಸಾಮ್ರಾಜ್ಯಶಾಹಿ ಪ್ರಾಬಲ್ಯದಿಂದ ಜಾಗತಿಕ ದಕ್ಷಿಣಕ್ಕೆ ನಿಜವಾದ ಒಂದು ಪಾರು ಮಾರ್ಗವನ್ನು ಬ್ರಿಕ್ಸ್ ಒದಗಿಸಬೇಕಾದರೆ, ದಬ್ಬಾಳಿಕೆಯಿಲ್ಲದ ಏರ್ಪಾಟುಗಳನ್ನು ಅದು ರೂಪಿಸಬೇಕಾಗುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ–BRICS) ದೇಶಗಳ ಕಝಾನ್ ಶೃಂಗಸಭೆಯು ಹಲವಾರು ಕಾರಣಗಳಿಂದಾಗಿ ಒಂದು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಮೊದಲನೆಯದಾಗಿ, ಬ್ರಿಕ್ಸ್ ಸಂಘಟನೆಯ ಪೂರ್ಣ ಸದಸ್ಯತ್ವ ಪಡೆಯುವ ಮೊದಲ ಹೆಜ್ಜೆಯಾಗಿ "ಪಾಲುದಾರ" ದೇಶಗಳು ಎಂಬ ಹೊಸ ವರ್ಗವನ್ನು ಅದು ಸೃಷ್ಟಿಸಿದೆ ಮತ್ತು ಕ್ಯೂಬಾ ಮತ್ತು ಬೊಲಿವಿಯಾ ಸೇರಿದಂತೆ ಹದಿಮೂರು ಹೊಸ "ಪಾಲುದಾರ" ದೇಶಗಳನ್ನು ಸ್ವಾಗತಿಸಿದೆ. ಎರಡನೆಯದಾಗಿ, ಸಾಮ್ರಾಜ್ಯಶಾಹಿ ಪ್ರಾಬಲ್ಯದ ಎದುರು ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಧೈರ್ಯ ತೋರಿದ ದೇಶಗಳ ಮೇಲೆ ಯುಎಸ್ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳು ಹೇರುತ್ತಿರುವ ಏಕಪಕ್ಷೀಯ ಆರ್ಥಿಕ ನಿರ್ಬಂಧಗಳನ್ನು ವಿರೋಧಿಸಿದೆ. ಮೂರನೆಯದಾಗಿ, ಅಂತಾರಾಷ್ಟ್ರೀಯ ಹಣಕಾಸು ಮತ್ತು ವಿತ್ತೀಯ ವ್ಯವಸ್ಥೆಯ ಸುಧಾರಣೆಗಾಗಿ ಒಂದು ಕಾರ್ಯಕ್ರಮವನ್ನು ಸೂಚಿಸಿದೆ. ಡಾಲರ್‌ನ ಪ್ರಾಬಲ್ಯವನ್ನು ಮೀರುವ ಅಗತ್ಯವನ್ನು ಒತ್ತಿಹೇಳಿದ ಕಝಾನ್ ಘೋಷಣೆಯು ಸ್ವತಃ ಸಂಕ್ಷಿಪ್ತವಾಗಿತ್ತು. ಆದರೆ, ಕೈಗೊಳ್ಳಬಹುದಾದ ಕ್ರಮಗಳ ಒಂದು ಸವಿಸ್ತಾರ ವಿವರಣೆಯನ್ನು ರಷ್ಯಾದ ಸರ್ಕಾರಿ ಸಂಸ್ಥೆಗಳು ಒದಗಿಸಿದ ಹಿನ್ನೆಲೆಯ ದಾಖಲೆ-ಪತ್ರಗಳು ಕೊಡುತ್ತವೆ.

ಇವು ಸ್ವಾಗತಿಸಬೇಕಾದ ಪ್ರಮುಖ ಬೆಳವಣಿಗೆಗಳು ನಿಜ. ಆದರೆ, ಜಾಗತಿಕ ದಕ್ಷಿಣದ ಸಮಸ್ಯೆಗಳ ಬಗ್ಗೆ ಬ್ರಿಕ್ಸ್ ಅಳವಡಿಸಿಕೊಂಡ ವಿಧಾನದ ಮೂಲಭೂತ ಮಿತಿಗಳನ್ನು ನಿರ್ಲಕ್ಷಿಸುವಂತಿಲ್ಲ. ಈ ವಿಧಾನದ ಸಾರಭೂತ ಅಂಶವೆಂದರೆ, ಅಸ್ತಿತ್ವದಲ್ಲಿರುವ ವಿಶ್ವ ವ್ಯಾಪಾರ ಸಂಘಟನೆ ಮತ್ತು ಐಎಂಎಫ್–ವಿಶ್ವ ಬ್ಯಾಂಕ್ ಸಂಸ್ಥೆಗಳನ್ನು ಹೆಚ್ಚು ಪ್ರಾತಿನಿಧಿಕವಾಗುವಂತೆ ಬದಲಾಯಿಸುವುದು. ಖಚಿತವಾಗಿ ಹೇಳುವುದಾದರೆ, ಬ್ರಿಕ್ಸ್ ಎಂಬುದು ಒಂದು ಮಿಶ್ರರೂಪದ ಬಣ. ಇಂತಹ ಒಂದು ಸಂಸ್ಥೆಯನ್ನು ಅದು ಒಂದು ಆಮೂಲಾಗ್ರವಾದ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗದು. ಆದರೆ, ನಾನು ಇಲ್ಲಿ ಪ್ರಸ್ತಾಪಿಸುತ್ತಿರುವ ಸಮಸ್ಯೆಯು ಒಂದು ಆಮೂಲಾಗ್ರವಾದ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವುದು ಕಾರ್ಯಸಾಧುವೇ ಎಂಬುದಲ್ಲ; ಯಾವುದು ಒಂದು ಆಮೂಲಾಗ್ರವಾದ ಕಾರ್ಯಸೂಚಿಯಾಗುತ್ತದೆ ಎಂಬುದು.

ಮೂಲತತ್ವವೇ ದೋಷಪೂರಿತ

ಸಾಮ್ರಾಜ್ಯಶಾಹಿ ದೇಶಗಳ ಹಿಡಿತದಲ್ಲಿರುವ ಈ ಅಂತಾರಾಷ್ಟ್ರೀಯ ಸಂಸ್ಥೆಗಳು ಈಗಿರುವ ಸ್ಥಿತಿಯಲ್ಲಿ ಕೆಲವು ನ್ಯೂನತೆಗಳಿಂದ ಕೂಡಿವೆ ಮತ್ತು ಅವು ಸಾಕಷ್ಟು ಪ್ರಾತಿನಿಧಿಕವಾಗಿಲ್ಲ ಎಂದು ಬ್ರಿಕ್ಸ್ ಘೋಷಣೆ ಹೇಳುತ್ತದೆ. ಆದರೆ, ಅವುಗಳ ಆಡಳಿತ ಅಥವಾ ಅವುಗಳ ಕಾರ್ಯ–ಕ್ಷಮತೆಯು ಹೇಗೇ ಇರಲಿ, ಈ ಸಂಸ್ಥೆಗಳೇ ದೋಷಪೂರಿತ. ಏಕೆಂದರೆ, ಅವುಗಳ ಮೂಲತತ್ವವೇ ದೋಷಪೂರಿತವಾಗಿದೆ. ಒಂದು ಉಪಮೆಯನ್ನು ಬಳಸಿ ಹೇಳುವುದಾದರೆ, ಈಗಿರುವ ವ್ಯವಸ್ಥೆಯಲ್ಲಿ ಹತೋಟಿ ಕೂಟಗಳು (cartels) ಮತ್ತು ಏಕಸ್ವಾಮ್ಯಗಳ ಕಾರಣದಿಂದಾಗಿ ಕಾರ್ಮಿಕರ ಶೋಷಣೆಯಾಗುತ್ತಿದೆ ಮತ್ತು ಒಂದು ವೇಳೆ ಮುಕ್ತ ಸ್ಪರ್ಧೆಯು ಅವುಗಳನ್ನು ಪಲ್ಲಟಗೊಳಿಸಿದರೆ ಶೋಷಣೆಯು ಕಣ್ಮರೆಯಾಗುತ್ತದೆ ಎಂಬ ನಿಲುವನ್ನು ಬ್ರಿಕ್ಸ್ ಹೊಂದಿದೆ ಎಂಬಂತಾಗುತ್ತದೆ.

ಉದಾಹರಣೆಗೆ, ವಿಶ್ವ ವ್ಯಾಪಾರ ಸಂಘಟನೆಯನ್ನೇ (WTO) ತೆಗೆದುಕೊಳ್ಳಿ. ಮುಂದುವರೆದ ದೇಶಗಳು ವಿಶ್ವ ವ್ಯಾಪಾರ ಸಂಘಟನೆಯ ಮೂಲ ಆಶಯದಿಂದ ದೂರ ಸರಿಯುತ್ತಿವೆ ಮತ್ತು ಒಂದು ರಕ್ಷಣಾತ್ಮಕ ವ್ಯಾಪಾರ ನೀತಿಯನ್ನು ಅನುಸರಿಸುತ್ತಿವೆ ಎಂದು ಕಝಾನ್ ಘೋಷಣೆ ಹೇಳುತ್ತದೆ. ಇದರಿಂದ ಜಾಗತಿಕ ದಕ್ಷಿಣಕ್ಕೆ ತಾರತಮ್ಯವಾಗುತ್ತಿದೆ ಮತ್ತು ಈ ತಾರತಮ್ಯವನ್ನು ವಿಶ್ವ ವ್ಯಾಪಾರ ಸಂಘಟನೆಯ ಆಡಳಿತದಲ್ಲಿ ದಕ್ಷಿಣದ ದೇಶಗಳಿಗೆ ಹೆಚ್ಚು ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಸರಿಪಡಿಸಬಹುದು ಎಂದು ಕಝಾನ್ ಘೋಷಣೆ ಪ್ರತಿಪಾದಿಸುತ್ತದೆ. ಆದರೆ, ಇಲ್ಲಿರುವ ಸಮಸ್ಯೆಯೆಂದರೆ, ವಿಶ್ವ ವ್ಯಾಪಾರ ಸಂಘಟನೆಯನ್ನು ಹುಟ್ಟುಹಾಕಲು ಆಧರಿಸಿದ ಮುಕ್ತ ವ್ಯಾಪಾರ ವಾದವೇ ಸ್ವತಃ ದೋಷಪೂರಿತವಾಗಿದೆ. ಇದು ಸೇ ಅವರ ನಿಯಮವು ಕಾರ್ಯಸಾಧು ಎಂದು ಭಾವಿಸಿಕೊಂಡಿದೆ (ಜನಶಕ್ತಿ; ಸಂಚಿಕೆ 46ನ್ನು ನೋಡಿ). ಈ ನಿಯಮವು ಒಟ್ಟಾರೆ ಬೇಡಿಕೆಯಲ್ಲಿ ಕೊರತೆಯ ಸಮಸ್ಯೆಯೇ ಇರುವುದಿಲ್ಲ ಎಂದು ಹೇಳುತ್ತದೆ. ಆದ್ದರಿಂದ ಮಾರುಕಟ್ಟೆಗಳಿಗಾಗಿ ಹೋರಾಟವೇ ಇರುವುದಿಲ್ಲ: ಪ್ರತಿ ದೇಶವೂ ಮುಕ್ತ ವ್ಯಾಪಾರದಲ್ಲಿ ತೊಡಗುವ ಮೊದಲು ಮತ್ತು ನಂತರ ತನ್ನ ಎಲ್ಲ ಸಂಪನ್ಮೂಲಗಳನ್ನೂ ಪೂರ್ಣವಾಗಿ ಬಳಕೆ ಮಾಡಿಕೊಂಡಿರುತ್ತದೆ. ಒಂದೇ ಒಂದು ವ್ಯತ್ಯಾಸವೆಂದರೆ, ಮುಕ್ತ ವ್ಯಾಪಾರದಲ್ಲಿ ತೊಡಗಿದ ನಂತರ ಬೇರೆ ಬೇರೆ ಸರಕುಗಳನ್ನು ಉತ್ಪಾದಿಸುವ ಸಲುವಾಗಿ ಸಂಪನ್ಮೂಲಗಳನ್ನು ವಿಭಿನ್ನವಾಗಿ ಬಳಸಿಕೊಳ್ಳಲಾಗುತ್ತದೆ ಎಂದು ಈ ನಿಯಮ ಹೇಳುತ್ತದೆ.

ಇದು ಬಂಡವಾಳಶಾಹಿಯ ವಾಸ್ತವದಿಂದ ದೂರವಿರುವ ಮತ್ತು ಅಸಂಬದ್ಧವಾದ ಒಂದು ದಾವೆ. ಈ ಕಾರಣದಿಂದಾಗಿ ಜಾಗತಿಕ ದಕ್ಷಿಣದ ದೇಶಗಳನ್ನು ಮುಕ್ತ ವ್ಯಾಪಾರಕ್ಕೆ ಒಳಪಡಿಸುವುದು ಅವುಗಳನ್ನು ಡಾರ್ವಿನಿಯನ್ ಸ್ಪರ್ಧೆಗೆ (ಅಂದರೆ, ಬಲಶಾಲಿಗಳು ಮಾತ್ರ ಬದುಕುಳಿಯುವ ಸ್ಪರ್ಧೆಗೆ) ತಳ್ಳಿದಂತಾಗುತ್ತದೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ದೇಶ ದೇಶಗಳ ನಡುವೆ ಯಾವುದೇ ರೀತಿಯ ಸಹಕಾರದ ಆಶಯವನ್ನು ತಲೆಕೆಳಗು ಮಾಡುತ್ತದೆ. ಅನುಷ್ಠಾನದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ತತ್ವವು ಜಾಗತಿಕ ದಕ್ಷಿಣದ ದೇಶಗಳನ್ನೂ ಒಳಗೊಂಡಂತೆ, ದೇಶ ದೇಶಗಳ ನಡುವೆ ಸಹಕಾರವನ್ನು ಖಾತ್ರಿಪಡಿಸುವುದರ ಬದಲು, ಅವುಗಳ ನಡುವೆ ಒಂದು ಘಾತುಕ ಸ್ಪರ್ಧೆಯನ್ನು ಖಚಿತಪಡಿಸುತ್ತದೆ.

ಅಂತೆಯೇ, ಒಂದು ದೇಶವು ತನ್ನ ರೈತರಿಗೆ ನೀಡುವ ಬೆಂಬಲ ಬೆಲೆಯು ಅದು ಒಂದು ನಿರ್ದಿಷ್ಟ ಉತ್ಪನ್ನಕ್ಕೆ ಕೊಡುವ ಸಬ್ಸಿಡಿಯ ಮೌಲ್ಯದ ಶೇ. 10ಕ್ಕಿಂತ ಹೆಚ್ಚು ಮೊತ್ತವನ್ನು ಹೊಂದಿರುವುದು ಸಾಧ್ಯವಿಲ್ಲ ಎಂಬ ವಿಶ್ವ ವ್ಯಾಪಾರ ಸಂಘಟನೆಯ ನಿಯಮವು, ಅತ್ಯಂತ ದೋಷಪೂರಿತವಾಗಿದೆ (ಭಾರತವು ಈ ನಿಯಮವನ್ನು ಉಲ್ಲಂಘಿಸುತ್ತದೆಯೇ ಅಥವಾ ಇಲ್ಲವೇ ಎಂಬುದು ಬೇರೆಯೇ ಪ್ರಶ್ನೆ). ಈ ನಿಯಮವನ್ನು ಆಧರಿಸಿದ "ಮಾರುಕಟ್ಟೆ ವಿರೂಪಗೊಳಿಸುವ" ಮತ್ತು "ಮಾರುಕಟ್ಟೆಯನ್ನು ವಿರೂಪಗೊಳಿಸದ" ಸಬ್ಸಿಡಿಗಳ ನಡುವಿನ ಆ ಒಂದು ವ್ಯತ್ಯಾಸವೇ ಮಾರುಕಟ್ಟೆಯು ಸದಾ "ದಕ್ಷ"ವಾಗಿಯೇ ಕಾರ್ಯನಿರ್ವಹಿಸುತ್ತದೆ ಎಂದು ಊಹಿಸಿಕೊಳ್ಳುತ್ತದೆ ಮತ್ತು ಅದು ನಮ್ಮನ್ನು ಕೀನ್ಸ್–ಪೂರ್ವದಲ್ಲಿ ಆಚರಣೆಯಲ್ಲಿದ್ದ ಅರ್ಥಶಾಸ್ತ್ರದ ಪರಿಸ್ಥಿತಿಗೆ ಕೊಂಡೊಯ್ಯುತ್ತದೆ. ಹಾಗಾಗಿ, ವಿಶ್ವ ವ್ಯಾಪಾರ ಸಂಘಟನೆಯ ಈ ವಾದವು ಅದು ತನ್ನ ಅಸಂಬದ್ಧ ಊಹೆಗಳ ಮೂಲಕ ತಾನೇ ಸೃಷ್ಟಿಸಿಕೊಂಡ ಕಾಲ್ಪನಿಕ ಪ್ರಪಂಚದ ಹೊರಗೆ ಯಾವ ಕಾರಣವನ್ನೂ ಅಥವಾ ಸಮರ್ಥನೆಯನ್ನೂ ಹೊಂದಿಲ್ಲ.

ಡಾಲರ್ ಪಾರಮ್ಯದ ಪ್ರಶ್ನೆ

ಬ್ರಿಕ್ಸ್ ಘೋಷಣೆಯು, ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಯುಎಸ್ ಡಾಲರ್ ಹೊಂದಿರುವ ಪಾರಮ್ಯವನ್ನು ಕೊನೆಗೊಳಿಸಿ, ದೇಶಗಳು ತಮ್ಮ ಪರಸ್ಪರ ವ್ಯಾಪಾರ–ವಹಿವಾಟುಗಳನ್ನು ಹೆಚ್ಚು ಹೆಚ್ಚಾಗಿ ಒಂದು ನಿಗದಿತ ವಿನಿಮಯ ದರದಲ್ಲಿ ತಮ್ಮ ತಮ್ಮ ರಾಷ್ಟ್ರೀಯ ಕರೆನ್ಸಿಗಳ ಮೂಲಕ ಕೈಗೊಳ್ಳುವ ಅಂಶಕ್ಕೆ ಒತ್ತು ಕೊಟ್ಟಿದೆ. ಡಾಲರ್ ಪಾರಮ್ಯವನ್ನು ಕೊನೆಗೊಳಿಸುವುದು ನಿಸ್ಸಂದೇಹವಾಗಿಯೂ ಒಂದು ಶ್ಲಾಘನೀಯ ಉದ್ದೇಶವೇ. ಆದರೆ ಅದಷ್ಟೇ ಸಾಲದು. ಹಣಕಾಸು ಬಂಡವಾಳದ ಪಾರಮ್ಯವನ್ನು ತೊಡೆದುಹಾಕುವುದೂ ಸಹ ಅಗತ್ಯವೇ. ಈ ಉದ್ದೇಶಕ್ಕಾಗಿ, ಕನಿಷ್ಠ ಮೂರು ಷರತ್ತುಗಳು ಅಗತ್ಯವಾಗುತ್ತವೆ: ಮೊದಲನೆಯದು, ಚಾಲ್ತಿ ಖಾತೆಯ ಅಸಮತೋಲನವನ್ನು ತೊಡೆದು ಹಾಕುವುದು. ಇದನ್ನು ಚಾಲ್ತಿ ಹೆಚ್ಚುವರಿಯನ್ನು ಹೊಂದಿರುವ ದೇಶಗಳು ಮಾಡಬೇಕೇ ಹೊರತು ಕೊರತೆಯನ್ನು ಹೊಂದಿರುವ ದೇಶಗಳಲ್ಲ. ಎರಡನೆಯದು, ಚಾಲ್ತಿ ಖಾತೆಯ ಅಸಮತೋಲನವನ್ನು ತೊಡೆದುಹಾಕುವವರೆಗೂ, ಹೆಚ್ಚುವರಿ ವಿದೇಶಿ ವಿನಿಮಯವನ್ನು ಹೊಂದಿರುವ ದೇಶಗಳು ಕೊರತೆಯ ದೇಶಗಳು ತಮಗೆ ಬರೆದು ಕೊಟ್ಟ ಎಲ್ಲ ಸಾಲ ಪತ್ರಗಳನ್ನೂ (ಐಒಯು) ಸಾಧ್ಯವಾದಷ್ಟೂ ಹೆಚ್ಚು ಕಾಲ ಹಿಡಿದಿಟ್ಟುಕೊಂಡಿರಲು ಸಿದ್ಧರಾಗಿರಬೇಕು. ಮೂರನೆಯದು, ವಿದೇಶಿ ವಿನಿಮಯ ಕೊರತೆಯ ದೇಶಗಳು ಬಾಕಿ ಸಾಲವನ್ನು ಇತ್ಯರ್ಥಗೊಳಿಸುವಲ್ಲಿ ಆಸ್ತಿ ವರ್ಗಾವಣೆಗಳು ("ಅಪ–ರಾಷ್ಟ್ರೀಕರಣ") ಇರಬಾರದು.

ವಿದೇಶಿ ವಿನಿಮಯ ಪುಟ 15 ಕ್ಕೆ

ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ತಮ್ಮ ದಸರಾ ಸಂದೇಶದಲ್ಲಿ ಮಾರ್ಕ್ಸ್‌ವಾದಿಗಳು ಸಾಂಸ್ಕೃತಿಕ ವಲಯಕ್ಕೆ ನುಸುಳುತ್ತಿದ್ದಾರೆ ಎಂದು ಎಚ್ಚರಿಸಿದ್ದಾರೆ. ಭಾಗವತ್ ಅವರು ಮಾರ್ಕ್ಸ್‌ವಾದಿ ಪದವನ್ನು ಬಳಸಿದರೆ, ಮೋದಿ ಅವರು ದೀಪಾವಳಿಗೂ ಮುನ್ನ ಅರ್ಬನ್ ನಕ್ಸಲ್ ಎಂಬ ಪದವನ್ನು ಬಳಸಿದ್ದರು. ಖಂಡಿತ, ಇವೆರಡೂ ಒಂದೇ ಅಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ನಕ್ಸಲರು ಕಾಡುಗಳಲ್ಲಿ ಕೊಲ್ಲಲ್ಪಟ್ಟರು ಮತ್ತು ಪಟ್ಟಣಗಳಿಗೆ ನುಸುಳಿದರು. ಮಾವೋವಾದಿಗಳನ್ನು ಎನ್ಕೌಂಟರ್‌ಗಳಿಂದ ನಿರ್ನಾಮ ಮಾಡಲು ಸಾಧ್ಯವೇ ಎಂಬುದು ಬೇರೆ ಪ್ರಶ್ನೆ. ಆದರೆ, ಸೈದ್ಧಾಂತಿಕವಾಗಿ ಅವರೊಂದಿಗೆ ಯಾವುದೇ ಸಂಬಂಧವಿಲ್ಲದ ಎಲ್ಲರನ್ನೂ ಆ ಹೆಸರಿನಿಂದ ಉಲ್ಲೇಖಿಸುವುದು ತುಂಬಾ ಅವಿವೇಕದ ಸಂಗತಿಯಾಗಿದೆ. ಭಾಗವತ್ ಮತ್ತು ಮೋದಿಯವರ ಭಾಷಣಗಳು ಹಿಂದುತ್ವದ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸುವ ಅವರ ಚಾಲನೆಯಲ್ಲಿ, ಅವರು ಎಲ್ಲಾ 'ಅನ್ಯ' ಅಂಶಗಳನ್ನು ಹೊರಹಾಕಲು ಶೈಕ್ಷಣಿಕ ವ್ಯವಸ್ಥೆ ಮತ್ತು ಬಹು–ಸಾಂಸ್ಕೃತಿಕ ಫ್ಯಾಬ್ರಿಕ್ ಅನ್ನು ಗುರಿಯಾಗಿಸುತ್ತಾರೆ ಎಂದು ಸ್ಪಷ್ಟಪಡಿಸುತ್ತದೆ.

ಮಾರ್ಕ್ಸ್‌ವಾದಿಗಳ ವಿರುದ್ಧ ಮೋಹನ್ ಭಾಗವತ್, ಮೋದಿ ಮತ್ತೆ ದಾಳಿ

'ಸಾಂಸ್ಕೃತಿಕ ಮಾರ್ಕ್ಸ್‌ವಾದ' ದ ಮಾತು: ಹಿಂದುತ್ವದ ನಿರಂಕುಶ ಪ್ರಭುತ್ವದ ಸ್ಥಾಪನೆಯತ್ತ ಚಾಲನೆ

ಸಿ.ಸಿದ್ದಯ್ಯ

ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ಪಟೇಲ್ ಅವರ 150ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು 'ನಗರದ ನಕ್ಸಲ್ ಗಳ ರೂಪದಲ್ಲಿ ವಿವಿಧ ಶಕ್ತಿಗಳು ದೇಶದ ವಿರುದ್ಧ ಕೆಲಸ ಮಾಡುತ್ತಿವೆ' ಎಂಬ ಮಾತುಗಳನ್ನು ಹೇಳಿದ್ದರು. ಆದರೆ, ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ನಾಗ್ಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಾರ್ಷಿಕ ವಿಜಯದಶಮಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತ, 'ಮಾರ್ಕ್ಸ್‌ವಾದಿಗಳು ಸಾಂಸ್ಕೃತಿಕ ವಲಯಕ್ಕೆ ನುಸುಳುತ್ತಿದ್ದಾರೆ, ಈ ಶಕ್ತಿಗಳು ಮೊದಲು ದೇಶದ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತವೆ, ನಂತರ ಅದರ ಶಿಕ್ಷಣ ಮತ್ತು ಇತರ ಸಂಸ್ಥೆಗಳಿಗೆ ನುಸುಳುತ್ತವೆ, ಅಸಮಾಧಾನವನ್ನು ಬೆಳೆಸುತ್ತವೆ ಮತ್ತು ಜನರು ತಮ್ಮದೇ ಆದ ಪರಂಪರೆಯನ್ನು ಧಿಕ್ಕರಿಸಲು ಕಾರಣವಾಗುತ್ತವೆ. ಸಮಾಜದಲ್ಲಿ ನೇರ ಘರ್ಷಣೆಗಳು ಸೃಷ್ಟಿಯಾಗುತ್ತವೆ ಮತ್ತು ವ್ಯವಸ್ಥೆ, ಕಾನೂನು ಮತ್ತು ಆಡಳಿತದ ಮೇಲಿನ ಅಪನಂಬಿಕೆಯ ಮೂಲಕ ಅರಾಜಕತೆ ಮತ್ತು ಭಯದ ವಾತಾವರಣವನ್ನು ತೀವ್ರಗೊಳಿಸಲಾಗುತ್ತದೆ, ಇದು ಅವರ ಪ್ರಾಬಲ್ಯವನ್ನು ಸ್ಥಾಪಿಸಲು ಸುಲಭವಾಗುತ್ತದೆ" ಎಂದು ಭಾಗವತ್ ಹೇಳಿದ್ದಾರೆ.

ಹಿಂದೂ ಧರ್ಮದಿಂದಲೇ ದೇಶವು ಒಗ್ಗೂಡಿದೆ ಎಂದೂ, ಅದರ ಆಧಾರದ ಮೇಲೆ ಒಗ್ಗಟ್ಟಿಗೆ ಕರೆ ನೀಡಲಾಗುತ್ತಿದೆ ಎನ್ನುತ್ತಾ, 'ಡೀಪ್ ಸ್ಟೇಟ್, ಮಾರ್ಕ್ಸ್‌ವಾದಿಗಳು, ವೋಕಿಸಂ (ಜಾಗೃತಿವಾದ) ಇದಕ್ಕೆ ಅಡ್ಡಿ ಮಾಡುತ್ತಾ ದೇಶಕ್ಕೆ ಬೆದರಿಕೆ ಹಾಕುತ್ತಿದ್ದಾರೆ, 'ವೋಕಿಸಂ' ಮತ್ತು 'ಸಾಂಸ್ಕೃತಿಕ ಮಾರ್ಕ್ಸ್‌ವಾದಿ'ಗಳು ಎಲ್ಲಾ ಸಾಂಸ್ಕೃತಿಕ ಸಂಪ್ರದಾಯಗಳ ಘೋಷಿತ ಶತ್ರುಗಳು (**`wokeism' and `cultural Marxist' are declared enemies of all cultural tradition**), "ಪರ್ಯಾಯ ರಾಜಕೀಯ" ಎಂಬ ಹೆಸರಿನಲ್ಲಿ ತಮ್ಮ ವಿನಾಶಕಾರಿ ಅಜೆಂಡಾವನ್ನು ಮುನ್ನಡೆಸುವುದು ಅವರ ಕಾರ್ಯತಂತ್ರವಾಗಿದೆ. ಭಾರತದ ವಿರುದ್ಧ ಉಗ್ರ ಶಕ್ತಿಗಳು ಸಕ್ರಿಯವಾಗಿವೆ ಮತ್ತು ದೇಶದ ಪ್ರಗತಿಯನ್ನು ತಡೆಯಲು ಶ್ರಮಿಸುತ್ತಿವೆ, ಪ್ರಪಂಚದಾದ್ಯಂತದ ಅನೇಕ ವಿದ್ವಾಂಸರ ಪುಸ್ತಕಗಳು ಈ ವಿಷಯಗಳ ಬಗ್ಗೆ ಹೊರಬಂದಿವೆ. ದುರದೃಷ್ಟವಶಾತ್ ಈ ಬಾಹ್ಯ ಶಕ್ತಿಗಳಿಗೆ ಸಹಾಯ ಮಾಡುವ ಕೆಲವು ಜನರಿದ್ದಾರೆ' ಎನ್ನುತ್ತಾ, ಇವರ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಭಾಗವತ್ ಹೇಳಿದ್ದಾರೆ. (ವೋಕ್ ಎಂಬ ಪದವು ಆಫ್ರಿಕನ್–ಅಮೆರಿಕನ್ ವರ್ನಾಕ್ಯುಲರ್ ಇಂಗ್ಲಿಷ್‌ನಿಂದ ಪಡೆದ ವಿಶೇಷಣವಾಗಿದೆ, ಇದು ಜನಾಂಗೀಯ ಪೂರ್ವಾಗ್ರಹ ಮತ್ತು ತಾರತಮ್ಯದ ಜಾಗೃತಿಯನ್ನು ಸೃಷ್ಟಿಸುವ ಕ್ರಿಯಾಶೀಲತೆಯನ್ನು ಸೂಚಿಸುತ್ತದೆ.)

ಆರೆಸ್ಸೆಸ್ ಮಾರ್ಕ್ಸ್‌ವಾದಿಗಳ ವಿರುದ್ಧ ಮಾತನಾಡಿರುವುದು ಇದೇ ಮೊದಲಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ, ನಂತರವೂ ಮಾರ್ಕ್ಸ್‌ವಾದಿಗಳನ್ನು ಅದು ತನ್ನ ಪ್ರಮುಖ ಶತ್ರುವೆಂದೇ ಪರಿಗಣಿಸಿದೆ. ಭಾಗವತ್ ಅವರು 2023ರ ವಿಜಯದಶಮಿ ದಿನದಂದು ಮಾರ್ಕ್ಸ್‌ವಾದಿಗಳ ಮೇಲೆ ಇದೇ ರೀತಿ ದಾಳಿ ಮಾಡಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ಸಮಾಜವನ್ನು ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಭಜಿಸಲು ಈ ಶಕ್ತಿಗಳು ಪ್ರಯತ್ನಿಸುತ್ತಿವೆ ಎಂದು ಭಾಗವತ್ ಹೇಳಿದ್ದು ಮಾತ್ರ ವಿಚಿತ್ರವಾಗಿದೆ.

ಭಾಗವತ್ ಅವರು 'ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು' ಎಂಬ ಪದವನ್ನು ಬಳಸಿದ್ದಾರೆ ಎಂಬುದು ಕುತೂಹಲಕಾರಿಯಾಗಿದೆ. ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಲಪಂಥೀಯ ಮತ್ತು ನವ–ಫ್ಯಾಸಿಸ್ಟ್ ವಲಯಗಳು ಬಳಸುತ್ತವೆ. ಆರೆಸ್ಸೆಸ್‌ನ ಫ್ಯಾಸಿಸ್ಟ್ ಸಿದ್ಧಾಂತ ಮತ್ತು ಭಾರತೀಯ ಸಮಾಜ ಮತ್ತು ಸಂಸ್ಕೃತಿಯನ್ನು 'ಏಕರೂಪ'ಗೊಳಿಸುವ ಮೋದಿ ಸರ್ಕಾರದ ಸರ್ವಾಧಿಕಾರಿ ಪ್ರಯತ್ನಗಳನ್ನು ಟೀಕಿಸುವ ಎಡ ಮತ್ತು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮಸಿ ಬಳಿಯಲು ಆರೆಸ್ಸೆಸ್ ಈ ಪದವನ್ನು ಎರವಲು ಪಡೆಯುತ್ತಿದೆ.



'ಭಾರತೀಯ' ಸಂಸ್ಕೃತಿಗೆ ಪರಕೀಯರೆಂದು ಭಾರತದಲ್ಲಿ ಎಡಪಂಥೀಯರ ಮೇಲೆ ದಾಳಿ ಮಾಡುವ ಅತಿ ಸಂಪ್ರದಾಯವಾದಿ ಬಲದ ವಾಕ್ಚಾತುರ್ಯವನ್ನುಭಾಗವತ್ ಅನುಕರಿಸುತ್ತಿದ್ದಾರೆ. ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದಗೊಳಿಸಲು ಮತ್ತು **JNU** ನಂತಹ ವಿಶ್ವವಿದ್ಯಾಲಯಗಳನ್ನು ಗುರಿಯಾಗಿಸಲು RSS ನೇತೃತ್ವದ ಡ್ರೈವ್‌ಗೆ ಇದು ಸಮರ್ಥನೆಯಾಗಿದೆ. 'ನ್ಯೂಸ್ ಕ್ಲಿಕ್' ದಾಳಿಗೆ ಒಳಗಾದ ರೀತಿಯನ್ನು ನೋಡಿದರೆ 'ಅಕಾಡೆಮಿಯಾ', ಮಾಧ್ಯಮವೂ ನಿಯಂತ್ರಣ ಮತ್ತು ದಮನಕ್ಕೆ ಒಳಗಾಗುತ್ತದೆ.

'ಅರ್ಬನ್ ನಕ್ಸಲ್' ಪದವನ್ನು ಬಳಸಿದ ಮೋದಿ

ಭಾಗವತ್ ಅವರು ಮಾರ್ಕ್ಸ್‌ವಾದಿ ಪದವನ್ನು ಬಳಸಿದರೆ, ಮೋದಿ ಅವರು ಅರ್ಬನ್ ನಕ್ಸಲ್ ಎಂಬ ಪದವನ್ನು ಬಳಸಿರುವುದು ಕೂಡ ರಾಜಕೀಯ ತಂತ್ರವಾಗಿದೆ. ಖಂಡಿತ ಇವೆರಡೂ ಒಂದೇ ಅಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಕಾಂಗ್ರೆಸ್ಸಿನಿಂದ ಹಿಡಿದು ಕಮ್ಯೂನಿಸ್ಟರು, ಕಲಾವಿದರು ಮತ್ತು ಬರಹಗಾರರಿಗೆ ಇದೇ ಅನಿಸಿಕೆಯನ್ನು ಬಿಂಬಿಸುವುದು ಇದರ ಕಾರ್ಯತಂತ್ರವಾಗಿದೆ. ನಕ್ಸಲರು ಕಾಡುಗಳಲ್ಲಿ ಕೊಲ್ಲಲ್ಪಟ್ಟರು ಮತ್ತು ಪಟ್ಟಣಗಳಿಗೆ ನುಸುಳಿದರು. ಮಾವೋವಾದಿಗಳನ್ನು ಎನ್ಕೌಂಟರ್‌ಗಳಿಂದ ನಿರ್ನಾಮ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ ಒಂದೆಡೆಯಾದರೆ, ಸೈದ್ಧಾಂತಿಕವಾಗಿ ಅವರೊಂದಿಗೆ ಯಾವುದೇ ಸಂಬಂಧವಿಲ್ಲದ ಎಲ್ಲರನ್ನೂ ಆ ಹೆಸರಿನಿಂದ ಉಲ್ಲೇಖಿಸುವುದು ತುಂಬಾ ಅವಿವೇಕದ ಸಂಗತಿಯಾಗಿದೆ. ಪ್ರಗತಿಪರರು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಯಾವಾಗಲೂ ಸಾಂವಿಧಾನಿಕ ಮೌಲ್ಯಗಳಿಗಾಗಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಹೋರಾಡುತ್ತವೆ. ಟೀಕೆ ಮತ್ತು ಚಳವಳಿ ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. 'ಒಂದು ದೇಶ, ಒಂದು ಸಂವಿಧಾನ' ಎಂಬ ಘೋಷವಾಕ್ಯದಿಂದ ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕುಗಳನ್ನು ಟೀಕಿಸುವ ಮಾಧ್ಯಮ ಹಾಗೂ ಪತ್ರಕರ್ತರನ್ನು ಪ್ರಧಾನಿ ಮೋದಿ ಬೇಟೆಯಾಡುತ್ತಿರುವುದು ಹಾಸ್ಯಾಸ್ಪದ. ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ಪಟೇಲ್ ಅವರ 150ನೇ ಜನ್ಮದಿನಾಚರಣೆಯನ್ನು ಮೋದಿಯವರು ಸಂವಿಧಾನ ವಿರೋಧಿ ರೀತಿಯಲ್ಲಿ ಬಳಸಿಕೊಂಡಿರುವುದು ಮುಂಬರುವ ಪರಿಣಾಮಗಳಿಗೆ ಒಂದು ಸಂಕೇತವಾಗಿದೆ. ಭಾಗವತ್ ಮತ್ತು ಮೋದಿಯವರ ಭಾಷಣಗಳು ಹಿಂದುತ್ವದ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸುವ ಅವರ ಚಾಲನೆಯಲ್ಲಿ, ಅವರು ಎಲ್ಲಾ 'ಅನ್ಯ' ಅಂಶಗಳನ್ನು ಹೊರಹಾಕಲು ಶೈಕ್ಷಣಿಕ ವ್ಯವಸ್ಥೆ ಮತ್ತು ಬಹು–ಸಾಂಸ್ಕೃತಿಕ ಫ್ಯಾಬ್ರಿಕ್ ಅನ್ನು ಗುರಿಯಾಗಿಸುತ್ತಾರೆ ಎಂದು ಸ್ಪಷ್ಟಪಡಿಸುತ್ತದೆ.

'ತನಗೆ ತಾನೇ ಚಿರಂಜೀವಿ ಅಂದುಕೊಂಡರಂತೆ'

'ತನಗೆ ತಾನೇ ಚಿರಂಜೀವಿ ಅಂದುಕೊಂಡರಂತೆ' ಅನ್ನೋದು ಒಂದು ಗಾದೆ ಮಾತು. ತಮ್ಮ ಆಡಳಿತದ ಅವಧಿಯಲ್ಲಿ ನಡೆದಿರುವ ಪ್ರಗತಿಗೆ ಪ್ರಪಂಚವೇ ಬೆಚ್ಚಿಬಿದ್ದಿದೆ, ಜಗತ್ತು ಭಾರತದತ್ತ ನೋಡುತ್ತಿದೆ ಎಂದು ಮೋದಿಯವರು ಯಾವಾಗಲೂ ಹೇಳುತ್ತಲೇ ಇರುತ್ತಾರೆ. ಇದಕ್ಕೆ ಆಧಾರಗಳನ್ನು ತೋರಿಸುತ್ತಾರೆಯೇ ಎಂದರೆ ಅದೂ ಇಲ್ಲ. ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಭಾರತದಲ್ಲಿನ ಹಸಿವು, ಬಡತನ, ಭ್ರಷ್ಟಾಚಾರ ಇವುಗಳ ಕುರಿತು ಟೀಕೆ ಬಂದರೆ ಅಂತಹ ಟೀಕೆಗಳ ವಿರುದ್ಧ ತಕ್ಷಣ ದಾಳಿ ಮಾಡುತ್ತಾರೆ. ಸಾಮಾಜಿಕ ಮಾಧ್ಯಮದಿಂದ ಹಿಡಿದು ಕೇಂದ್ರ ಮಂತ್ರಿಗಳವರೆಗೆ ಅಂತಹ ದಾಳಿಯಲ್ಲಿ ಪಾಲು ಹಂಚಿಕೊಳ್ಳುತ್ತಾರೆ. ಅಕ್ಟೋಬರ್ 31ರಂದು ಸರ್ದಾರ್ ಪಟೇಲ್ ಜನ್ಮದಿನದ ರಾಷ್ಟ್ರೀಯ ಏಕತಾ ದಿನದ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಇದನ್ನೇ ಮಾಡಿದರು. ಸರ್ದಾರ್ ಪಟೇಲ್ ಅವರ ಪ್ರತಿಮೆಯ ಬಳಿ ಮಾತನಾಡುತ್ತಾ ಏಕಪಕ್ಷೀಯ ಟೀಕೆಗಳನ್ನು ಮಾಡಿದರು. ಕಳೆದ ವರ್ಷದ ದಸರಾ ಸಂದರ್ಭದಲ್ಲಿ ಮೋದಿಯವರು ಜಾತೀಯತೆ ಮತ್ತು ಪ್ರಾದೇಶಿಕತೆಯ ಹೆಸರಿನಲ್ಲಿ ದೇಶವನ್ನು ಒಡೆಯಲು ಯತ್ನಿಸುತ್ತಿರುವ ಶಕ್ತಿಗಳನ್ನು ಸದೆಬಡಿಯುವಂತೆ ಮಾತನಾಡಿದ್ದರು. ಮೋದಿಯವರು ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯನ್ನಾಗಿ ಮಾಡುವಲ್ಲಿ ತೊಡಗಿರುವ ಸಮಯದಲ್ಲಿ ಜಾತಿಯ ಮೂಲಕ ದೇಶವನ್ನು ವಿಭಜಿಸುವ ಸಾಧನವಾಗಿ ಜಾತಿ ಗಣತಿಯ ಬೇಡಿಕೆಯನ್ನು ನೋಡುತ್ತಾರೆ.

ಇಂದಿರಾ ಹತ್ಯೆಯನ್ನು ನಿರ್ಲಕ್ಷಿಸುವ ಪ್ರಕ್ರಿಯೆ

ಅಕ್ಟೋಬರ್ 31ರ ದಿನವನ್ನು ಪಟೇಲರೊಂದಿಗೆ ಜೋಡಿಸಿ ಈ ಆಚರಣೆ ನಡೆಯಬೇಕೆಂಬ ನಿರ್ಧಾರವೇ ಒಂದು ದೊಡ್ಡ ರಾಜಕೀಯ. ಏಕೆಂದರೆ ದೇಶವನ್ನು ಸುದೀರ್ಘ ಕಾಲ ಆಳಿದ ಪ್ರಧಾನಿ ಇಂದಿರಾಗಾಂಧಿ ಹತ್ಯೆಯಾದ ದಿನ ಅದು. ಅವರ ನಿವಾಸದಲ್ಲಿಯೇ ಸಂಚು ರೂಪಿಸಿ ಹತ್ಯೆ ಮಾಡಲಾಯಿತು. ರಾಜಕೀಯ ಭಿನ್ನಾಭಿಪ್ರಾಯ ಏನೇ ಇರಲಿ, ಯಾರ ತಪ್ಪುಗಳು ಹೇಗೇ ಇರಲಿ, ದೇಶದ ಇತಿಹಾಸ ಬದಲಾಗುವುದಿಲ್ಲ. ಆದರಲ್ಲಿಯೂ ಅತ್ಯುನ್ನತ ಸ್ಥಾನದಲ್ಲಿರುವ ಪ್ರಧಾನಿಯವರ ಹತ್ಯೆಯಾದ ಘಟನೆ ಭಾವೋದ್ರೇಕದೊಂದಿಗೆ ಸಂಬಂಧಿಸಿದೆ. ಅದೇ ದಿನಗಳಲ್ಲಿ ಸಿಖ್ಖರ ಹತ್ಯಾಕಾಂಡವೂ ನಡೆಯಿತು. ಬಿಜೆಪಿಯ ತಂತ್ರಗಳಲ್ಲಿ ಈ ಎರಡನೇ ಅಂಶವನ್ನು ಹೇಳುತ್ತಾ ಪ್ರಧಾನಿ ಇಂದಿರಾ ಹತ್ಯೆಯನ್ನು ನಿರ್ಲಕ್ಷಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದರು. ಎಲ್ಲೋ ಅಮೆರಿಕದಲ್ಲಿ ಕೆನಡಿ ಹತ್ಯೆಯ ಬಗ್ಗೆ ದಶಕಗಳ ಕಾಲ ಮಾತನಾಡುತ್ತಿದ್ದ ಪ್ರಮುಖ ಮಾಧ್ಯಮಗಳು ಕೂಡಾ ಅಂದಿನ ಇತಿಹಾಸವನ್ನು ಸಂಪೂರ್ಣವಾಗಿ ತಳ್ಳಿಹಾಕಿವೆ. ಏಕೆಂದರೆ ಯಾವುದೇ ಪ್ರಮುಖ ಪತ್ರಿಕೆಗಳಲ್ಲಿ ಅಥವಾ ಚಾನೆಲ್‌ನಲ್ಲಿ ಇಂದಿರಾ ಕುರಿತಾದ ಯಾವುದೇ ಲೇಖನಗಳಿಲ್ಲ. ಪ್ರಮುಖ ಪತ್ರಿಕೆಯೊಂದು ಸಿಖ್ಖರ ಮೇಲಿನ ಹತ್ಯಾಕಾಂಡದ ಬಗ್ಗೆ ಮಾತ್ರ ಬರೆದಿದೆ. ಮಾಧ್ಯಮಗಳು ಆಡಳಿತಗಾರರ ಕೈಗೆ ಎಷ್ಟರಮಟ್ಟಿಗೆ ಸಿಕ್ಕಿಬಿದ್ದಿವೆ ಎಂಬುದು ಇದರಿಂದ ತಿಳಿಯುತ್ತದೆ. ಸರ್ದಾರ್ ಪಟೇಲ್ ಹೊಗಳಿಕೆಯಲ್ಲಿ ಆ ಕಾಲದ ಅತ್ಯುನ್ನತ ನಾಯಕ ನೆಹರೂ ಅವರನ್ನು ಮರೆಮಾಡುವುದು ಮೋದಿಯವರ ತಂತ್ರ. ಆದರೆ ಹತ್ಯೆಯಾದ ಪ್ರಮುಖ ನಾಯಕರನ್ನೂ ಪಕ್ಷಗಳು ಕಡೆಗಣಿಸಲು ಆರಂಭಿಸಿದರೆ ಅದು ಇತಿಹಾಸಕ್ಕೆ ಅಪಚಾರ ಮಾಡಿದಂತಾಗುತ್ತದೆ.

ಸಂವಿಧಾನದ ರಕ್ಷಣೆ ಮಾಡುವುದಾಗಿ ಹೇಳುತ್ತಿರುವುದು ವಿಚಿತ್ರವಾಗಿದೆ

ಮೋದಿ ಈ ಸಂದರ್ಭದಲ್ಲಿ ಆಡಿದ ಮಾತುಗಳಲ್ಲಿ ತಲೆಕೆಳಗಾದ ತರ್ಕ ಮತ್ತು ರಾಜಕೀಯ ತಂತ್ರ ಆಘಾತ ಉಂಟುಮಾಡಿದೆ. ದೇಶ ಅಗಾಧವಾಗಿ ಪ್ರಗತಿ ಸಾಧಿಸಿದೆ ಎಂದು ↗

ಬ್ರಿಕ್ಸ್ ದೇಶಗಳ ಕಝಾನ್ ಶೃಂಗಸಭೆ.... ಪುಟ 13 ರಿಂದ

ಕೊರತೆಯ ದೇಶಗಳಿಗಿಂತ ಮಿಗಿಲಾಗಿ, ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶಗಳು ಹೊಂದಾಣಿಕೆ ಮಾಡುವುದು ಡಾಲರ್ ಪಾರಮ್ಯವನ್ನು ತೊಡೆದುಹಾಕುವ ದೃಷ್ಟಿಯಿಂದ ಮಾತ್ರವಲ್ಲ, ವಿಶ್ವದ ಉತ್ಪಾದನೆ ಮತ್ತು ಉದ್ಯೋಗದ ದೃಷ್ಟಿಯಿಂದಲೂ ಅಪೇಕ್ಷಣೀಯವೇ ಮತ್ತು ಅದು ವಿಶ್ವದ ದುಡಿಯುವ ಜನರ ಕಲ್ಯಾಣದಲ್ಲಿ ಪರಿಣಮಿಸುತ್ತದೆ. ವಿದೇಶಿ ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶವು ಹೊಂದಾಣಿಕೆ ಮಾಡಿಕೊಂಡರೆ, ಅದು ಸರಕು ಮತ್ತು ಸೇವೆಗಳ ದೇಶೀಯ ಹೀರಿಕೆಯನ್ನು ವೃದ್ಧಿಸುತ್ತದೆ ಮತ್ತು ಆದರ ಉತ್ಪಾದನೆಯು ಪೂರ್ಣ ಸಾಮರ್ಥ್ಯವನ್ನು ತಲುಪುವುದರಿಂದ ಅದರ ರಫ್ತುಗಳನ್ನು ತಗ್ಗಿಸುತ್ತದೆ. ವಿನಿಮಯ ಕೊರತೆಯ ದೇಶದಲ್ಲಿ, ದೇಶೀಯ ಹೀರಿಕೆಯು ಮೊದಲಿನ ಅದೇ ಮಟ್ಟದಲ್ಲಿ ಇದ್ದರೂ ಸಹ, ಅದರ ಆಮದುಗಳು ಕುಸಿದಿರುವುದರಿಂದ, ಹೆಚ್ಚು ಉತ್ಪಾದನೆ ಮತ್ತು ಉದ್ಯೋಗಗಳನ್ನು ಹೊಂದಿರುತ್ತದೆ. ಆದ್ದರಿಂದ, ಎರಡೂ ದೇಶಗಳನ್ನು ಒಟ್ಟಿಗೆ ತೆಗೆದುಕೊಂಡರೆ, ಒಟ್ಟಾರೆ ಬೇಡಿಕೆಯ ಹೆಚ್ಚಳವು ಹೆಚ್ಚಿನ ಮಟ್ಟದ ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಪರಿಣಮಿಸುತ್ತದೆ. ಮತ್ತು ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶದ ಹೆಚ್ಚಿದ ಹೀರಿಕೆಯು ಅದರ ದುಡಿಯುವ ಜನರಿಂದ ಹೆಚ್ಚು ಬಳಕೆಯ ರೂಪವನ್ನು ಪಡೆದರೆ, ಎರಡೂ ದೇಶಗಳಲ್ಲಿನ ದುಡಿಯುವ ಜನರ ಪ್ರಯೋಜನವು ಇನ್ನೂ ಹೆಚ್ಚಿನದಾಗಿರುತ್ತದೆ: ವಿನಿಮಯ-ಅಧಿಕ ದೇಶದಲ್ಲಿ ಹೆಚ್ಚಿನ ಬಳಕೆಯ ಮೂಲಕ ಮತ್ತು ಕೊರತೆಯ ದೇಶದಲ್ಲಿ ಹೆಚ್ಚು ಉದ್ಯೋಗಗಳ ಮೂಲಕ.

ಇದಕ್ಕೆ ವ್ಯತಿರಿಕ್ತವಾಗಿ, ಕೊರತೆಯ ದೇಶವು ಹೊಂದಾಣಿಕೆಯನ್ನು ಮಾಡಬೇಕಾದರೆ (ಇದು ಈಗ ರೂಢಿಯಲ್ಲಿರುವ ಪದ್ಧತಿ) ಆಗ ಅದರ ದೇಶೀಯ ಹೀರಿಕೆಯು ಇಳಿಕೆಯನ್ನು ಕಾಣಬೇಕಾಗುತ್ತದೆ. ಇದು ಆ ದೇಶದೊಳಗೆ ಒಂದು ಆರ್ಥಿಕ ಹಿಂಜರಿತವನ್ನು ಉಂಟುಮಾಡುತ್ತದೆ. ವಿಶ್ವದ ಒಟ್ಟು ಬೇಡಿಕೆಯ ಒಟ್ಟಾರೆ ಮಟ್ಟವು, ವಿಶ್ವದ ದುಡಿಯುವ ಜನರಿಗೆ ನಷ್ಟವನ್ನುಂಟುಮಾಡಿ, ವಿಶೇಷವಾಗಿ ಕೊರತೆಯ ದೇಶಕ್ಕೆ ನಷ್ಟವನ್ನುಂಟುಮಾಡಿ, ಇಳಿಕೆಯಾಗುತ್ತದೆ. ಹೀಗೆ ಕೊರತೆಯ ದೇಶಗಳ ಹೊಂದಾಣಿಕೆಯ ಮೂಲಕ ಚಾಲ್ತಿ ಖಾತೆಯ ಅಸಮತೋಲನವನ್ನು ತೊಡೆದು ಹಾಕುವ ಕ್ರಮವು ವಿನಿಮಯ-ಅಧಿಕ ದೇಶಗಳ ಹೊಂದಾಣಿಕೆಗಿಂತ ಕೀಳು ಮಟ್ಟದ್ದಾಗಿರುತ್ತದೆ. ಆದರೂ ವಿನಿಮಯ-ಅಧಿಕ ದೇಶಗಳ ಹೊಂದಾಣಿಕೆಯನ್ನು ಜಾರಿಗೆ ತರುವುದು ಹೆಚ್ಚು ಕಷ್ಟಕರವಾಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು.

ಅದರ ಜೊತೆಗೆ, ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶಗಳನ್ನು ಹೊಂದಾಣಿಕೆ ಮಾಡಿಸುವ ಒಂದು ವ್ಯವಸ್ಥೆಯೇ ಇಲ್ಲದೆ ಡಾಲರ್ ಪ್ರಾಬಲ್ಯವನ್ನು ನಿರ್ಮೂಲನೆ ಮಾಡುವುದು ಕರೆನ್ಸಿಯ ಪ್ರಾಬಲ್ಯವನ್ನೇನೂ ಸಂಪೂರ್ಣವಾಗಿ ತೊಡೆದುಹಾಕುವುದಿಲ್ಲ, ಬದಲಾಗಿ ಬೇರೊಂದು ಕರೆನ್ಸಿಯ ಪ್ರಾಬಲ್ಯಕ್ಕೆ ಕಾರಣವಾಗುತ್ತದೆ. ಉದಾಹರಣೆಗೆ, ಬ್ರಿಕ್ಸ್ ದೇಶಗಳು ತಮ್ಮ ನಡುವಿನ ವ್ಯಾಪಾರವನ್ನು ಅವುಗಳು ನಿಗದಿಪಡಿಸಿಕೊಂಡ ವಿನಿಮಯ ದರದಲ್ಲಿ (ಇಲ್ಲದಿದ್ದರೆ ಕರೆನ್ಸಿಯ ಯದ್ವಾ-ತದ್ವಾ ಏರಿಳಿತಗಳು ವ್ಯಾಪಾರದ ವ್ಯವಸ್ಥೆಯನ್ನು ಅಸ್ಥಿರಗೊಳಿಸುತ್ತವೆ) ಮತ್ತು ತಮ್ಮ ರಾಷ್ಟ್ರೀಯ ಕರೆನ್ಸಿಗಳಲ್ಲಿ ಮಾತ್ರವೇ ವ್ಯಾಪಾರ ಮಾಡುತ್ತವೆ ಎಂದು ಊಹಿಸಿಕೊಳ್ಳಿ. ಮತ್ತೊಂದು ದೇಶದೊಂದಿಗಿನ ಹೋಲಿಕೆಯಲ್ಲಿ ಒಂದು ದೇಶವು ತನ್ನ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ನಿರಂತರವಾಗಿ ಹೊಂದಿದ್ದರೆ, ಆಗ, ಒಂದೋ ಅದು ಈ ಕೊರತೆಯನ್ನು ನಿವಾರಿಸಿಕೊಳ್ಳಲು ಪ್ರಸ್ತುತ ರೂಢಿಯಲ್ಲಿರುವಂತೆ, ತನ್ನ ದೇಶೀಯ ಹೀರಿಕೆಯನ್ನು ಕಡಿಮೆ ಮಾಡುತ್ತದೆ, ಅಥವಾ ತನ್ನ ಕರೆನ್ಸಿಯ ವಿರುದ್ಧ ಒತ್ತಡ ಹೆಚ್ಚುವ ತನಕವೂ ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶಕ್ಕೆ ಸಾಲ ಪತ್ರಗಳನ್ನು ಕೊಡುತ್ತಾ ಹೋಗುತ್ತದೆ ಮತ್ತು ಇನ್ನು ಮುಂದೆ ಅದು ನಿಗದಿತ ವಿನಿಮಯ ದರದಲ್ಲಿ ವ್ಯವಹಾರ ಮುಂದುವರೆಸುವುದು ಸಾಧ್ಯವಾಗುವುದಿಲ್ಲ. ತನ್ನ ಕರೆನ್ಸಿಯ ಮೇಲೆ ಉಂಟಾದ ಒತ್ತಡದಿಂದಾಗಿ ನಿಗದಿತ ವಿನಿಮಯ ದರದಲ್ಲಿ ವ್ಯವಹರಿಸಲಾಗದ ದೇಶದ ಸಂದರ್ಭದಲ್ಲಿ, ವಿನಿಮಯವನ್ನು ಅಧಿಕವಾಗಿ ಹೊಂದಿದ ದೇಶಗಳ ಕರೆನ್ಸಿಗಳು ಪ್ರಾಬಲ್ಯವನ್ನು ಪಡೆದುಕೊಳ್ಳುತ್ತವೆ. ಅಂತಾರಾಷ್ಟ್ರೀಯ ವ್ಯಾಪಾರದ ಕರೆನ್ಸಿಯಾಗಿ ಡಾಲರ್‌ಅನ್ನು ಪಲ್ಲಟಗೊಳಿಸುವುದು ನಿಸ್ಸಂದೇಹವಾಗಿಯೂ ಬಹಳ ಅಪೇಕ್ಷಣೀಯವೇ. ಆದರೆ, ಅದನ್ನು ಪಲ್ಲಟಗೊಳಿಸಿ ಬೇರೊಂದು ಕರೆನ್ಸಿಯು ಪ್ರಾಬಲ್ಯ ಪಡೆಯುವುದು ಕರೆನ್ಸಿ ಪ್ರಾಬಲ್ಯದ ನಿರ್ಮೂಲನೆಯಲ್ಲ.

"ಪ್ರಾತಿನಿಧಿಕ' ಬ್ರೆಟನ್ ವುಡ್ಸ್ ಅವಳಿ!

ಕಝಾನ್ ಘೋಷಣೆಯು ಬ್ರೆಟನ್ ವುಡ್ಸ್ ಅವಳಿ ಸಂಸ್ಥೆಗಳನ್ನು ಹೆಚ್ಚು ಪ್ರಾತಿನಿಧಿಕಗೊಳಿಸುವ ಮೂಲಕ ಅವುಗಳ ಆಡಳಿತ ವಿಧಾನವನ್ನು ಬದಲಿಸ ಬಯಸುತ್ತದೆ ಮತ್ತು ಆ ಮೂಲಕ ಜಾಗತಿಕ ದಕ್ಷಿಣದ ದೇಶಗಳಿಗೆ ಅತಿ ಅಗ್ಗವಾಗಿ ಮತ್ತು ಕಡಿಮೆ ಕಟ್ಟುನಿಟ್ಟಾದ "ಷರತ್ತುಗಳೊಂದಿಗೆ" ಹಣಕಾಸು ಲಭ್ಯವಾಗುವಂತೆ ಮಾಡಬಯಸುತ್ತದೆ. ಈ ನಿಟ್ಟಿನಲ್ಲಿ ಬ್ರಿಕ್ಸ್ ಬ್ಯಾಂಕ್ ಕೂಡ ಕೈಜೋಡಿಸಬೇಕಿದೆ. ಇವೆಲ್ಲವೂ ಅತ್ಯಂತ ಶ್ಲಾಘನೀಯವಾಗಿದ್ದರೂ ಸಹ, ಅವು ಜಾಗತಿಕ ದಕ್ಷಿಣದ ದೇಶಗಳ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಹೆಚ್ಚು ಸುಲಭವಾಗಿ ಮತ್ತು ಹೆಚ್ಚು ಅಗ್ಗವಾಗಿ ಹಣಕಾಸು ಲಭಿಸಿದರೂ ಸಹ, ಅದು ಈ ದೇಶಗಳಿಗೆ ತಮ್ಮನ್ನು ತಾವು ನೇಣು ಬಿಗಿದುಕೊಳ್ಳಲು ಲಭಿಸುವ ಹಗ್ಗವನ್ನು ಮಾತ್ರ ಉದ್ದವಾಗಿಸುತ್ತದೆಯೇ ವಿನಃ ನೇಣು ಹಾಕಿಕೊಳ್ಳುವ ಅವರ ಹಣೆಬರಹವನ್ನು ಅಳಿಸಿಹಾಕುವುದಿಲ್ಲ. ಹಣಕಾಸಿನ ಅಗತ್ಯವು ಸಂಪೂರ್ಣವಾಗಿ ಕಣ್ಮರೆಯಾದಾಗ ಮಾತ್ರ ಅವರ ಅದೃಷ್ಟ ಖುಲಾಯಿಸುತ್ತದೆ.

ಹಣಕಾಸನ್ನು ಒದಗಿಸುವ ಅಗತ್ಯವು ಸಂಪೂರ್ಣವಾಗಿ ಕಣ್ಮರೆಯಾಗಬೇಕೆಂದು ಬಯಸುವುದು ಯಾವ ರೀತಿಯಲ್ಲೂ ಕಲ್ಪನಾವಿಹಾರವೇನಲ್ಲ. ಸೋವಿಯತ್ ಒಕ್ಕೂಟದ ದಿನಗಳಲ್ಲಿ, ಭಾರತವೂ ಸೇರಿದಂತೆ ಹಲವಾರು ದೇಶಗಳು ಅದರೊಂದಿಗೆ ವಿನಿಮಯ ದರಗಳನ್ನು ನಿಗದಿಪಡಿಸಿದ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದ್ದವು. ವ್ಯಾಪಾರದಿಂದ ಉಂಟಾದ ಹೆಚ್ಚುವರಿಗಳು ಮತ್ತು ಕೊರತೆಗಳನ್ನು ಒಂದು ಅವಧಿಯಿಂದ ಮುಂದಿನ ಅವಧಿಗೆ ಕೊಂಡೊಯ್ಯಲಾಗುತ್ತಿತ್ತು ಮತ್ತು ಪರಸ್ಪರ ಒಪ್ಪಿಗೆಯ ಸರಕು ಮತ್ತು ಸೇವೆಗಳ ವಿನಿಮಯದ ಮೂಲಕ ಇತ್ಯರ್ಥಗೊಳಿಸಲಾಗುತ್ತಿತ್ತು. "ಹಣಕಾಸು ಒದಗಿಸುವ" ಮೂಲಕ ಅಥವಾ ಪ್ರಾಬಲ್ಯವನ್ನು ಚಲಾಯಿಸುವ ಮೂಲಕ ಅಥವಾ "ಮಿತವ್ಯಯ" ನೀತಿಗಳನ್ನು ಹೇರುವ ಮೂಲಕ ಕೊರತೆಯ ದೇಶದ ಚಟುವಟಿಕೆಯ ಮಟ್ಟವನ್ನು ಕಡಿಮೆ ಮಾಡುವ ಮೂಲಕ ಹೊಂದಾಣಿಕೆ ಮಾಡಿಕೊಳ್ಳುವ ಯಾವುದೇ ನಿರ್ದಿಷ್ಟ ಅಗತ್ಯತೆಯ ಪ್ರಶ್ನೆಯೇ ಇರಲಿಲ್ಲ. ಖಚಿತವಾಗಿ ಹೇಳುವುದಾದರೆ, ಸೋವಿಯತ್ ಒಕ್ಕೂಟವು ಒಂದು ಯೋಜನಾಬದ್ಧ ಅರ್ಥವ್ಯವಸ್ಥೆಯಾಗಿತ್ತು. ಆದುದರಿಂದ ಅಂತಹ ಒಂದು ಏರ್ಪಾಟನ್ನು ಅದು ಕೈಗೊಳ್ಳಬಹುದಿತ್ತು. ಆದರೆ, ಸಾಮ್ರಾಜ್ಯಶಾಹಿ ಪ್ರಾಬಲ್ಯದಿಂದ ಜಾಗತಿಕ ದಕ್ಷಿಣಕ್ಕೆ ನಿಜವಾದ ಒಂದು ಪಾರು ಮಾರ್ಗವನ್ನು ಬ್ರಿಕ್ಸ್ ಒದಗಿಸಬೇಕಾದರೆ, ದಬ್ಬಾಳಿಕೆಯಿಲ್ಲದ ಏರ್ಪಾಟುಗಳನ್ನು ಅದು ರೂಪಿಸಬೇಕಾಗುತ್ತದೆ. ಶೃಂಗಸಭೆಯಲ್ಲಿ ಮಾಡಿದ ಬೊಲಿವಿಯನ್ ಅಧ್ಯಕ್ಷರ ಭಾಷಣವು ಅಂತಹ ಒಂದು ಆಶಯವನ್ನು ಹೊಂದಿತ್ತು.

ಅದೇನೇ ಇರಲಿ, ವಿಶ್ವ ಬಂಡವಾಳಶಾಹಿ ರೂಪಿಸಿರುವ ಈ ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚು ಪ್ರಾತಿನಿಧಿಕವಾಗಿ ಮಾಡಿದರೂ ಸಹ, ಅವುಗಳಲ್ಲಿ ಅಂತರ್ಗತವಾಗಿರುವ ಅಪಾಯವನ್ನು ಕಡೆಗಣಿಸಲಾಗದು. ❍

ತನಗೆ ತಾನೇ ಹೇಳಿಕೊಳ್ಳುತ್ತಿರುವುದು, ಸಂವಿಧಾನದ ರಕ್ಷಕ ಎಂದು ತನ್ನನ್ನು ತಾನು ಹೇಳಿಕೊಂಡ ರೀತಿ ಇದಕ್ಕೆ ಒಂದೆರಡು ಉದಾಹರಣೆ. ದೇಶದಲ್ಲಿ ಸಂವಿಧಾನದ ಮೂಲ ತತ್ವಗಳ ಮೇಲೆ ನಡೆಯುತ್ತಿರುವ ದಾಳಿಯಿಂದ ಇಡೀ ದೇಶವೇ ಆತಂಕಕ್ಕೆ ಒಳಗಾಗಿದೆ. ಕಳೆದ ಚುನಾವಣೆಯಲ್ಲಿ ಜನರು ನೀಡಿದ ತೀರ್ಪಿನಲ್ಲಿಯೇ ಈ ವಿಷಯ ಬಹಿರಂಗವಾಗಿದೆ. 400 ಸೀಟು ಗಳಿಸುತ್ತೇವೆ ಎಂದು ಬಿಜೆಪಿ ಹೇಳುತ್ತಿತ್ತು. ಆದರೆ, ಅದರ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಸೀಟುಗಳನಷ್ಟೇ ಪಡೆಯಲು ಅದಕ್ಕೆ ಸಾಧ್ಯವಾಯಿತು.

ಆ ನಂತರ ಮೋದಿ ಸಂವಿಧಾನ ಗ್ರಂಥವನ್ನು ಹಿಡಿದುಕೊಂಡಿದ್ದಾರೆ. ಇದಕ್ಕೂ ಮೊದಲು ಎರಡು ಬಾರಿ ಗೆದ್ದಾಗ ಇಂತಹ ಷೋ ಇಲ್ಲವಲ್ಲ? ಸಾಂವಿಧಾನಿಕ ರಕ್ಷಣೆ ಕುರಿತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ಕೂಡಾ ಪದೇ ಪದೇ ಪ್ರಸ್ತಾಪಿಸುತ್ತಾ, ವಿಚಾರಣೆಗಳಲ್ಲಿ ಹೇಳಿಕೆ ನೀಡುತ್ತಿರುವುದು ತಿಳಿದೇ ಇದೆ. ಆದರೆ ಅವರ ಹಿಂದಿನ ಭಾಷಣದಲ್ಲಿ ಅವರು ಮಾಡಿದ ವಾದವೇ ವಿಚಿತ್ರವಾಗಿದೆ. ಸಂವಿಧಾನದ ಹೆಸರಿನಲ್ಲಿ ತಮ್ಮ ವಿರುದ್ಧ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ ಎಂಬುದು ಅವರ ಆರೋಪ! 'ಒಂದು ದೇಶ-ಒಂದು ತೆರಿಗೆ-ಒಂದು ಕಾರ್ಡ್' ಎಂಬಂತಹ ಒಂದು ರೂಪ ಕೊಟ್ಟ ನಂತರ ಒಂದೇ ದೇಶ, ಒಂದು ಸಂವಿಧಾನವನ್ನು ಹೊಂದಲು ಪ್ರಮುಖ ಹೆಜ್ಜೆಗಳನ್ನು ಇಟ್ಟಿದ್ದೇವೆ ಎಂದು ಹೊಸ ಹಾಡು ಹಾಡಿದರು. ಕಾಶ್ಮೀರದ 370ನೇ ವಿಧಿಯನ್ನು ರದ್ದುಗೊಳಿಸಿದ್ದಕ್ಕೆ ಸಮರ್ಥನೆ ಇದು. ಕೆಲವು ವಿಶೇಷ ಸಂದರ್ಭಗಳಲ್ಲಿ ಕೆಲವು ರಾಜ್ಯಗಳಿಗೆ ವಿಶೇಷ ನಿಬಂಧನೆಗಳನ್ನು ನೀಡುವುದು ಬೇರೆ ಸಂವಿಧಾನ ಆಗುತ್ತದೆಯೇ? ಇಂದಿಗೂ ಅನೇಕ ರಾಜ್ಯಗಳಿಗೆ ಕೆಲವು ವಿಷಯಗಳಲ್ಲಿ ವಿಶೇಷ ನಿಬಂಧನೆಗಳಿವೆ. 370ರ ರದ್ದತಿ ವಾಸ್ತವವಾಗಿ ಸಂವಿಧಾನದ ಆಶಯಕ್ಕೆ ಧಕ್ಕೆ ತರುವ ನಡೆಯಾಗಿದೆ. ಇತ್ತೀಚೆಗಿನ ಚುನಾವಣೆಯಲ್ಲಿ ಕಾಶ್ಮೀರದ ಜನತೆ ಆ ನಡೆಯನ್ನು ತಿರಸ್ಕರಿಸಿದ್ದಾರೆ. ಸಾಂವಿಧಾನಿಕ ತತ್ವಗಳಾದ ಜಾತ್ಯತೀತತೆ, ಫೆಡರಲಿಸಂ, ಪ್ರಜಾಸತ್ತಾತ್ಮಕ ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಮುಖವಾಗಿವೆ. ಈ ಎಲ್ಲದರ ಮೇಲೆ ದಾಳಿ ಮಾಡಿದ, ಮಾಡುತ್ತಿರುವ ಮೋದಿ ಸಂವಿಧಾನದ ರಕ್ಷಣೆ ಮಾಡುವುದಾಗಿ ಹೇಳುತ್ತಿರುವುದು ವಿಚಿತ್ರವಾಗಿದೆ.

ಕಾಶ್ಮೀರದ ಪರಿಸ್ಥಿತಿ ಎಲ್ಲ ರಾಜ್ಯಗಳಿಗೂ ಸಂದೇಶವೇ?

ಮೋದಿಯವರಿಗೆ ಗಟ್ಟಿತನ ಹೆಚ್ಚು ಎನಿಸಿದರೂ, ಜನರ ಬುದ್ಧಿವಂತಿಕೆಯನ್ನು ಮತ್ತಷ್ಟು ಕಡಿಮೆ ಅಂದಾಜು ಮಾಡುವುದು ಸರಿಯಲ್ಲ. ಇರುವ ಒಂದು ಸಂವಿಧಾನದ ಆಶಯವನ್ನು ಭಂಗ ಮಾಡುವ ಮಹತ್ಕಾರ್ಯದಲ್ಲಿ ಅವರು 370ರ ರದ್ದತಿಯ ನಂತರ ದೇಶದ ಎಲ್ಲಾ ರಾಜ್ಯಗಳಿಗೆ ಸಂದೇಶವನ್ನು ಕಳುಹಿಸಿದ್ದು ಕಾಕತಾಳೀಯವಲ್ಲ. ಈ ರಾಷ್ಟ್ರೀಯ ಏಕತಾ ಭಾಷಣದಲ್ಲಿ 'ಒಂದು ರಾಷ್ಟ್ರ-ಒಂದು ಚುನಾವಣೆ' ಮಂತ್ರೋಚ್ಚಾರಣೆಯ ರಹಸ್ಯ ಅದೇ ಆಗಿದೆ. ಉಳಿದ ರಾಜ್ಯಗಳಿಗೂ ಅದೇ ಗತಿ ತಂದಿಡುತ್ತೇನೆ ಎಂಬುದು ಅವರ ಸಂದೇಶ, ಸಂಕೇತ ಕೂಡಾ. ಏಕೆಂದರೆ ಸಂವಿಧಾನದ ಎರಡನೇ ವಿಧಿಯು ದೇಶವನ್ನು ರಾಜ್ಯಗಳ ಒಕ್ಕೂಟ (ಯೂನಿಯನ್ ಆಫ್ ಸ್ಟೇಟ್ಸ್) ಎಂದು ವ್ಯಾಖ್ಯಾನಿಸುತ್ತದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿರುವಂತೆ, ಹಿಂದಿನ ಸೋವಿಯತ್ ಒಕ್ಕೂಟದಲ್ಲಿದ್ದಂತೆ ಭಾರತದ ರಾಜ್ಯಗಳು ಪ್ರತ್ಯೇಕ ಸಂವಿಧಾನಗಳನ್ನು ಹೊಂದಿಲ್ಲದಿದ್ದರೂ ಸಹ ಸ್ವಾಯತ್ತತೆಯನ್ನು ಹೊಂದಿರಬೇಕು ಎಂದು ಸಂವಿಧಾನವು ಸ್ಪಷ್ಟವಾಗಿ ಹೇಳುತ್ತದೆ. ಆದರೆ 'ಒಂದು ದೇಶ-ಒಂದು ಕಾರ್ಡ್-ಒಂದು ತೆರಿಗೆ-ಒಂದು ಪಡಿತರ-ಒಂದು ಧರ್ಮ-ಒಂದು ಪಕ್ಷ-ಒಂದು ನಾಯಕ' ಎಂದು ಹುಚ್ಚೆದ್ದು ಕುಣಿಯುತ್ತಿರುವ ಮೋದಿಜಿ, ಒಂದು ಚುನಾವಣೆಯಾದರೆ ಮಾತ್ರ ಒಂದು ದೇಶ ಎನ್ನುತ್ತಾರೆ. ಇದು ಅಕ್ಷರಶಃ RSS-ಶೈಲಿಯ ಕೇಂದ್ರೀಕೃತ ಕೃಷಿಯನ್ನು, ಕಾರ್ಪೊರೇಟ್-ಶೈಲಿಯ ಏಕ ಮಾರುಕಟ್ಟೆ ತಂತ್ರದೊಂದಿಗೆ ಸಂಯೋಜಿಸುವ ಪಾಂಡಿತ್ಯವಾಗಿದೆ.

'ಒಂದು ರಾಷ್ಟ್ರ-ಒಂದು ಚುನಾವಣೆ'

ಕೇಂದ್ರದ ಮೋದಿ ಸರ್ಕಾರವು ಮುಂದಿಡುತ್ತಿರುವ 'ಒಂದು ರಾಷ್ಟ್ರ-ಒಂದು ಚುನಾವಣೆ' ಒಲವು ಸಂವಿಧಾನದ ಆಶಯವನ್ನು ಸಂಪೂರ್ಣವಾಗಿ ನಿರಾಕರಿಸುವ ಕೇಂದ್ರೀಕೃತ ಡ್ರೈವ್‌ಗೆ ದಾರಿ ಮಾಡಿಕೊಡುತ್ತದೆ. ಇದು ಫೆಡರಲಿಸಂ, ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಮಗ್ರತೆಯ ತತ್ವಗಳನ್ನು ದುರ್ಬಲಗೊಳಿಸುತ್ತದೆ. ಸಂವಿಧಾನದ 83 ಮತ್ತು 85ನೇ ವಿಧಿಗಳು ಲೋಕಸಭೆಗೆ ಮತ್ತು 172, 174ನೇ ವಿಧಿಗಳು ಶಾಸನ ಸಭೆಗೆ ಸಂವಿಧಾನದ ಅಂತ್ಯದಂತಹ ವಿಷಯಗಳಲ್ಲಿ ನಿರ್ದೇಶನವನ್ನು ನೀಡುತ್ತವೆ. 356ನೇ ವಿಧಿಯು ಶಾಸಕಾಂಗಗಳನ್ನು ವಿಸರ್ಜಿಸಲು ಉದ್ದೇಶಿಸಲಾಗಿದೆ. ಸಂವಿಧಾನ ರಚನೆಕಾರರು ದೂರದೃಷ್ಟಿ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆಯಿಂದ ಈ ನಿರ್ದೇಶನ ನೀಡಿದ್ದಾರೆ. ಅನುಭವದಲ್ಲಿ ಅನೇಕ ಪಾಠಗಳಿವೆ. ಜನರ ತೀರ್ಪಿನಿಂದ ಅವರು ಪ್ರತಿನಿಧಿಸಲ್ಪಡಬೇಕು ಎಂಬುದು ಜನರ ಸಂವಿಧಾನದ ಮೂಲಭೂತ ತತ್ವವಾಗಿದೆ. ಎರಡು ವಿಧಾನಸಭಾ ಸಭೆಗಳ ನಡುವೆ ಆರು ತಿಂಗಳಿಗಿಂತ ಹೆಚ್ಚು ಅವಧಿ ಇರಬಾರದು ಎಂಬ ಪ್ರಮುಖ ತತ್ವದಡಿ ಈಗ ಚುನಾವಣೆ ನಡೆಯುತ್ತಿದೆ, ಆದರೆ ಐದು ವರ್ಷಗಳ ಅವಧಿ ಇರಬೇಕು ಎಂಬ ಷರತ್ತು ಇಲ್ಲ. ಆ ಸ್ಫೂರ್ತಿಯನ್ನು ಹಾಳುಮಾಡುವ ವಾದಗಳು ಮೇಲೆ ಎಷ್ಟೇ ಆಕರ್ಷಕವಾಗಿ ಧ್ವನಿಸಿದರೂ ಅದು ದುರುದ್ದೇಶಪೂರಿತವಾಗಿದೆ.

ಇದನ್ನು ಪ್ರಶ್ನಿಸುವ, ಜನರ ನಡುವೆ ಕೊಂಡೊಯ್ದು, ಫೆಡರಲಿಸಂ, ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಮಗ್ರತೆಯ ತತ್ವಗಳನ್ನು ರಕ್ಷಿಸಲು ಮುಂದಾಗಿರುವವರನ್ನು 'ಸಾಂಸ್ಕೃತಿಕ ಮಾರ್ಕ್ಸ್‌ವಾದಿ'ಗಳು ದೇಶದ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಾರೆ, ಜನರಲ್ಲಿ ಅಸಮಾಧಾನವನ್ನು ಬೆಳೆಸುತ್ತಾರೆ, ಇದರಿಂದ ಸಮಾಜದಲ್ಲಿ ನೇರ ಘರ್ಷಣೆಗಳು ಸೃಷ್ಟಿಯಾಗುತ್ತವೆ ಮತ್ತು ವ್ಯವಸ್ಥೆ, ಕಾನೂನು ಮತ್ತು ಆಡಳಿತದ ಮೇಲಿನ ಅಪನಂಬಿಕೆಯ ಮೂಲಕ ಅರಾಜಕತೆ ಮತ್ತು ಭಯದ ವಾತಾವರಣವನ್ನು ತೀವ್ರಗೊಳಿಸಲಾಗುತ್ತದೆ" ಎಂದು ಹೇಳಿ ಜನರಲ್ಲಿ ದ್ವೇಷ ಬಿತ್ತುವ ಪ್ರಯತ್ನ ಮಾಡತೊಡಗಿದ್ದಾರೆ. ಆದರೆ, ಜನರು ಸಂಘಪರಿವಾರದ ಇಂತಹ ಮಾತುಗಳನ್ನು ನಂಬುವುದಿಲ್ಲ ಎಂಬುದನ್ನು ಕಳೆದ ಚುನಾವಣೆಯ ಫಲಿತಾಂಶ ತೋರಿಸಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 18-24, 2024 Price: Rs. 10/- Date of Publication: 15 November 2024 RNI No. KARKAN /2006/17926 Posted on 20-11-2024
Posted at BG PSO, BG - 560026 **Posted at Periodical Rate -** Rs. 2

ಚನ್ನಪಟ್ಟಣ: ಅಕ್ರಮಗಳ ಜೊತೆಗೆ ಹಣದ 'ಚೆಲ್ಲಾಟ'!!



ವಿಜಯ್ ಕುಮಾರ್ ಟಿ.ಎಸ್.

ಚುನಾವಣೆಗಳಲ್ಲಿ ಗೆಲ್ಲುವುದಕ್ಕಾಗಿ ಬಂಡವಾಳಶಾಹಿ ರಾಜಕೀಯ ಪಕ್ಷಗಳು, ಜಾತಿ–ಮತ, ಹಣ–ಹೆಂಡ, ಮುಂತಾಗಿ ಯಾವುದನ್ನೂ ಬಳಸಲು ಹೇಸುವುದಿಲ್ಲ ಎಂಬುದು ಜನರ ಜೀವನಾನುಭವ. ಚನ್ನಪಟ್ಟಣ ವಿಧಾನ ಸಭಾ ಉಪ ಚುನಾವಣೆಯಲ್ಲಿ ಜಾತಿ–ಮತ, ಹಣ–ಹೆಂಡ ಎಲ್ಲವೂ ಬಳಕೆಯಾಗಿವೆ. ಈ ಬಾರಿಯ 'ವಿಶೇಷ' ಎಂದರೆ ಎಗ್ಗಿಲ್ಲದ–ಅತಿರೇಕದ ಹಣ ಬಲದ ಪ್ರದರ್ಶನ. ಕ್ಷೇತ್ರದಲ್ಲಿನ ಪರಿಸ್ಥಿತಿಯನ್ನು ಖುದ್ದು ಕಂಡಿರುವ ವಿದ್ಯಾರ್ಥಿ ನಾಯಕ ವಿಜಯ್ ಕುಮಾರ್ ಟಿ.ಎಸ್. ಅವರು ತಾವು ಕಂಡದ್ದನ್ನು ಇಲ್ಲಿ ವಿವರಿಸಿದ್ದಾರೆ.

ಚುನಾವಣೆಗಳನ್ನು 'ಪ್ರಜಾಪ್ರಭುತ್ವದ ಹಬ್ಬ' ಎಂದು ಹೇಳುತ್ತೇವೆ. ಆದರೆ ನವೆಂಬರ್ 13, 2024 ರಂದು ನಡೆದ ಚನ್ನಪಟ್ಟಣ ಉಪಚುನಾವಣೆಯು ಪ್ರಜಾಪ್ರಭುತ್ವ ಹಬ್ಬ ಎಂಬ ಬದಲು 'ಪ್ರಜಾಪ್ರಭುತ್ವದ ಕಗ್ಗೊಲೆ' ಎಂಬಂತೆ ನಡೆದಿದೆ. ಜಾತಿ–ಮತ–ಮದ್ಯಗಳ ದುರ್ಬಳಕೆ ಪ್ರಯತ್ನಗಳ ಜೊತೆಗೆ ಕರ್ನಾಟಕದಲ್ಲಿ ನಡೆದ ಚುನಾವಣೆಗಳಲ್ಲಿ ಅತಿ ಭ್ರಷ್ಟ ಚುನಾವಣೆ, ಅತ್ಯಂತ ದುಬಾರಿ ಚುನಾವಣೆ ಇದಾಗಿದೆ. 'ರಣ ಕಣ'ವಾಗಿ ಕಾಣಿಸುತ್ತಿದ್ದ ಚನ್ನಪಟ್ಟಣ ಉಪ ಚುನಾವಣೆ 'ಹಣ ಕಣ'ವಾಗಿ ಮಾರ್ಪಾಟಾಗಿದ್ದು ಪ್ರಜಾಪ್ರಭುತ್ವದ ದುರಂತ.

ಜಾತಿ–ಮತಗಳ ದುರ್ಬಳಕೆ

ಭಾರತೀಯ ಜನತಾ ಪಕ್ಷದಲ್ಲಿದ್ದು ಚುನಾವಣೆ ಸಮೀಪಿಸಿದಾಗ ಅದನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಬಂದು ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಯಾದವರು ಸಿ.ಪಿ.ಯೋಗೇಶ್ವರ್. ಇನ್ನು ಎನ್.ಡಿ.ಎ. ಕೂಟದ ಪರವಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೊಮ್ಮಗ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರ ಸ್ವಾಮಿಯವರ ಮಗ ನಿಖಿಲ್ ಕುಮಾರ ಸ್ವಾಮಿ ಜೆಡಿ(ಎಸ್) ಅಭ್ಯರ್ಥಿ. ಚನ್ನಪಟ್ಟಣ ಕ್ಷೇತ್ರ ಒಕ್ಕಲಿಗ ಸಮುದಾಯದ ಪ್ರಾಬಲ್ಯ ಇರುವ ಒಂದು ಕ್ಷೇತ್ರ. ಜಾತಿ ಹಿನ್ನೆಲೆಯಿಂದ ಕಾಂಗ್ರೆಸ್–ಎನ್.ಡಿ.ಎ. ಅಭ್ಯರ್ಥಿಗಳಿಬ್ಬರೂ ಒಕ್ಕಲಿಗರಾದರೂ ಎಂದಿನಂತೆ ದೇವೇಗೌಡರ ಕುಟುಂಬವು ಇಲ್ಲಿ ತಾವೇ ನಿಜವಾದ ಒಕ್ಕಲಿಗರ ಪ್ರತಿನಿಧಿಗಳು ಎಂಬಂತೆ 'ಏಕಸ್ವಾಮ್ಯ' ಪ್ರತಿಷ್ಠಾಪಿಸಲು ಪ್ರಯತ್ನಿಸಿದ್ದಾರೆ. ಚುನಾವಣೆಯ ಕೊನೆ ಹಂತದಲ್ಲಿ ಕುಮಾರ ಸ್ವಾಮಿಯವರ ಮೈಬಣ್ಣದ ಕುರಿತು ಜಮೀರ್ ಅಹಮದ್ ಆಡಿದ ಆಕ್ಷೇಪಾರ್ಹ ಮಾತನ್ನು ಒಕ್ಕಲಿಗರ ವಿರುದ್ಧದ ಟೀಕೆ ಎಂಬಂತೆ ಬಿಂಬಿಸಿ ಜೆಡಿ(ಎಸ್) ಸಾಕಷ್ಟು ಲಾಭ ಮಾಡಿಕೊಂಡಿದೆ. ಜೆಡಿ(ಎಸ್)ನ ಫೇಸ್ ಬುಕ್ ಪೇಜ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರ ಕುರಿತು ಮಾಡಲಾದ ಆಕ್ಷೇಪಾರ್ಹ ಟೀಕೆಯನ್ನು ತೋರಿಸಿ ಇದು ಒಕ್ಕಲಿಗ ನಾಯಕರ ನಿಂದನೆ ಎಂದು ಕಾಂಗ್ರೆಸ್ ಪ್ರಚಾರ ನಡೆಸಿತಾದರೂ ಅದರಿಂದ ಹೆಚ್ಚಿನ ಪ್ರಯೋಜನ ಆದಂತೆ ಕಾಣುವುದಿಲ್ಲ.

ಸದಾ ಮುಸ್ಲಿಮ್ ದ್ವೇಷದ ಬೆಂಕಿ ಉಗುಳುವ ಬಿಜೆಪಿಯ ಮೈತ್ರಿಕೂಟಕ್ಕೆ ಸೇರಿದಾಗಿನಿಂದ ಬಿಜೆಪಿಯ ದ್ವೇಷಭಾಷಣ, ಪ್ರಚಾರ–ವಿಚಾರಗಳಿಗೆ ಆಕ್ಷೇಪ ಎತ್ತದೆ ಪ್ರತ್ಯಕ್ಷ–ಪರೋಕ್ಷ ಬೆಂಬಲವನ್ನೇ ಕೊಡುತ್ತಾ ಬಂದಿರುವ ಜೆಡಿ(ಎಸ್)ನ ನಾಯಕರಾದ ಎಚ್.ಡಿ. ದೇವೇಗೌಡ ಅವರು, ಕುಮಾರ ಸ್ವಾಮಿಯವರು ಚನ್ನಪಟ್ಟಣದಲ್ಲಿ ಎದ್ದು ಕಾಣುವಂತಹ ರೀತಿಯಲ್ಲಿ ಕೋಮುವಾದಿ ಪ್ರಚಾರಗಳನ್ನು ನಡೆಸಿರುವುದು ಕಂಡು ಬರಲಿಲ್ಲ. ಬದಲಿಗೆ ಮುಸ್ಲಿಮ್ ಮತಗಳು ಕೈತಪ್ಪಬಹುದು ಎಂಬ ಆತಂಕದಲ್ಲಿ ಬಹಿರಂಗ ಪ್ರಚಾರ ಅಲ್ಲದೇ, ಮುಸ್ಲಿಂ ಸಮುದಾಯದ ಗಣ್ಯರೊಂದಿಗೆ ಹಲವಾರು ಸುತ್ತಿನ ರಹಸ್ಯ ಸಭೆಗಳನ್ನು ನಡೆಸಿರುವ ವರದಿಗಳಿವೆ. ಕಾಂಗ್ರೆಸ್ ಸಹ ಮುಸ್ಲಿಂ ಮತಗಳು ಸೇರಿದಂತೆ ಅಹಿಂದ ಮತದಾರರನು ಸೆಳೆಯುವುದರ ಜೊತೆಗೆ ಒಕ್ಕಲಿಗರ ಮತಗಳಲ್ಲಿ ಗರಿಷ್ಟ ಮತಗಳನ್ನು ಪಡೆಯುವ ಪ್ರಯತ್ನ ಮಾಡಿದೆ. ಆದರೆ ಈ ನಿಟ್ಟಿನಲ್ಲಿ ಈ ಬಾರಿ ಅತಿರೇಕವನ್ನು ಮುಟ್ಟಿರುವ ಚುನಾವಣಾ ಅಕ್ರಮ ಎಂದರೆ ಇವ್ವರೂ ಅಭ್ಯರ್ಥಿಗಳ ಪರವಾಗಿ ಗೆಲ್ಲಲೇ ಬೇಕೆಂಬ ಉಮೇದಿನಲ್ಲಿ ಹಣವನ್ನು ಚೆಲ್ಲಿರುವುದು.

ಆಮಿಷವೋ ಆಮಿಷ

ಚುನಾವಣಾ ದಿನಾಂಕ ಘೋಷಣೆಯಾದ ತಕ್ಷಣದಿಂದಲೇ ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾಗಿತ್ತು. ಚುನಾವಣೆ ಘೋಷಣೆಯಾದ ಮರು ದಿನವೇ ಕಾಂಗ್ರೆಸ್ ಅಭ್ಯರ್ಥಿ ಸಭೆ ನಡೆಸಿದರು. ಆ ಸಭೆಯಲ್ಲಿ ಸಾವಿರಾರು ಕೆ.ಜಿ.ಯ ಮಾಂಸಾಹಾರವನ್ನು ತಯಾರು ಮಾಡಲಾಗಿತ್ತು. ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಸಸ್ಯಾಹಾರ ಒದಗಿಸುವಂತೆ ಮಾಂಸಾಹಾರ ಒದಗಿಸುವುದು ಅಪರಾಧವಲ್ಲವಾದರೂ, ಸಾವಿರಾರು ಜನರಿಗೆ ಮಾಂಸಾಹಾರ ಒದಗಿಸುವಾಗ ಈ ಖರ್ಚನ್ನು ಯಾರು, ಹೇಗೆ ಭರಿಸುತ್ತಾರೆ ಎಂಬ ಪ್ರಶ್ನೆ ಏಳುತ್ತದೆ. ಚುನಾವಣೆಯ ಚುನಾವಣಾ ಆಯೋಗದ ಅಧಿಕಾರಿಗಳು ಆ ಸ್ಥಳಕ್ಕೆ ತೆರಳಿ ನೆಲದಲ್ಲಿ ಗುಂಡಿ ತೋಡಿಸಿ ಬಡಿಸಲು ತಯಾರಾಗಿದ್ದ ಮಾಂಸಾಹಾರವನ್ನು ಗುಂಡಿಯಲ್ಲಿ ಹಾಕಿ ಮುಚ್ಚಲಾಯಿತು. ಒಂದು ಕಡೆ ಜನರಿಗೆ ಆಮಿಷ ಒಡ್ಡುವ ಚುನಾವಣಾ ಅಕ್ರಮಕ್ಕೆ ತಡೆ ಬಿತ್ತು ಎಂದು ಸಂತಸವಾದರೂ, ಮತ್ತೊಂದು ಕಡೆ ಎಷ್ಟೊಂದು ಪೌಷ್ಟಿಕ ಆಹಾರ ಪೋಲಾಯಿತು ಎಂಬ ಸಂಕಟ!!. ಹಾಗೆ ಹಲವು ಕಡೆ ಹಣವನ್ನು ಚುನಾವಣಾ ಆಯೋಗವು ದಾಖಲೆ–ಲೆಕ್ಕಪತ್ರವಿಲ್ಲದ ಹಣವನ್ನು ಜಪ್ತಿಯನ್ನು ಮಾಡಿತ್ತು. ಆದರೆ ಕ್ರಮೇಣ ಚನ್ನಪಟ್ಟಣದಲ್ಲಿ ನಡೆಯುತ್ತಿದ್ದ ಉಪ ಚುನಾವಣೆಗೂ ಚುನಾವಣಾ ಆಯೋಗಕ್ಕೂ ಯಾವುದೇ ಸಂಬಂಧ ಇಲ್ಲವೆಂಬಂತೆ ಆಯೋಗವು ಕಣ್ಣು ಮುಚ್ಚಿಕೊಂಡಿತು ಎಂಬುದು ವಿಪರ್ಯಾಸ. ಒಟ್ಟಾರೆಯಾಗಿ ಚುನಾವಣಾ ಆಯೋಗ ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಲೆಕ್ಕಕ್ಕೆ ಉಂಟು ಆಟಕ್ಕೆ ಇಲ್ಲದಂತೆ ಇದ್ದದ್ದನ್ನು ನಾವು ಕಂಡೆವು. ಉಪ ಚುನಾವಣೆಯಲ್ಲಿ ಅಕ್ರಮವನ್ನು ತಡೆಯಲು ಚುನಾವಣಾ ಆಯೋಗವು ದಯನೀಯವಾಗಿ ವಿಫಲವಾಗಿದೆ.

ಉಪ ಚುನಾವಣೆಯ ಕೊನೆಯ ದಿನ ಚನ್ನಪಟ್ಟಣದ ಚಿತ್ರಣವೇ ಬದಲಾಗಿ ಹೋಗಿತ್ತು. ಎಷ್ಟರ ಮಟ್ಟಿಗೆ ಎಂದರೆ ದೇಶ ಅತಿ ದುಬಾರಿ ವಿಧಾನಸಭಾ ಚುನಾವಣೆ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅತಿ ಭ್ರಷ್ಟ ಚುನಾವಣೆ ಎನ್ನಬಹುದಾದ ಚುನಾವಣೆ ಇದಾಗಿದ್ದು ಈ ವಿಷಯ ಕ್ಷೇತ್ರದ ಹೊರಗಿನ ಜನರಿಗೆ ವ್ಯಾಪಕವಾಗಿ ತಿಳಿಯುವ ಮೊದಲೇ ಚುನಾವಣೆಯಲ್ಲಿ ಅಕ್ರಮ ನಡೆದು ಚುನಾವಣೆ ಮುಗಿದು ಹೋಗಿತ್ತು.

ಅಗಾಧ ಅಕ್ರಮ; ಅದರಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಪಾಲು

ಉಪ ಚುನಾವಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ತನ್ನ ಅಧಿಕಾರವನ್ನು ದುರುಪಯೋಗ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಗೃಹ ಲಕ್ಷ್ಮಿ ಯೋಜನೆಯಲ್ಲಿ ಮಹಿಳೆಯರಿಗೆ ನೀಡುವ ಮಾಸಿಕ 2,000 ರೂಪಾಯಿ ಹಣವನ್ನು ಚುನಾವಣೆಯ ಒಂದು ವಾರದ ಹಿಂದೆಯೇ ಫಲಾನುಭವಿಗಳ ಖಾತೆಗೆ ಹಾಕಲಾಗಿತ್ತು. ಆದರೆ ಚನ್ನಪಟ್ಟಣದ ಫಲಾನುಭವಿಗಳ ಖಾತೆಗೆ ಚುನಾವಣೆಯ ಹಿಂದಿನ ದಿನ ಮತ್ತೆ 2,000 ರೂಪಾಯಿಗಳನ್ನು ಹಾಕಲಾಗಿದೆ. ಇದು ಭ್ರಷ್ಟಾಚಾರ ಅಲ್ಲದಿದ್ದರೂ ಸಹ ಅಸಹಜವಾದ ರೀತಿಯ ಅಕಾಲಿಕ ಹಣ ಪಾವತಿ. ಇದಲ್ಲದೇ ಚುನಾವಣೆಗೆ ವಾರಕ್ಕೆ ಮುಂಚೆ ಒಂದು ಮನೆಗೆ 1,000 ರೂ.ನಂತೆ ಮನೆಯ ಖರ್ಚಿಗೆ ಎಂದು ಹಂಚಿದ್ದಾರೆ. ಚುನಾವಣಾ ಹಿಂದಿನ ದಿನ ಒಂದು ಮತಕ್ಕೆ ಕಾಂಗ್ರೆಸ್ ಅಭ್ಯರ್ಥಿಯು 3,500 ರೂ.ನಿಂದ 5,000 ರೂ. ತನಕ ಹಂಚಿದ್ದಾರೆ.

ಎನ್.ಡಿ.ಎ. ಅಭ್ಯರ್ಥಿಯ ಅಕ್ರಮ

ಈ ಚುನಾವಣೆಯಲ್ಲಿ ಎನ್.ಡಿ.ಎ. ಮೈತ್ರಿ ಕೂಟದ ಅಭ್ಯರ್ಥಿಯು ಕಾಂಗ್ರೆಸ್‌ಗಿಂತ ಒಂದು ಕೈ ಮೇಲು ಎಂದು ಹೇಳಬಹುದು. ಯಾಕೆಂದರೆ ಕಾಂಗ್ರೆಸ್ ಅಭ್ಯರ್ಥಿ ಹಂಚಿದ ಮೊತ್ತಕ್ಕೆ 500 ರೂ. ಸೇರಿಸಿ ಅವರಿಗಿಂತ ಹೆಚ್ಚಿಗೆ ಅನ್ನುವಂತೆ ಹಂಚಿದ್ದಾರೆ. ಅಂದರೆ 4,000 ರೂ.ನಿಂದ 6,000 ರೂ. ತನಕ ಹಣ ಹಂಚಿದ್ದಾರೆ. ಜೊತೆಗೆ ಇವರು ಸಹ ಒಂದು ವಾರದ ಹಿಂದೆ ಒಂದು ಮನೆಗೆ 1,000 ರೂ.ವನ್ನು ಮನೆಯ ಖರ್ಚಿಗೆ ಎಂದು ಹಂಚಿದ್ದಾರೆ. ಜೊತೆಗೆ ಬೆಳ್ಳಿಯ ನಾಣ್ಯ, ಬೆಳ್ಳಿಯ ಬಟ್ಟಲು, ಬೆಳ್ಳಿಯ ಲೋಟ ಮತ್ತು ಬೆಳ್ಳಿಯ ದೀಪವನ್ನು ಸಹ ಹಂಚಿದ್ದಾರೆ.

ಎಷ್ಟು ಕೋಟಿ ಖರ್ಚು ಮಾಡಿರಬಹುದು?

ಚನ್ನಪಟ್ಟಣ ವಿಧಾನಸಭಾ ಕೇತ್ರದಲ್ಲಿ ಸುಮಾರು 2,32,000 ಮತದಾರರು ಇದ್ದಾರೆ. ಅಧಿಕಾರದ ರುಚಿ ಕಂಡಿರುವ ಈ ಬಂಡವಾಳಶಾಹಿ ಪಕ್ಷಗಳು ಸಾಮಾನ್ಯವಾಗಿ ಚುನಾವಣೆಗಳಲ್ಲಿ ಶೇ.80 ರಿಂದ 85 ಶೇಕಡಾ ಮತದಾರರಿಗೆ ಹಣ ಹಂಚಿಕೆ ಮಾಡುತ್ತಾರೆ ಎಂಬ ಅಂದಾಜಿದೆ. ಅಂದರೆ ಸುಮಾರು 2 ಲಕ್ಷ ಮತದಾರರಿಗೆ 4,000 ಸಾವಿರ ಎಂದರೆ ಒಬ್ಬ ಅಭ್ಯರ್ಥಿ 80 ಕೋಟಿ ಹಣವನ್ನು ಹಂಚಿದ್ದಾರೆ. ಒಟ್ಟು ಇಬ್ಬರು ಅಭ್ಯರ್ಥಿಯಿಂದ 160 ಕೋಟಿ ಹಣ ಹಂಚಿಕೆಯಾಗಿದೆ. ಚನ್ನಪಟ್ಟಣದಲ್ಲಿ ಸುಮಾರು 46 ಸಾವಿರ ಕುಟುಂಬಗಳಿವೆ. ಮನೆ ಖರ್ಚಿಗೆಂದು ಕೊಟ್ಟ ಹಣವನ್ನೂ ಸೇರಿಸಿ ಲೆಕ್ಕ ಹಾಕಿದರೆ ಒಟ್ಟು ಎರಡೂ ಪಕ್ಷಗಳಿಂದ 10 ಕೋಟಿ ಹಣ ಹಂಚಲಾಗಿದೆ. ಹಣದ ರೂಪದಲ್ಲೇ ಸರಿ ಸುಮಾರು 170 ಕೋಟಿಯಿಂದ 200 ಕೋಟಿ ತನಕ ಹಂಚಿದ್ದಾರೆ. ಇನ್ನು ಬೆಳ್ಳಿ ನಾಣ್ಯ, ಬೆಳ್ಳಿ ಪದಾರ್ಥ ಇತರೆ ಎಂದು ಎಷ್ಟು ಖರ್ಚು ಮಾಡಿರಬಹುದು. ಸಭೆಗಳು/ಬಹಿರಂಗ ಸಭೆಯ ಹೆಸರಿನಲ್ಲಿ ಎಷ್ಟು ಖರ್ಚು ಮಾಡಿರಬಹುದು!! ನೀವೇ ಲೆಕ್ಕ ಹಾಕಿ.

ಖರ್ಚು ಮಾಡಿದ ಹಣ ಯಾರದು?

ಈ ಇಬ್ಬರು ಅಭ್ಯರ್ಥಿಗಳು ಒಂದು ವಿಧಾನ ಸಭಾ ಉಪ ಚುನಾವಣೆಗೆ ಸುಮಾರು 250 ರಿಂದ 300 ಖರ್ಚು ಮಾಡಿದ್ದಾರೆ!! ಇವರು ಚುನಾವಣಾ ಆಯೋಗಕ್ಕೆ ಚುನಾವಣೆಗೆ ಖರ್ಚು ಮಾಡಿರುವ ಹಣದ ನಿಜವಾದ ಲೆಕ್ಕ ಕೊಡುವರೇ?

ಇವರಿಗೆ ಇಷ್ಟು ಕೋಟಿ ಹಣ ಎಲ್ಲಿಂದ ಬಂತು. ಇದು ಬಡವರ, ರೈತ–ಕಾರ್ಮಿಕರ, ದುಡಿಯುವ ಜನರ ಬೆವರಿನ ಪಾಲನ್ನು ಕೊಳ್ಳೆ ಹೊಡೆದು, ಭ್ರಷ್ಟಾಚಾರ ಮಾಡಿ ಗಳಿಸಿದ ಹಣವಲ್ಲವೇ?

ಪ್ರಜಾಪ್ರಭುತ್ವದ ಸೋಲು

ಚುನಾವಣೆಯಲ್ಲಿ ಅಕ್ರಮ ನಡೆದಿರುವುದು ಸ್ಪಷ್ಟವಾಗಿದೆ. ಅಕ್ರಮಗಳ ಬಗ್ಗೆ ಸೂಕ್ತ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಅಕ್ರಮಗಳನ್ನು ತಡೆಯುವಲ್ಲಿ ವಿಫಲವಾದ ಚುನಾವಣಾ ಆಯೋಗದ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯೂ ವಿಮರ್ಶೆಗೆ ಒಳಪಡಬೇಕು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ, ಎಲ್ಲರನ್ನೂ ಒಳಗೊಳ್ಳುವ ದೃಷ್ಟಿಯಿಂದ ಸಾಮಾಜಿಕ ಹಿನ್ನೆಲೆ–ಜಾತಿಗಳನ್ನು ಪರಿಗಣಿಸುವುದು ಬೇರೆ, ಜಾತಿಯ ಸಂಕುಚಿತ ಭಾವನೆಗಳನ್ನು ಬಳಸಿ ರಾಜಕೀಯ ಲಾಭ ಮಾಡಿಕೊಳ್ಳಲು ಪ್ರಯತ್ನಿಸುವುದು ಬೇರೆ. ಹೀಗಾಗಿ ಜಾತಿ–ಮತಗಳನ್ನು ದುರ್ಬಳಕೆ ಮಾಡಿಕೊಂಡು, ಹಣ ಚೆಲ್ಲಿ ಚುನಾವಣೆ ಗೆಲ್ಲುವ ಪಾಳೆಗಾರಿ–ಬಂಡವಾಳಶಾಹಿ ರಾಜಕೀಯ ಪಕ್ಷಗಳ ಕಾರ್ಯವಿಧಾನದ ಬಗೆಗೆ ಜನರಲ್ಲಿ ಜಾಗೃತಿ ಮೂಡಬೇಕು. ಪ್ರಜ್ಞಾವಂತರು ಜಾಗೃತಿ ಮೂಡಿಸಬೇಕು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**